




ಹರಿವಾಯುಸ್ತುತಿ

ಮೂಲ ಶ್ಲೋಕಗಳು

ಪ್ರಾಣೇಶ ದಾಸರು ವಿರಚಿತ
ಕನ್ನಡ ಅನುವಾದ

ಆಧ್ಯಾತ್ಮ ಚಿಂತನ ಪ್ರಕಾಶನ
ಬೆಂಗಳೂರು

ನಮಸ್ಕಾರಗಳು. ಈ ಪುಸ್ತಕದ ಅಕ್ಷರ ಜೋಡಣೆಯನ್ನು ಸುಂದರವಾಗಿ ಮಾಡಿದ ಶ್ರೀ ಸುಬ್ಬಣ್ಣಾಚಾರ್‌ರವರಿಗೆ ಕೃತಜ್ಞತೆಗಳು. ಆದಿತ್ಯ ಸ್ಕ್ರೀನ್ಸ್ ಶ್ರೀ ಮುರಳಿಯವರು ಇದಕ್ಕೆ ಸುಂದರವಾದ ಮುದ್ರಣ ಹಾಗೂ ಮುಖಪುಟವನ್ನು ನೀಡಿ ಇದಕ್ಕೆ ಮತ್ತಷ್ಟು ಮೆರಗು ನೀಡಿದ್ದಾರೆ. ಅವರಿಗೆ ನಮ್ಮ ಪ್ರಣಾಮಗಳು.

ಈ ಕೃತಿಯು ಲಿಂಗಸೂರಿನಲ್ಲಿರುವ ಶ್ರೀ ಪ್ರಾಣೇಶದಾಸರ ಗುರುಗಳಾದ ವರದೇಂದ್ರತೀರ್ಥರ ಆರಾಧನೆ ದಿನದಂದು ಬಿಡುಗಡೆಯಾಗುತ್ತಿರುವುದು ಹರಿವಾಯುಗುರುಗಳ ಅನುಗ್ರಹದ ಮುದ್ರೆ ದೊರೆದಂತೆ ಆಗಿದೆ.

ಈ ಕೃತಿಯ ಪ್ರಕಟನೆಗೆ ನನಗೆ ಬೆನ್ನೆಲುಬಾಗಿ ನಿಂತು ನನ್ನ ಕಾರ್ಯಗಳಲ್ಲಿ ಸಹಾಯಮಾಡಿದ ಸಹಧರ್ಮಿಣಿ ಪಲ್ಲವಿ ಜೀವಾಜಿಗೆ ನನ್ನ ಮುಂದಿನ ಕಾರ್ಯಗಳಲ್ಲಿ ಸಹಾಯಮಾಡಲು ಹೆಚ್ಚಿನ ಶಕ್ತಿಯನ್ನು ಕೊಡುವಂತೆ ಶ್ರೀಮಧ್ವಾಂತರ್ಗತ ಕೃಷ್ಣನಲ್ಲಿ ಪ್ರಾರ್ಥಿಸುತ್ತೇನೆ.

- ಪ್ರಕಾಶಕ

ಶ್ರೀ ಮಧ್ವಾಂತರ್ಗತ ಶ್ರೀ ಕೃಷ್ಣಾರ್ಪಣಮಸ್ತು
ಹರಿಃ ಓಂ ಶ್ರೀ
ಶ್ರೀ ಸೀತಾಪತಿ ಶ್ರೀರಾಮಚಂದ್ರ ಪ್ರಸೀದತು

ಶ್ರೀ ಭಾರತೀರಮಣ ಮುಖ್ಯ ಪ್ರಾಣಾಯ ನಮಃ
ಪ್ರಥಮೋ ಹನುಮನ್ನಾಮ ದ್ವಿತಿಯೋ ಭೀಮ ಏವ ಚ ।
ಪೂರ್ಣಪ್ರಜ್ಞಃ ತೃತೀಯಸ್ತು ಭಗವತ್ ಕಾರ್ಯ್ರಸಾಧಕಃ ॥

ಶ್ರೀಪ್ರಾಣೇಶ ವಿಠ್ಠಲ ವಿರಚಿತ-ಹರಿವಾಯು ಸ್ತುತಿಃ
(ಭಾಮಿನಿಷಟ್ಪದಿ)

॥ಒಂದು ದಿನ ಬದರೀ ವನಕೆ ಆ- ।
ನಂದತೀರ್ಥರು ಪೋಪ ಸಮಯದಿ ।
ಅಂದು ತ್ರಿವಿಕ್ರಮ ಪಂಡಿತಾಚಾರ್ಯರು ಅವರ ಕೂಡಾ ।
ಬಂದು ನಾರಯಣನ ಗುಡಿಯಲಿ ।
ನಿಂದಿರಲು ಗುರು ಒಳಗೆ ಪೊಕ್ಕದ ।
ಹೊಂದಿಸಿರೆ ಹೊರಗಿಂದ
ನೋಡ್ದರು ದ್ವಾರ ಸಂದಿಯಲೀ ॥ ೧ ॥

॥ದ್ವಾಪರದಿ ಜಾಂಬುವನು ಕೃಷ್ಣನ ।
ರೂಪದೊಳು ಶ್ರೀರಾಮ ಇನಕುಲ ।
ದೀಪ ದೇಹವ ಕಂಡ ತೆರ ಮಧ್ವಾರ್ಯರೊಳು ಹನುಮಾ ।
ತಾ ಪೊಳೆದ ವೋಲ್ ನೋಡಿ ಅವರಿಗೆ ।
ಪೂಪರಹುದೆಂದೆನುತ ನಿಶ್ಚಯ ।
ಸ್ಥಾಪಿಸುತ ಮೂಲಕ್ಕೆ ಅವತಾರಗಳ ಸ್ತೋತ್ರವನು ॥ ೨ ॥

॥ಮಾಡಿ ವಾಯುಸ್ತುತಿಯ ಗ್ರಂಥವ ।
ನೋಡಿರಂ ತೋರಿಸುತ ಗುರುಗಳ ।
ಬೇಡಿದರು ಪುನಶ್ಚರಣೆಯಿಂದಿದು ಪಠನ ಮಾಳ್ಪರಿಗೆ ।
ನೀಡುವದು ಒಂದೊಂದು ಶ್ಲೋಕಕೆ ।
ಆಡಿದಾ ಆ ಕಾಮ್ಯ ಫಲವ ।
ರೂಢಿಯೊಳು ಪ್ರಖ್ಯಾತವಾಗಲಿ ಎಂದು ಪ್ರಾರ್ಥಿಸಲೂ ॥ ೩ ॥

॥ವರ ತ್ರಿವಿಕ್ರಮ ಪಂಡಿತಾಚಾ- ।
ರ್ಯರು ಸಕಲ ಪಂಡಿತ ಶ್ರೇಷ್ಠರು ।
ಕರ ಮುಗಿದು ಶಿಷ್ಯತ್ವ ಭಾವದಿ ತೋರಲದು ನೋಡೀ ।
ಹರುಷದಲಿ ಪ್ರಸನ್ನರಾಗುತ ।
ವರವು ಬೇಡಿದ ತೆರದ ಭೀಷ್ಟವು ।
ಕರವ ಫಲಗಳ ಕೊಡುತ ಕೇವಲ ವಿಷ್ಣುಸ್ತುತಿ ಹೊರತೂ ॥ ೪ ॥

॥ ಸರುವ ಬಗಿಯಲಿ ತಮ್ಮ ಸ್ತೋತ್ರವು
ಥರವೆ ಯುಕ್ತವಲ್ಲವಿದು ಮಂಗಳ- ।
ತರ ಶ್ರೀ ನರಹರಿ ನಖದ ಮಹಿಮೆಯ ಸ್ತುತಿಯ ಶ್ಲೋಕಗಳು ॥
ಎರಡು ರಚಿಸುತ ಸಂಪುಟಕ್ಕಾ- ।
ಪರಿಯು ಧರಿಯೊಳತೀವ ಕಾಂತಿಲಿ
ನಿರುತದಲಿ ಪವಿತ್ರವನು ನಮ್ಮೆಲ್ಲರನು ಮಾಡುವನು ॥ ೫ ॥

* * * *

ಶ್ರೀ ಮದಾನಂದತೀರ್ಥ ಭಗವತ್ಪಾದರು ಅನುಗ್ರಹ ಮಾಡಿದ

''ಪಾಂತ್ವಸ್ಮಾನ್ ಪುರಹೂತವೈರಿ'' ಮತ್ತು ''ಲಕ್ಷ್ಮೀಕಾಂತಸಮಂತತೋऽಪಿ ಕಲಯನ್''

ಈ ಎರಡು ಶ್ಲೋಕಗಳನ್ನು ಮುಂದಿನ ಪುಟದಲ್ಲಿ ಅವಲೋಕಿಸಬೇಕು.

ಶ್ರೀ ನಖಸ್ತುತಿ, ಶ್ರೀ ವಾಯುಸ್ತುತಿಗಳು ಭಕ್ತಿಜ್ಞಾನ ಘನೀಕರಿಸಿದ ಶಕ್ತಿಪೂರಿತ ಪವಿತ್ರ ಮಂತ್ರಗಳೆನಿಸಿವೆ.

ನಖಸ್ತುತಿಯನ್ನು ಸಂಪುಟಾಕಾರವಾಗಿ ವಾಯುಸ್ತುತಿಯನ್ನು ಪಾರಾಯಣ ಸಮರ್ಪಣ ಮಾಡಿದಾಗ ಮಾತ್ರ, ಸಂಪೂರ್ಣಫಲ ಮತ್ತು ಪ್ರಯೋಜನ ಇಷ್ಟ ಪ್ರಾಪ್ತಿ. ಹೀಗೆ ವಾಯುಸ್ತುತಿಯನ್ನು ಪುನಶ್ಚರಣ ಮಾಡಿದವರು

ಇಹ, ಪರಲೋಕದ ಸುಖವನ್ನು ಪಡೆಯುವರೆಂದು ಜ್ಞಾನಿಗಳ ಅನುಭವದ ದಿವ್ಯವಾಣಿಯನ್ನು ಕೇಳಿದ್ದೇನೆ. ಇದು ಅನುಭಾವಿಕರ ಮಾತು.

ನಖಸ್ತುತಿಯು ಸುಖ ಪರಿಪೂರ್ಣನಾದ, ಜ್ಞಾನಾನಂದಮಯನಾದ, ಸರ್ವೋತ್ತಮನಾದ, ಸರ್ವದೋಷರಹಿತನಾದ,

ಅನಂತಕಲ್ಯಾಣ ಗುಣ ಪರಿಪೂರ್ಣ,ಜಡಚೇತನರಿಗೆ-ಚೈತನ್ಯರೂಪನಾದ ಶ್ರೀನರಹರಿಯ ನಖಗಳ ಸ್ತೋತ್ರವಾಗಿದೆ. ವಾಯುಸ್ತುತಿಯು ಶ್ರೀಮತ್ ಕವಿ ಕುಲತಿಲಕ ಶ್ರೀತ್ರಿವಿಕ್ರಮ ಪಂಡಿತಾರ್ಯರು, ತಾವು ಕಂಡಂತೆ

ಶ್ರೀ ಮದಾಚಾರ್ಯರ-ಮೂರು ಅವತಾರಗಳ ನಿಜಸ್ವರೂಪವನ್ನು ವರ್ಣಿಸಿದ, ಗೀರ್ವಾಣ ಭಾಷಾ ಪ್ರೌಢಶೈಲಿ ಕೃತಿ ಅನುಪಮ,ಅಪ್ರತಿಮವಾಗಿದೆ. ನನ್ನ ಚಿತ್ತ, ಮನಸ್ಸು, ಅಂತಃಕರಣ ಶುದ್ಧಿಗಾಗಿ ಇದನ್ನು ಸಂಗ್ರಹಿಸಿದ್ದೇನೆ. ಪವಮಾನನು ನನ್ನ ಮನ-ಭಾವನೆಗಳನ್ನು ಪಾವನಗೊಳಿಸಲೆಂಬ ಪ್ರಾರ್ಥನೆಯೊಂದಿಗೆ ಅವರಿಗೆ ಶ್ರೀಹರಿಗೆ ಅನಂತ ಪ್ರಣಾಮಗಳು.

॥ಶ್ರೀ ಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು ॥
ಕೃಷ್ಣಬಾಲಿಹಾಳ

ಹರಿಃ ಓಂ
ಶ್ರೀ ಲಕ್ಷ್ಮೀನರಸಿಂಹಾಯನಮಃ
ಶ್ರೀ ಹರಿ ವಾಯುಸ್ತುತಿಃ

ಪಾಂತ್ವಸ್ಮಾನ್ ಪುರುಹೂತ-ವೈರಿ-ಬಲವನ್ ಮಾತಂಗ-ಮಾದ್ಯದ್-ಘಟಾ
ಕುಂಭೋಚ್ಚಾದ್ರಿ-ವಿಪಾಟನಾಧಿಕ-ಪಟು-ಪ್ರತ್ಯೇಕ-ವಜ್ರಾಯಿತಾಃ ।
ಶ್ರೀಮತ್-ಕಂಠೀರವಾಸ್ಯ-ಪ್ರತತ-ಸು-ನಖರಾದಾರಿತಾರಾತಿ-ದೂರ-
ಪ್ರಧ್ವಸ್ತ-ಧ್ವಾಂತ-ಶಾಂತ-ಪ್ರವಿತತ-ಮನಸಾಭಾವಿತಾಭೂರಿಭಾಗೈಃ ॥

ಲಕ್ಷ್ಮೀ-ಕಾಂತ ಸಮಂತತೋಽಪಿ ಕಲಯನ್ ನೈವೇಶಿತುಸ್ತೇ ಸಮಂ
ಪಶ್ಯಾಮ್ಯುತ್ತಮ-ವಸ್ತುದೂರ-ತರತೋಽ-ಪಾಸ್ತಂ ರಸೋ ಯೋಽಷ್ಟಮಃ ।
ಯದ್-ರೋಷೋತ್ಕರ-ದಕ್ಷ-ನೇತ್ರ-ಕುಟಿಲ-ಪ್ರಾಂತೋತ್ಥಿತಾಗ್ನಿ-ಸ್ಫುರತ್
ಖದ್ಯೋತೋಪಮ-ವಿಸ್ಫುಲಿಂಗ-ಭಸಿತಾಃ ಬ್ರಹ್ಮೇಶ-ಶಕ್ರೋತ್ಕರಾಃ ॥

ತಾತ್ಪರ್ಯಃ-
ಭಗವಂತನ ನಖಗಳು ದುಷ್ಟದೈತರನ್ನು ನಿಗ್ರಹಿಸುವ ಪ್ರಕಾಶಿತ ವಜ್ರಗಳಾಗಿದ್ದರೆ, ದೇವಾನುದೇವತೆಗಳಿಗೆ ಸಕಲ ಇಷ್ಟಾರ್ಥಗಳನ್ನು ನೀಡುವ ಚಿಂತಾಮಣಿಗಳಾಗಿವೆ. ನರಹರಿಯ ನಖಗಳು ದುಷ್ಟರನ್ನು ಮರ್ದಿಸುವಂತೆ ಭಕ್ತರ ಅಭೀಷ್ಟಗಳನ್ನು ಪೂರೈಸುತ್ತವೆ ಎಂದು ಶ್ರೀಮಧ್ವಾಚಾರ್ಯರು ನಖಸ್ತುತಿಯಲ್ಲಿ ವರ್ಣಿಸಿದ್ದಾರೆ. ಪ್ರಳಯಕಾಲದಲ್ಲಿ ಪರಮಾತ್ಮನ-ರೋಷಾತಿಶಯದಿಂದ ಕೂಡಿದ ಕಣ್ಣಿನ ಕುಡಿನೋಟದಿಂದ ಉದ್ಭವಿಸಿದ (ಸೂರ್ಯನಿಗೆ ಹೋಲಿಸಿದರೆ ದೀಪದ ಹುಳುವಿನಿಂದ ಹೊರಟ ಕಿಡಿಗಳೋಪಾದಿಯಲ್ಲಿನ ಸಣ್ಣ) ಕಿಡಿಗಳಿಂದ (ಸಣ್ಣ ಕಿಡಿಗೇ ಇಷ್ಟು ಶಕ್ತಿಯಿದ್ದರೆ ಇನ್ನು ಪೂರ್ಣಶಕ್ತಿಯ ಸ್ವರೂಪವೆಂತೆಷ್ಟು? ಎಂಬ ಕೈಮುತ್ಯ ನ್ಯಾಯವನ್ನು ಗ್ರಹಿಸಬೇಕು.) ಬ್ರಹ್ಮಾದಿದೇವತೆಗಳ ಸಮೂಹಗಳು ಭಸ್ಮೀಭೂತರಾಗುವವೆಂದು ಶ್ರೀಮಧ್ವಾಚಾರ್ಯರು ವರ್ಣಿಸಿದ್ದಾರೆ. ಆದರೆ ಪರಮಾತ್ಮನು ಕರುಣಾವಾರಿಧಿ; ಜಗತ್ತನ್ನು ಲಯ ಮಾಡುವ ಕಾರ್ಯದಲ್ಲಿ ಭಗವಂತನ, ಸತ್ಯ ಸಂಕಲ್ಪ ವಿಶೇಷವನ್ನು ಉತ್ಪ್ರೇಕ್ಷೆ ಮಾಡಿ ಹೇಳಲಾಗಿದೆ. ಆದರೆ ತನ್ನವರಿಗೆ ಆನಂದವನ್ನೂ ಕೊಡುತ್ತಾನೆ.

॥ ಶ್ರೀ ಗುರುಮಧ್ವಾಂತರ್ಗತ ಕೃಷ್ಣಾರ್ಪಣಮಸ್ತು ॥

॥ಶ್ರೀ ಸೀತಾರಾಮ ಕೃಷ್ಣ ವೇದವ್ಯಾಸ ಪ್ರಸೀದತು ॥
ಶ್ರೀ ಹನುಮ, ಭೀಮ,ಮಧ್ವಾಚಾರ್ಯ ನಮೋ ನಮಃ

ಶ್ರೀ ವಿಜಯದಾಸಕೃತ-ಸ್ತೋತ್ರಭಾಗ ಸುಳಾದಿಗಳು

ಶ್ರೀ ಪ್ರಾಣದೇವರ ಮಹಿಮಾ ಸುಳಾದಿ (೬೬), ಧ್ರುವ ತಾಳ
॥ ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ, । ಜ್ಞಾನ ಮಯಾ, ಸತ್ವ ಶರೀರ, ಸಮೀರ, ।ಆನಂದ ಸಾಂದ್ರ, ಹರಿ ನಂದನ, ಪವಮಾನ, । ಮಾನ ದಭಿ-ಮಾನಿಯೆ, ವಾಣಿ ಪ್ರಿಯಾ, । ನೀನೆ ಸರ್ವರಲ್ಲಿ ಗೀರ್ವಾಣರಿಗೆ ಮೊದಲು, । ನಾನಾ ಪ್ರಕಾರ ಜೀವಿಗಳಾಧಾರ, । ಸ್ನಾನ ಜಪ ತಪ ಹೋಮ । ಮೌನ ತೀರ್ಥಯಾತ್ರೆ । ನೀ ನಡೆಸಲದರಿಂದ ಸಿದ್ಧಿಪವು, । ನೀನೆಲ್ಲಿ ಅಲ್ಲಿ ಶ್ರೀ ನಾರಯಣನಿಪ್ಪ , ಏನೆಂಬೆ ನಿನ್ನಯ ಕರ್ತೃತನಕೆ, । ಕೋಣೆವಿಕೋಣೆಯಲ್ಲಿ ಸರ್ವ ವ್ಯಾಪಾರ ಪಂಚ । ಪ್ರಾಣ ಜನಕ ವಾಯು ನಿನ್ನದಯ್ಯ, । ದಾನವಾಮರರ ಮಧ್ಯಬಂದ ಅಘೋರ ವಿಷ ।ಪಾನವನ್ನು ಮಾಡಿದ ಪ್ರಭಂಜನಾ, । ದೀನ ವತ್ಸಲ ನಮ್ಮ ವಿಜಯ ವಿಠ್ಠಲನಂಘ್ರಿ- । ರೇಣು ಶಿರದಲ್ಲಿ ಇಟ್ಟ(ದ್ಯು)ರೈರಮಣ ॥ ೧ ॥

ಅಟ್ಟ ತಾಳ ॥
ತಂದೆ ಈತನು ಕಾಣೊ ತಾಯಿ ಈತನು ಕಾಣೊ ।
ಬಂಧು ಬಳಗ ಸರ್ವಾರ್ಥವು ಈತನು
ಹಿಂದೆ ಮುಂದೆ ನಮಗಾಧಾರ ಈತನು ।
ಎಂದೆಂದಿಗೆ ಸಂಬಂಧಿಗ-ನೀತನು । ....
ಜತೆ ॥

ಮೂರವತಾರದ ಗುರುವೆ ಸುರ ತರುವೆ ।
ವಾರವಾರಕ್ಕೆ ವಿಜಯ ವಿಠ್ಠಲನ್ನ ಪ್ರತಿಬಿಂಬಾ ॥

ಶ್ರೀ ಹರಿ ವಾಯು ಸ್ತುತಿ

ಶ್ಲೋಕ (೧)

ಶ್ರೀಮದ್-ವಿಷ್ಣ್ವಂಘ್ರಿ-ನಿಷ್ಠಾತಿಗುಣ-ಗುರುತಮ-ಶ್ರೀಮದಾನಂದ ತೀರ್ಥ-
ತ್ರೈಲೋಕ್ಯಾಚಾರ್ಯ-ಪಾದೋಜ್ವಲ-ಜಲಜ-ಲಸತ್ ಪಾಂಸವೋऽಸ್ಮಾನ್
ಪುನಂತು।
ವಾಚಾಂ ಯತ್ರ ಪ್ರಣೇತ್ರೀ-ತ್ರಿಭುವನಮಹಿತಾ - ಶಾರದಾ - ಶಾರದೇಂದು-
ಜ್ಯೋತ್ಸ್ನಾ-ಭದ್ರ-ಸ್ಮಿತಶ್ರೀ-ಧವಳಿತ-ಕಕುಭಾಪ್ರೇಮ ಭಾರಂ ಬಭಾರ ॥ ೧ ॥

ಶ್ರೀ ಪ್ರಾಣೇಶ ದಾಸರ ಕೃತಿ --
(ಭಾಮಿನಿಷಟ್ಪದಿ)

ಸಕಲ ವೇದಾಕ್ಷರದಿ ನಿಯಾ- ।
ಮಕಳೆನಿಸಿ ತ್ರೈಲೋಕದವರಿಂ- ।
ದಖಿಳ ಪೂಜೆಗೊಂಡು ಶರತ್ಕಾಲೇಂದುಪ್ರಭೆ ಪೋಲ್ವ ।
ಸುಖದ ಶುಭ ಕಿರಿ ನಗೆಯ ಬೆಳಗುವ ।
ಕಕುಭಗಳು(ಳ್ಳ ?) ಭಾರತಿಯ ಪತಿ ಪದ- ।
ನಖಧೂಳಿಗಳಲ್ಲಿ ಅತಿಶಯ ತೋಷ ಧರಿಸಿದಳು ॥ ೬ ॥

ತಾತ್ಪರ್ಯ -
ಸತ್ಯ ಲೋಕ, ಮುಂತಾದ ಮೇಲಿನ ಎಲ್ಲಾ ಲೋಕಗಳಲ್ಲಿರುವ ರುದ್ರಾದಿ ದೇವತೆಗಳಿಗೆ, ಪಾತಾಳ ಮುಂತಾದ ಲೋಕಗಳಲ್ಲಿರುವ ಶೇಷ ಮುಂತಾದ ದೇವತೆಗಳಿಗೆ, ಭೂ ಲೋಕದ ಸಜ್ಜನರಿಗೆ ಶಾಸ್ತ್ರ ಅರ್ಥ ಉಪದೇಶ ಮಾಡುತ್ತಿರುವ ಸರ್ವಜ್ಞರಾದ ಶ್ರೀ ಮಧ್ವಾಚಾರ್ಯರು "ತ್ರೈಲೋಕ್ಯಾಚಾರ್ಯ'' ಎಂದು ಪ್ರಖ್ಯಾತರಾಗಿದ್ದಾರೆ.ಇವರ ಪಾದ ಕಮಲಗಳ-ಪ್ರಕಾಶಿಸುವ ಪಾದ ಧೂಳಿ ನಮ್ಮನ್ನು ಪಾವನಗೊಳಿಸಲಿ. ಶ್ರೀ ಹರಿಯು, ಲಕ್ಷ್ಮೀದೇವಿಯು, ವಾಯುದೇವರು, ಶಾರದಾದೇವಿ(ಭಾರತೀದೇವಿ) ಇವರು ಸಕಲ ಜೀವಗಳ ಮಾತು, ಮನಸ್ಸು, ಚಲನವಲನಕ್ಕೂ ಮುಖ್ಯ ನಿಯಾಮಕರು. ಸಕಲ ಹರಿ ಭಕ್ತರು, ಜಗದ್ಗುರುಗಳಾದ ಶ್ರೀ ವಾಯುದೇವರ ಪತ್ನಿಯಾದ ಶ್ರೀ ಶಾರದಾ ದೇವಿಯನ್ನು ಭಕ್ತಿಯಿಂದ ಪೂಜಿಸುತ್ತಿರುವಾಗ, ಶಾರದದೇವಿಯು ಪ್ರಸನ್ನ ವದನಳಾಗಿ ಮುಗುಳುನಗೆ ನಕ್ಕಾಗ ಶರತ್ಕಾಲದ ಚಂದ್ರನಂತೆ ನಗೆ ಬೆಳದಿಂಗಳು ಪ್ರಕಾಶಿಸಿತು. ಆ ತಿಂಗಳ ಕಾಂತಿಯಿಂದ ಹತ್ತು ದಿಕ್ಕುಗಳು(ಕಕುಭ) ಪ್ರಕಾಶಿತವಾದವು, ಹೀಗೆ ರುದ್ರಾದಿಗಳನ್ನು, ಸಕಲ ಭಕ್ತರನ್ನು ಅನುಗ್ರಹಿಸುತ್ತಿರುವ ಶಾರದಾ ದೇವಿಯು ಶ್ರೀ ಮಧ್ವಾಚಾರ್ಯರ ಪಾದ ಧೂಳಿಯಲ್ಲಿ ಅತ್ಯಂತ ಭಕ್ತಿ ಭಾವೋದ್ರೇಕದಲ್ಲಿ ತುಂಬಿ ತುಳುಕಿ ಶರಣಾಗಿದ್ದಾಳೆ. ಇಂಥ ಜ್ಞಾನ ಕಾಂತಿಯಲ್ಲಿ ಮನ ಮೀಯುವಂತೆ ಭಾರತಿಯು ನನಗೆ ಕರುಣಿಸಲಿ.

ಉತ್ಕಂಠಾಕುಂಠ-ಕೋಲಾ-ಹಲ-ಜವ-ವಿದಿತಾ-ಜಸ್ರ ಸೇವಾನುವೃದ್ಧ-।
ಪ್ರಾಜ್ಞಾತ್ಮ-ಜ್ಞಾನ-ಧೂತಾಂಧ ತಮಸ-ಸುಮನೋ ಮೌಳಿ-ರತ್ನಾವಲೀನಾಮ್ ।
ಭಕ್ತ್ಯುದ್ರೇಕಾವಗಾಢ-ಪ್ರಘಟನ - ಸಘಟಾತ್ಕಾರ-ಸಂಘೃಷ್ಯಮಾಣ-
ಪ್ರಾಂತ-ಪ್ರಾಗ್ರ್ಯಾಂಘ್ರಿ-ಪೀಠೋತ್ಥಿತ-ಕನಕ-ರಜಃಪಿಂಜರಾರಂಜಿತಾಶಾಃ ॥ ೨ ॥

ದಿವಿಕೆ ಬಹು ಕಲಕಲ ಧ್ವನಿ ।
ತವಕದಿಂ ತಿಳಿದನಿಶಸೇವೆಯು ।
ಕವಲು ಇಲ್ಲದೆ ಮಾಡಿ ನಾರಾಯಣನ ಜ್ಞಾನದಲಿ ।
ಕವಿದು ತಮ ಲೋಕಗಳ ಕಾಣದ ।
ದಿವಿಜರೆಲ್ಲರ ಮೌಳಿಯಲ್ಲಿಹ ।
ರವಿ ಪ್ರಕಾಶದ ಪೋಲು ತೋರುವ ರತ್ನ ಪಂಕ್ತಿಗಳೂ ॥ ೭ ॥

ಪರಮ ಭಕ್ತ್ಯುದ್ರೇಕ ದೃಢದೊ- ।
ಬ್ಬರಿಗೆ ಒಬ್ಬರು ಸಂಘಟಿಸಿ ಈ-
ಧರಿದು ಬಂದೊತ್ತುತ್ತಿರೆ ಸಘಟತ್ಕಾರ ಶಬ್ದದಲೂ ।
ವರುಸು-ವಂಚುಗಳು-ತ್ತು-ಮಾಂಘ್ರಿಲಿ
ಹೊರುಟುವ ಸುರಜ-ದಿಶವು(ದಿಂ?) ಬೆಳಗುವ
ಹರುಷತೀರ್ಥರ ಪಾದಧೂಳಿ ಮಾಡುವದು ಸುಪವಿತ್ರಾ ॥ ೮ ॥

ತಾತ್ಪರ್ಯಃ-
ಗರುಡ, ಶೇಷ-ರುದ್ರ, ಇಂದ್ರಾದಿ ದೇವತೆಗಳು, ಋಷಿಗಳು, ಮುನಿಗಳು, ಭಕ್ತಾಗ್ರೇಸರು, ಶ್ರೀ ಮಧ್ವಾಚಾರ್ಯರ ಸೇವೆಗೆ, ಉತ್ಸಾಹದಿಂದ ನಾಮುಂದು ನೀಮುಂದು ಎಂದು ಮುನ್ನುಗ್ಗುತ್ತಿರುವಾಗ ನೂಕಾಟದ ಸಘಟತ್ಕಾರ ಶಬ್ದ ಕೇಳಬರುತ್ತದೆ. ಮಧ್ವಶಾಸ್ತ್ರ ತತ್ವಜ್ಞಾನವೆಂಬ ಬೆಳಕು ಅಜ್ಞಾನ ಎಂಬ ಕತ್ತಲೆಯನ್ನು ಓಡಿಸುತ್ತದೆ. ಭಕ್ತರ ಹೃದಯದಲ್ಲಿ ಪ್ರಾಣದೇವರ ಪ್ರೇರಣೆಯಿಂದ ಜ್ಞಾನ ವೃದ್ದಿಯಾಗಲು ಸ್ಫೂರ್ತಿಬರುತ್ತದೆ. ಈ ರೀತಿ ಭಕ್ತಿಯ ಉದ್ರೇಕದಿಂದ ದೇವತೆಗಳು ಶ್ರೀ ಮಧ್ವರ ಪಾದಕಮಲಗಳಿಗೆ ನಮಸ್ಕರಿಸುವಾಗ ದೇವತೆಗಳ ರತ್ನಖಚಿತ ಸುವರ್ಣ ಕೀರಿಟಗಳು, ಪೂರ್ಣಪ್ರಜ್ಞರ ಪಾದುಕೆಗಳಿಗೆ ತಟ್ಟಿದಾಗ ಬಂಗಾರದ ಪುಡಿ ಹೊರಬೀಳುತ್ತದೆ. ಈ ಸುವರ್ಣ ಪುಡಿಯಿಂದ, ಆಚಾರ್ಯರ ಪಾದ ಧೂಳಿ ವರ್ಣರಂಜಿತವಾಗಿ, ದಶದಿಕ್ಕುಗಳಲ್ಲಿಯು ವರ್ಣಮಯವಾಗಿ ಕಾಣುತ್ತದೆ. ಇಂಥ ಪಾದ ಧೂಳಿ ನನ್ನನ್ನು ಪಾವನಗೊಳಿಸಲಿ.

(ವರುಸುವಂಚುಗಳು = ಸಂಘೃಷ್ಯಮಾಣಪ್ರಾಂತಪ್ರಾಗ್ರ್ಯಾಂಘ್ರಿಪೀಠ;
ಉತ್ತಮಾಂಘ್ರಿಲಿ=ಸುಮನೋಮೌಳಿ; ಸುರಜದಿಶ = ಕನಕರಜಃಪಿಂಜರಾರಂಜಿತಾಶಾಃ)

ಶ್ಲೋಕ(೩)

ಜನ್ಮಾಧಿ-ವ್ಯಾಧ್ಯುಪಾಧಿ-ಪ್ರತಿಹತಿ-ವಿರಹ-ಪ್ರಾಪಕಾಣಾಂ ಗುಣಾನಾ-
ಮಗ್ರ್ಯಾಣಾಮರ್ಪಕಾಣಾಂ ಚಿರಮುದಿತ ಚಿದಾನಂದ-ಸಂದೋಹದಾನಾಮ್ ।
ಏತೇಷಾಮೇಷ ದೋಷ-ಪ್ರಮುಷಿತ ಮನಸಾಂ ದ್ವೇಷಿಣಾಂ ದೂಷಕಾಣಾಂ
ದೈತ್ಯಾನಾಮಾರ್ತಿಮಂಧೇ ತಮಸಿ ವಿದಧತಾಂ ಸಂಸ್ತವೇ ನಾಸ್ಮಿ ಶಕ್ತಃ ॥ ೩ ॥

ಜನನ ಮನೊ ವ್ಯಥೆ ವ್ಯಾಧಿಗಳು, ಕಾ- ।
ರಣದ ಅಜ್ಞಾನವು ಮರಳೆ ಬಾ-।
ಹಣವು ಭೇದಿಸಿ ಶ್ರೇಷ್ಠವಾಗಿಹ ಭಕ್ತಿ ಜ್ಞಾನದಲೀ ।
ಮಿನುಗುತಿಹ ಜ್ಞಾನ್ಹರುಷ ಸುಖ ಮಯ ।
ಮನುಜರೊಳು ಯೋಗ್ಯರಿಗೆ ದಯದಲಿ ।
ದಿನ-ದಿನ ವ್ಯಕ್ತಿಯನು ಮಾಡುವ ಗುರುವು ಪವಮಾನ ॥ ೯ ॥

ಸುಳ್ಳು ಜ್ಞಾನದಿ ಕದಡಿಸುವ ಮನ ।
ಉಳ್ಳ ದ್ವೇಷದಿ ದೂಷಿಸುವರನ ।
ಎಲ್ಲ ದೈತ್ಯರ ಅಂಧತಮಸಿಲಿ ಬಹಳ ಕಾಲವನೂ(ದಲಿ?) ।
ಅಲ್ಲಿ ಇರಿಸುವ ದುಃಖ ಕೊಡುತಲಿ ।
ಕೊಲ್ಲಿಸುವ ವಾತಾಂಘ್ರಿ ಸ್ತುತಿಯನು ।
ಬಲ್ಲೆನೆ ಚೆನ್ನಾಗಿ ಮಾಡಲು ಶಕ್ತ ನಾನಲ್ಲಾ ॥ ೧೦ ॥

ತಾತ್ಪರ್ಯಃ-

ಈ ಸಂಸಾರದಲ್ಲಿ ಜನ್ಮವೆತ್ತಿದಾಗ, ಈ ದೇಹಕ್ಕೆ ಆಧಿ-ವ್ಯಾಧಿ, ವ್ಯಥೆ, ಅಜ್ಞಾನ, ಜನನ, ಮರಣ ಮೇಲಿಂದ ಮೇಲೆ ಸಂಘಟಿಸುತ್ತವೆ. ಇವುಗಳಿಗೆ ಗುರಿಯಾಗಿ ಮಾನವನು ಸದಾ ದುಃಖಿಯಾಗಿರುತ್ತಾನೆ. 'ಪುನರಪಿ ಜನನಂ, ಪುನರಪಿ ಮರಣಂ' ಎಂಬ ಈ ಸುಳಿಯಿಂದ ಪಾರಾಗಲು ಕೇವಲ ಶ್ರೀಹರಿಯಲ್ಲಿ ಭಕ್ತಿ ಜ್ಞಾನವುಳ್ಳವರಾಗಬೇಕು. (ಮಹಾತ್ಮ್ಯಜ್ಞಾನ ಪೂರ್ವಕಂ ಸರ್ವತೋಧಿಕವಾದ ಸದೃಢಭಕ್ತಿಃ ಗುರುಗಳ ದಯೆಯಿಂದ ಇಂತಹ ಭಕ್ತಿ ಯೋಗ್ಯರಿಗೆ ಮಾಡಲು ಸಾಧ್ಯ). ಶ್ರೀ ಪೂರ್ಣಪ್ರಜ್ಞರ ಪಾದಧೂಳಿಯ ಸಂಸರ್ಗಕ್ಕೆ ಶ್ರೀ ವಾಸುದೇವನ ಧ್ಯಾನಸಮುದ್ರದಲ್ಲಿರಿಸುತ್ತ ಈ ಸಂಸಾರ ಸಾಗರವನ್ನು ಸುಲಭವಾಗಿ ದಾಟಿಸುವ ಶಕ್ತಿ ಇದೆ, ಎಂದಾಗ ಅದನ್ನು ಎಷ್ಟು ವರ್ಣಿಸಿದರೂ ಮನಸ್ಸು ತಣಿಯದು. ಹರಿಯನ್ನು, ಹರಿಭಕ್ತರನ್ನು, ಸಚ್ಛಾಸ್ತ್ರಗಳನ್ನು ಜರಿದು ದ್ವೇಷಿಸುವವರಿಗೆ, ಸದಾದೋಷವನ್ನೇ ಹೇಳುವ ಅಯೋಗ್ಯರಿಗೆ ಎಂದೆಂದೂ ಅಂಧತಮಸ್ಸು, ನರಕಕ್ಕೆಯ್ದಿಸುವವು ಈ ಶ್ರೀಮಧ್ವಾಚಾರ್ಯರ ಪಾದಧೂಳಿಗಳು.

ಶ್ಲೋಕ(೪)

ಆಸ್ಯಾವಿಷ್ಕರ್ತುಕಾಮಂ ಕಲಿ-ಮಲ-ಕಲುಷೇಽಸ್ಮಿನ್ ಜನೇ ಜ್ಞಾನಮಾರ್ಗಂ
ವಂದ್ಯಂ ಚಂದ್ರೇಂದ್ರ-ರುದ್ರ-ದ್ಯುಮಣಿ-ಫಣಿ-ವಯೋ ನಾಯಕಾದ್ಯೈರಿಹಾದ್ಯ ।
ಮಧ್ವಾಖ್ಯಂ ಮಂತ್ರ-ಸಿದ್ಧಂ ಕಿಮುತ ಕೃತವತೋ ಮಾರುತಸ್ಯಾವತಾರಂ
ಪಾತಾರಂ ಪಾರಮೇಷ್ಠ್ಯಂ ಪದಮಪ-ವಿಪದಃ ಪ್ರಾಪ್ತುರಾಪನ್ನ ಪುಂಸಾಮ್ ॥ ೪ ॥

(ಭಾಮಿನಿಷಟ್ಪದಿ)

ಕ್ಷೋಣಿಯೊಳು, ಕಲಿ ಕೃತದ ಮಿಥ್ಯಾ- ।
ಜ್ಞಾನದೋಷದಿ ದುಷ್ಟರಾಗಿಹ ।
ಮಾನವರೊಳಧಿಕಾರಿ ಜನರಿಗೆ ತತ್ವಮಾರ್ಗವನು ।
ಕಾಣಿಸುವ ಇಚ್ಛುಳ್ಳ ದಿವಿಜರು ।
ಏಣಲಾಂಛನ ಇಂದ್ರ ಶಿವ ರವಿ ।
ಶ್ರೀನಿವಾಸನ ಮಂಚ ಗರುಡಾದಿಗಳ ಕೈಯಿಂದಾ ॥ ೧೧ ॥

ಬಂದು(?) ಮೊರೆ ಹೊಕ್ಕಂಥ ಪುರುಷರ ।
ಚಂದದಿಂ ರಕ್ಷಿಪ ಬಳಿತ್ಥಾ- ।
ದಿಂದ ಪ್ರತಿಪಾದ್ಯ ಮಧ್ವಾವತಾರವನು ಮಾಡ್ದಾ ।
ಮುಂದೆ ಬ್ರಹ್ಮನಪದವಿಯೈದುವ- ।
ಎಂದು ವಿಪತ್ತುಗಳಿಲ್ಲದ ಪುರನ ।
ಇಂದು ಸ್ತುತಿಸಲು ಶಕ್ತನಲ್ಲಂದ್ಹೇಳಬೇಕೇನೂ ॥೧೨ ॥

ತಾತ್ಪರ್ಯಃ-

ಕಲಿಯ ಸನ್ನಿಧಾನದಿಂದ, ಉಂಟಾದ ದೋಷಗಳಿಂದ ಮಲಿನ ವಾಗಿರುವ ಸಜ್ಜನರಲ್ಲಿ ಜ್ಞಾನದ ಹಾದಿಯನ್ನು ತೋರಿಸುವದಕ್ಕಾಗಿ ವಾಯುದೇವರು ಮಧ್ವ ಎಂಬ ರೂಪದಿಂದ ಅವತರಿಸಿರುವರು. ಚಂದ್ರೇಂದ್ರ, ರುದ್ರ, ದ್ಯುಮಣಿ ಫಣಿವಯೋನಾಯಕಾದ್ಯೈಃ (ಏಣಲಾಂಛನ ಇಂದ್ರ ಶಿವ ರವಿ ಶ್ರೀನಿವಾಸನ ಮಂಚ ಗರುಡಾದಿಗಳು) ಎಂಬ ಈ ಎಲ್ಲ ದೇವತೆಗಳು ಶ್ರೀಹರಿಯಲ್ಲಿ ವಿಭಿನ್ನ ಭಕ್ತಿ, ಸದ್ಗುಣಗಳ ಅಪರಿಪೂರ್ಣತೆ, ದೋಷಯುಕ್ತರೆನಿಸಿದ್ದಾರೆ. ಆದರೆ ಮಧ್ವರು, ಋಜುಗಣಸ್ಥರು, ಕಲಿ ಪ್ರವೇಶವಿಲ್ಲದವರು, ಅವಿಚ್ಛಿನ್ನ ಭಕ್ತರು, ದೋಷದೂರರಾಗಿದ್ದಾರೆ. ಬಳಿತ್ಥಾ ಸೂಕ್ತದಿಂದ, ಋಗ್ವೇದದಿಂದ ಸ್ತುತಿಸಲ್ಪಟ್ಟವರು(ಮಂತ್ರಸಿದ್ಧಂ = ಬಳಿತ್ಥಾ- ದಿಂದ ಪ್ರತಿಪಾದ್ಯ), ಸುಜನರಿಗೆ ಜ್ಞಾನ ಮಾರ್ಗತೋರಿಸಿ(ಜ್ಞಾನಮಾರ್ಗಂ ಆವಿಷ್ಕರ್ತುಕಾಮಂ = ಮಾನವರೊಳಧಿಕಾರಿ ಜನರಿಗೆ ತತ್ವಮಾರ್ಗವನು ಕಾಣಿಸುವ ಇಚ್ಛುಳ್ಳ), ಆಪತ್ತಿನಿಂದ ಕಾಪಾಡುವವರು (ಪಾತಾರಂ), ರುದ್ರಾದಿ ಅಮರರಿಂದ ವಂದ್ಯರು, ಆದ ಶ್ರೀಮಧ್ವರನ್ನು, ಅವರ ಕರುಣೆ, ಚರಣಪಾದಧೂಳಿಗಳ ಮಹಾತ್ಮೆಯನ್ನು ಪೂರ್ಣವಾಗಿ ವರ್ಣಿಸಲು ಶಕ್ತನಲ್ಲವೆಂದು ಬೇರೆ ಹೇಳಬೇಕಾಗಿಲ್ಲವೆಂದು ತಿಳಿಸಿದ್ದಾರೆ. ಮಧ್ವರ ಚರಣಗಳಿಗೆ ಶರಣು ಬಂದವರಿಗೆ(ಆಪನ್ನಪುಂಸಾಮ್) ಆಪತ್ತುಗಳೇ ಇಲ್ಲ.

ಶ್ಲೋಕ(೫)

ಉದ್ಯದ್-ವಿದ್ಯುತ್-ಪ್ರಚಂಡಾಂ ನಿಜ-ರುಚಿ-ನಿಕರ-ವ್ಯಾಪ್ತ-ಲೋಕಾವಕಾಶೋ
ಬಿಭ್ರದ್ ಭೀಮೋ ಭುಜೇಯೋಽಭ್ಯುದಿತ-ದಿನಕರಾಭಾಂಗದಾಢ್ಯ-ಪ್ರಕಾಂಡೇ ।
ವೀರ್ಯೋದ್ಧಾರ್ಯಾಂ ಗದಾಗ್ರ್ಯಾಮಯಮಿಹಸುಮತಿಂ ವಾಯುದೇವೋ ವಿದಧ್ಯಾದ್
ಅಧ್ಯಾತ್ಮ- ಜ್ಞಾನ-ನೇತಾ ಯತಿವರಮಹಿತೋ ಭೂಮಿ-ಭೂಷಾಮಣಿರ್ಮೇ ॥ ೫ ॥

(ಭಾಮಿನಿ ಷಟ್ಪದಿ)

ಸ್ವರುಚಿ ಸಮುದಾಯವನು ಲೋಕದಿ ।
ಹರವಿದ ಪುಪನು ಭೀಮ ನಾಮದಿ
ಧರಿಯೊಳುದಿಸುತ ಮಿಂಚಿನೋಲ್ ಪ್ರಕಾಶ ಉಳ್ಳಂಥಾ ।
ಭರದಿ ಬಾಹು ಬಲದಿಂದೆತ್ತುವ ।
ವರಗದೆಯ ಚನ್ನಾಗಿ ಉದಿಸುವ ।
ತರಣಿ ಕಾಂತಿಯ ತೆರದ ಬಾಹುಪುರಿಯುಕ್ತ ತೋಳುಗಳು ॥ ೧೩ ॥

ಖ್ಯಾತ ವಾಗಿಹ ಭುಜದಿ ಧರಿಸಿದ ।
ಆತನೇ ಯತಿ ಶ್ರೇಷ್ಠರಿಂದಲಿ ।
ನೀತ ಪೂಜೆಯಗೊಂಡು ಹರಿ ವಿಷಯಕದ ಜ್ಞಾನಕ್ಕೆ ।
ನೇತ ಭೂಷಾ ಮಣಿ ಯೆನಿಪ ಈ ।
ಭೂತಳಕೆ ಮಾರುತನೆ ನಿನ್ನಯ ।
ಸ್ತೋತ್ರರ ಮಾಳ್ಪಂಥ ಸುಮತಿಯ ಕೊಡುವದೀಗೆನಗೆ ॥ ೧೪ ॥

ತಾತ್ಪರ್ಯಃ-

ಶ್ರೀ ವಾಯುದೇವರು ಹನುಮ, ಭೀಮ, ಮಧ್ವ, ಎಂಬ ಮೂರು ರೂಪಗಳನ್ನು ಸ್ವೀಕರಿಸಿದ್ದು, ಬಳಿತ್ಥಾ ಸೂಕ್ತ ಮುಂತಾದ ಪ್ರಮಾಣಗಳಿಂದ ತಿಳಿಯುತ್ತದೆ. ಈ ಅವತಾರಗಳಲ್ಲಿ ಜ್ಞಾನ ಸಾಮರ್ಥ್ಯ ಮತ್ತು ಶತ್ರುನಿಗ್ರಹ ಸಾಮರ್ಥ್ಯ ಪ್ರದರ್ಶಿಸಲ್ಪಟ್ಟಿದೆ. ಇಲ್ಲಿ ಭೀಮಸೇನದೇವರ ವೀರ ಮೂರುತಿಯನ್ನು ''ಗದಾಗ್ರ್ಯಾಂ'' ಅತ್ಯುತ್ತಮವಾದ ಗದೆಯನ್ನು, ಅದರಿಂದ ಕಾಂತಿಬೀರುವ ಮಿಂಚಿನಂತೆ, ಅದರ ಪ್ರಹಾರ ಸಿಡಿಲಿನಂತೆ ಎಂದು ಸ್ತುತಿಸಿದ್ದಾರೆ. ಅವರ ಬಲವಾದ ಬಾಹುಗಳು, ಧರಿಸಿದ ಭುಜಕೀರ್ತಿಯಿಂದ ಉದಯಿಸುತ್ತಿರುವ ಸೂರ್ಯನ ಪ್ರಕಾಶದಂತೆ ಶೋಭಿಸಿದ್ದರೆ. ರತ್ನಗಳಂತೆ ಪ್ರಕಾಶಮಾನವಾಗಿರುವ, ನಾಲ್ಕು ವೇದಗಳು, ಮಹಾಭಾರತ, ಪುರಾಣಗಳು ಮೂಲರಾಮಾಯಣ, ಪಂಚರಾತ್ರ ಎಂಬ ಏಳು ಪ್ರಮಾಣ ಗ್ರಂಥಗಳ ಜ್ಞಾನವನ್ನು ಮನಸ್ಸಿನಲ್ಲಿ ಧಾರಣಮಾಡಿಕೊಂಡಿರುವ ''ಭೀಮ'' ಶಕ್ತಿಯ ಮಧ್ವರು ಉತ್ತಮ ಜ್ಞಾನ, ಸುಮತಿಯನ್ನು ಕರುಣಿಸಲೆಂದೂ, ಮತ್ತು ಅತ್ಯುತ್ತಮ ರೀತಿಯಿಂದ ಸ್ತೋತ್ರಗೈಯುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸಿದ್ದಾರೆ.

ಶ್ಲೋಕ(೬)

ಸಂಸಾರೋತ್ತಾಪ-ನಿತ್ಯೋಪಶಮದ-ಸದಯ-ಸ್ನೇಹ-ಹಾಸಾಂಬುಪೂರ
ಪ್ರೋದ್ಯದ್-ವಿದ್ಯಾನವದ್ಯ-ದ್ಯುತಿ-ಮಣಿ-ಕಿರಣ-ಶ್ರೇಣಿ ಸಂಪೂರಿತಾಶಃ ।
ಶ್ರೀ ವತ್ಸಾಂಕಾಧಿವಾಸೋ-ಚಿತತರ-ಸರಳ-ಶ್ರೀಮದಾನಂದ ತೀರ್ಥ-
ಕ್ಷೀರಾಂಭೋಧಿರ್ವಿಭಿಂದ್ಯಾದ್ ಭವದನಭಿಮತಂ ಭೂರಿ ಮೇ ಭೂತಿ-ಹೇತುಃ ॥ ೬ ॥

(ಭಾಮಿನಿ ಷಟ್ಪದಿ)

ನರರ ಸಂಸಾರದಲಿ ಬಂದಿಹ ।
ಪರಿಪರೀ ಉತ್ಕೃಷ್ಟ ತಾಪಕೆ ।
ನಿರುತದಲಿ ಶಾಂತಿಯನು ಕೊಡುತಿಹ ಸದಯ ಸ್ನೇಹದಲಿ ।
ಕಿರಿ ನಗಿಯ ಪೂರಾಂಬುದುದಿಸಿದ ।
ನಿರದುಷ್ಟ ವಿದ್ಯೆಂಬ ಮಾಣಿಕ- ।
ಕಿರಣ ಪಂಕ್ತಿಗಳಿಂದ ದಿಶ ಚೆನ್ನಾಗಿ ತುಂಬಿರ್ದಾ ॥೧೫ ॥
ಪರಮ ಭಕ್ತಿ ಜ್ಞಾನ ಮೊದಲೈ- ।
ಶ್ವರಿಯ ಕಾರಣ ಶಿರಿ ವತ್ಸ ಚಿ-
ನ್ಹರಿ ಸಮೀಪದಲ್ಲಿರುವದಕೆ ಬಹುಯೋಗ್ಯವೆಂದೆನಿಪಾ ।
ಗರುಡ ಮೊದಲಾದರ್ಗೆ ಶ್ರೇಷ್ಠನೆ ।
ಶಿರಿ ಮದಾನಂದಾರ್ಯ ನೆಂಭೋಲ್
ಶರಧಿ ಯೆನಗಾಗುತಿಹ್ಯ ಬಹಳಾನಿಷ್ಟ ಛೇದಿಸಲಿ ॥೧೬ ॥

ತಾತ್ಪರ್ಯಃ-

ಸಂಸಾರದಲಿ ಅತಿ ಪ್ರಬಲವಾಗಿರುವ ''ತಾಪ'' ಆಧ್ಯಾತ್ಮಿಕ, ಆಧಿಭೌತಿಕ, ಆಧಿದೈವಿಕನಾದ ಅಸಂಖ್ಯಾತ ತಾಪ ಅನಿಷ್ಟಗಳು ಶ್ರೀಮದಾನಂದ ತೀರ್ಥರ ಕರುಣೆ ದಯಾಂಬುಧಿಯಿಂದ ಶಮನಗೊಳ್ಳಲಿ. ಸಜ್ಜನರ ಸಾಧನೆ ಪೂರ್ಣಗೊಳ್ಳಲಿ, ಶ್ರೀಮಧ್ವಾಚಾರ್ಯರು ತಮ್ಮ ಭಕ್ತರಿಗೆ ಪೂರ್ಣಾನುಗ್ರಹ ಮಾಡಿ, ಕಷ್ಟ-ತಾಪಗಳನ್ನು ಪರಿಹರಿಸಿ, ನಿರಂತರ ಮುಕ್ತಿ ಸುಖವನ್ನು ಕೊಡುವರೆಂಬುದಕ್ಕೆ ಕ್ಷೀರಸಮುದ್ರ ಸಾಮ್ಯವನ್ನು ಹೊಂದಿದೆ. ಶ್ರೀ ಮಧ್ವಾಚಾರ್ಯರು ನಮ್ಮಲ್ಲಿ ಜ್ಞಾನ ಹುಟ್ಟಿಸಿ, ಮುಕ್ತಿಯನ್ನು ಕೊಡುತ್ತಾರೆ. ಆದ್ದರಿಂದ ಪ್ರಸಿದ್ಧ ಕ್ಷೀರ ಸಮುದ್ರಕ್ಕಿಂತ ಶ್ರೀಮದಾನಂದ ತೀರ್ಥರೆಂಬ ಕ್ಷೀರ ಸಮುದ್ರವು (ಜ್ಞಾನವಾರಿಧಿಯು) ನಮಗೆ ಉತ್ತಮವೆನಿಸುವುದು ಸಹಜ. ಸಂಸಾರವೆಂಬ ಅತಿ ಪ್ರಬಲವಾದ ಅನಿಷ್ಟವನ್ನು ಅದರಿಂದ ಉಂಟಾಗುವ ದುಃಖವನ್ನು ಪರಿಹರಿಸಿ,ಶ್ರೀಸುಖತೀರ್ಥರು ನಮಗೆ ಜ್ಞಾನ-ಭಕ್ತಿಗಳನ್ನು ಕರುಣಿಸಿ ಉದ್ಧಾರ ಮಾಡಲಿ.

(ನಿರದುಷ್ಟ = ನಿರ್ದುಷ್ಟ = ಅನವದ್ಯ = ದೋಷಗಳಿಲ್ಲದ) (ಕಿರಿನಗಿಯ ಪೂರಾಂಬು = ಸ್ನೇಹಹಾಸಾಂಬು) (ಕಿರಣ ಪಂಕ್ತಿಗಳಿಂದ ದಿಶ ಚೆನ್ನಾಗಿ ತುಂಬಿರ್ದಾ = ದ್ಯುತಿ-ಮಣಿ-ಕಿರಣ-ಶ್ರೇಣಿ ಸಂಪೂರಿತಾಶಃ)

ಶ್ಲೋಕ(೭)

ಮೂರ್ಧನ್ಯೇಷೋಽಂಜಲಿರ್ಮೇ ದೃಢ-ತರಮಿಹ ತೇ ಬಧ್ಯತೇ ಬಂಧಪಾಶ-
ಚ್ಛೇತ್ರೇದಾತ್ರೇ ಸುಖಾನಾಂ ಭಜತಿ ಭುವಿಭವಿಷ್ಯದ್ ವಿಧಾತ್ರೇ ದ್ಯು-ಭರ್ತ್ರೇ ।
ಅತ್ಯಂತಂ ಸತತಂ ತ್ವಂ ಪ್ರದಿಶ ಪದ-ಯುಗೇ ಹಂತ ಸಂತಾಪ ಭಾಜಾ-
ಮಸ್ಮಾಕಂ ಭಕ್ತಿಮೇಕಾಂ ಭಗವತ ಉತ ತೇ ಮಾಧವಸ್ಯಾಥ ವಾಯೋಃ । ೭ ।

(ಭಾಮಿನಿ ಷಟ್ಪದಿ)

ಭರತನೇ ಧರಿ ಭಕ್ತ ಜನರಿಗೆ
ಮುರಿದು ಕಟ್ಟಿದ ಭವದ ಪಾಶವ ।
ಕೊರದು ಸುಖಗಳ ಕೊಟ್ಟು ಭಾವಿ ಬ್ರಹ್ಮನೆಂದೆನಿಪಾ ॥
ದ್ಯುರಮಣನೆ ನಿನಗಾಗಿ ಅಂಜಲಿ ।
ಕರದ ಬಂಧವು ಶಿರಸಿನಲಿ ದೃಢ- ।
ತರದಿ ಅತಿ ಘಟ್ಟಾಗಿ ಸಂತತ ಕಟ್ಟಿತೆನ್ನಿಂದಾ ॥೧೭ ॥

ಎರಡು(ಗಿ?) ಸಂತಾಪಗಳು ಭವದಲಿ ।
ನಿರುತ ಯ್ಯೆದುವ ನಮಗೆ ನೀನೆ ।
ಹರುಷದಲಿ ಷಡ್ಗುಣದ ಸಂಪದ ಮಾಧವನ ನಿನ್ನಾ- ।
ಚರಣ ದ್ವಯದಲಿ ಜ್ಞಾನ ಪೂರ್ವಕ ।
ಸರವತೋಧಿಕ ಸ್ನೇಹ ಲಕ್ಷಣ
ಭರಿತ ದೃಢ ಭಕ್ತಿಯನು ಮಾಡುವ ಮನಸನೀಡವದೂ ॥೧೮ ॥

ತಾತ್ಪರ್ಯಃ-

ಸಕಲ ವಿಧವಾದ ಕಷ್ಟಗಳನ್ನು ನಾವು ಅನುಭವಿಸುತ್ತಿದ್ದೇವೆ, ಈ ಕಷ್ಟ-ದುಃಖಗಳಿಂದ, ಸಂಸಾರ ಬಂಧ ಪಾಶದಿಂದ, ಬಿಡುಗಡೆ ಹೊಂದಬೇಕಾದರೆ ಮುಕ್ತಿಯು ಸಿಗಬೇಕು. ಮುಕ್ತಿಬೇಕೆಂಬವರು ಶ್ರೀ ಹರಿ ವಾಯು, ಗುರುಗಳಲ್ಲಿ ಸದೃಢ ಭಕ್ತಿ ಇಡಬೇಕು, ಭಕ್ತಿ ಶಾಶ್ವತವಾಗಿರಬೇಕು. ವರವನ್ನು ಕೇಳುವದಕ್ಕಿಂತ ಮುಂಚೆ ಶ್ರೀವಾಯುದೇವರು ಅನಾದಿಕಾಲದಿಂದ ಇಂದಿನ ವರೆಗೆ ನಮಗೆ ಮಾಡಿರುವ ಮತ್ತು ಈ ಜೀವಕ್ಕೆ ಮುಂದೆ ಮಾಡುವ ಉಪಕಾರವನ್ನು ಸ್ಮರಿಸಬೇಕು, ಅವರು ಮಾಡುವ ಉಪಕಾರಕ್ಕೆ ಪ್ರತಿಯಾಗಿ ನಮಗೆ ಏನನ್ನು ಮಾಡಲು ಸಾಧ್ಯವಿಲ್ಲ, ಕಾರಣ ಕೃತಜ್ಞತಾಪೂರ್ಣ ಶ್ರೀಹರಿ ವಾಯು ದೇವರಿಗೆ ದೀರ್ಘದಂಡ, ಸಾಷ್ಟಾಂಗ ನಮಸ್ಕಾರ ಹಾಕುತ್ತ ಆರ್ತಭಾವದಿಂದ ಭಕ್ತಿಭಾವದಿಂದ ''ಸ್ವಾಮಿ ನನ್ನನ್ನು ಉದ್ಧಾರ ಮಾಡಿರಿ'' ಎಂದು ದೈನ್ಯದಿಂದ ಬೇಡಿಕೊಳ್ಳಬೇಕು. ಈ ಬೇಡಿಕೆಯನ್ನು ಶ್ರೀಹರಿ-ವಾಯು-ಗುರುಗಳು ನನಗೆ ನಿತ್ಯವೂ ಈಡೇರಿಸುತ್ತಿರಲೆಂದು ಅನನ್ಯ ಪ್ರಾರ್ಥನೆಗಳು. ಈ ಬೇಡಿಕೆಯನ್ನು ಬೇಡುವ ಮನಸ್ಸನ್ನೂ ಅವರು ನೀಡಲಿ ಎಂದು ಪ್ರಾರ್ಥಿಸಬೇಕು.

(ಧರಿ = ಧರೆಯೊಳಗಿರುವ) (ಎರಗಿ ಸಂತಾಪಗಳು = ಸಂತಾಪಭಾಜಾಂ)

ಶ್ಲೋಕ(೮)

ಸಾಭ್ರೋಷ್ಣಾಭೀಶು-ಶುಭ್ರ-ಪ್ರಭಮಯನಭೋ ಭೂರಿ ಭೂಭೃದ್ ವಿಭೂತಿ-
ಭ್ರಾಜಿಷ್ಣು ರ್ಭೂ ಋಭೂಣಾಂ ಭವನಮಪಿ ವಿಭೋಽಭೇದಿ ಬಭ್ರೇ ಬಭೂವೇ ।
ಯೇನ ಭ್ರೂ-ವಿಭ್ರಮಸ್ತೇ ಭ್ರಮಯತು ಸುಭೃಶಂ ಬಭ್ರುವದ್ ದುರ್ಭೃತಾಶಾನ್
ಭ್ರಾಂತಿರ್ಭೇದಾವಭಾಸ-ಸ್ತ್ವಿತಿ ಭಯಮಭಿಭೂರ್ಭೋಕ್ಷತೋ ಮಾಯಿಭಿಕ್ಷೂನ್ ॥೮ ॥

(ಭಾಮಿನಿ ಷಟ್ಪದಿ)

ಅರಸ ಹೇ ಆನಂದ ತೀರಥ ।
ಸರುವರಿಗೆ ಅಭಯ ಪ್ರದನೆ- ನೀ ।
ತಿರುವುತಿಹ ಹುಬ್ಬಿನ ವಿಲಾಸವುಯೆಣಿಸಿ ನೋಳ್ಪೆನೆನೇ ।
ಬರಿದೆ ತುಂಬಲ-ಶಕ್ತ ವಾಗಿಹ ।
ಬರಿದಾಸೆಯ ಬೆಕ್ಕಿನಂದದಿ ।
ಕರಮಂದಿಪರಿಗೆ ಎಲ್ಲ ಭೇದದ ಪರಿಯ ಭ್ರಾಂತಿಭಯಾ ॥೧೯ ॥

ಅನುಭವಿಸುತಿಹ ಭ್ರೂ ವಿಲಾಸವು
ಘನ ಶಶೀ ರವಿ ಸಹಿತದಾ ನಭ- ।
ವನು ಬಹಳ ರಾಯರ ವಿಭೂತಿಲಿ ವೊಪ್ಪುತಿಹ ಧರಿಯ ।
ಅನಿಮಿಷರ ನಾಯಕನ ಲೋಕವ ।
ವಿನಯದಲಿ ಸೃಜಿಸುತಲಿ ಪಾಲಿಸಿ ।
ಕೊನೆಯವರೆಲ್ಲರನ ಸಂಹರ ಯ್ಯೆದಿಸುತಲಿಹುದು ॥೨೦ ॥

ತಾತ್ಪರ್ಯಃ-

ಮಧ್ವರೂಪಿ ವಾಯುದೇವರು ತಮ್ಮ ಭಕ್ತರಿಗೆ ಪುರುಷಾರ್ಥಗಳನ್ನು ದಯಪಾಲಿಸಬಲ್ಲರು. ಸೃಷ್ಟಿ ಮುಂತಾದ ಕಾರ್ಯಗಳಲ್ಲಿ ನಿಮ್ಮ ವಿಚಿತ್ರ ಶಕ್ತಿ ಇದೆ. ಬಂಧಭಯವನ್ನು ಪರಿಹರಿಸುವಿರಿ. ಆದ್ದರಿಂದ ಅಭಯ ಎಂಬ ಬಿರುದು ನಿಮಗಿದೆ. ವಿರೋಧಿಗಳನ್ನು ನಿಗ್ರಹಿಸುವ ಶಕ್ತಿ ನಿಮ್ಮ ಹುಬ್ಬುಗಳ ಚಲನಕ್ಕೆ ಇದೆ. ಆದ್ದರಿಂದ ''ಅಭಿ ಭೂ'' ಎಂಬ ಬಿರುದು ಬಂದಿದೆ. ಬೆಕ್ಕು ಯಜಮಾನನಲ್ಲಿ ಸ್ವಲ್ಪವು ವಿಶ್ವಾಸವಿಲ್ಲದ ಪ್ರಾಣಿ. ಜಗದೊಡೆಯನಾದ ಶ್ರೀ ಹರಿಯನ್ನು ಅಲಕ್ಷ್ಯ ಮಾಡಿ ತಾವೆ ದೇವರೆಂದೂ, ಈ ಜಗದ ಸಂಪತ್ತಿಗೆ ದುರಾಸೆ ಮಾಡುವ ಮಾಯಿಭಿಕ್ಷುಗಳು ಕಳ್ಳಬೆಕ್ಕಿನಂತೆ ದೇವರ ಒಡೆತನದಲ್ಲಿ ಅವಿಶ್ವಾಸ ವುಳ್ಳವರಾಗಿದ್ದಾರೆ. ಆದರೆ ಸರ್ವ ಸ್ವಾಮಿಯಾದ ಪರಮಾತ್ಮನಿಂದ ದುಷ್ಟರಿಗೆ ಶಿಕ್ಷೆ, ಶಿಷ್ಟರಿಗೆ ರಕ್ಷೆ ಇದೆಯೆಂಬುದನ್ನು ಮರೆಯಬಾರದು, ಶಿಷ್ಟ ಜನಪ್ರಿಯ ಪ್ರಾಣದೇವರು ನನಗೆ ಭಕ್ತಿ ಪ್ರೇರಕರಾಗಿ ಉದ್ಧರಿಸಲಿ.

(ಬರಿದಾಸೆಯ ಬೆಕ್ಕಿನಂದದಿ ಕರಮಂದಿಪರಿಗೆ =ಬಭ್ರುವತ್ ಮಾಯಿಭಿಕ್ಷೂನ್) (ಘನ ಶಶೀ ರವಿ ಸಹಿತದಾ ನಭವನು = ಸಾಭ್ರೋಷ್ಣಾಭೀಶು-ಶುಭ್ರ-ಪ್ರಭಮಯನಭೋ) (ಅನಿಮಿಷರ ನಾಯಕನ ಲೋಕವ = ಋಭೂಣಾಂ ಭವನಮಪಿ) (ತಿರುವುತಿಹ ಹುಬ್ಬಿನ ವಿಲಾಸವು = ಭ್ರೂ-ವಿಭ್ರಮಃ)

ಶ್ಲೋಕ(೯)

ಯೇಽಮುಂ ಭಾವಂ ಭಜಂತೇ ಸುರ-ಮುಖ-ಸು-ಜನಾರಾಧಿತಂ ತೇ ತೃತೀಯಂ
ಭಾಸಂತೇ ಭಾಸುರೈಸ್ತೇ ಸಹಚರ-ಚಲಿತೈಶ್ಚಾಮರೈಶ್ಚಾರು-ವೇಷಃ ।
ವೈಕುಂಠೇ ಕಂಠ-ಲಗ್ನ-ಸ್ಥಿರ -ಶುಚಿ ವಿಲಸತ್-ಕಾಂತಿ ತಾರುಣ್ಯ-ಲೀಲಾ-
ಲಾವಣ್ಯಾ ಪೂರ್ಣ-ಕಾಂತಾ ಕುಚ-ಭರ-ಸುಲಭಾ-ಶ್ಲೇಷ ಸಮ್ಮೋದ ಸಾಂದ್ರಾಃ ॥ ೯ ॥

(ಭಾಮಿನಿ ಷಟ್ಪದಿ)

ಅಮರರೇ ಮೊದಲಾದ ಸುಜನರ ।
ನಮನ ಪೂಜೆಯ ಗೊಂಬ ನಿನ್ನಯ ।
ವಿಮಲ ತೃತೀಯವತಾರ ಸೇವಿಸುತಿರುವರಾವರಿಗೆ ।
ರಮೆಯ ರಮಣನನುಚರರ ಕೈಯಲಿ ।
ಧಮಕದಲಿ ಹಾರಿಸುವ ಚಾಮರ ।
ಕಮಲಮುಖಿಯರು ಮನೋಹರಾಲಂಕಾರಗಳುಳ್ಳಾ ॥ ೨೧ ॥

ಕೊರಳೊಳಾಸಕ್ತದಲಿ ದೃಢದಲಿ ।
ನಿರುಮಲದೊಳುಪ್ಪುವ ಪ್ರಕಾಶದಿ ।
ತರುಣಿರ್ಯವ್ವನ ಲೀಲೆ ಲಾವಣ್ಯದಲಿ ಸೌಂದರ್ಯದೀ ।
ಪರಿಪೂರ್ಣರಾದವರ ಸ್ತನಗಳ, ಭರದ ಸುಖದಾಲಿಂಗನೆಯ ಮಹ ।
ಹರುಷದಿಂದ್ವೈಕುಂಠದೊಳು ಕಾಂತಿಯಲಿ ಪೊಪ್ಪುವರು ॥ ೨೨ ॥

ತಾತ್ಪರ್ಯ-

ಶ್ರೀ ವಾಯು ದೇವರ ತೃತೀಯ ಅವತಾರ ಮಧ್ವಾಚಾರ್ಯರು; ಅವರನ್ನು ದೇವತೆಗಳಲ್ಲಿ ಶ್ರೇಷ್ಠರೆನಿಸಿರುವ ಗರುಡ, ಶೇಷ ಮತ್ತು ರುದ್ರ ದೇವರು, ಋಷಿ-ಮುನಿಗಳು, ಮುಮುಕ್ಷುಗಳು, ಸಕಲ ಸಜ್ಜನರು ಅತ್ಯಂತ ಭಕ್ತಿಯಿಂದ ಆರಾಧಿಸುತ್ತಾರೆ. ಸಕಲ ದೋಷ ರಹಿತವಾದ ವೈಕುಂಠವು ಹರಿಯ ಲೋಕದಲ್ಲಿ ಮುಕ್ತ ಪುರುಷರು, ಸ್ತ್ರೀಯರು ತಮ್ಮ ಸ್ವರೂಪ ದೇಹದಿಂದ ವಿಹರಿಸುತ್ತ ಆನಂದಿಸುತ್ತಿರುತ್ತಾರೆ. ಮುಕ್ತರಾದ ಸ್ತ್ರೀಯರ ದೇಹದ ಕಾಂತಿ, ಲಾವಣ್ಯ ಮತ್ತು ಸೌಂದರ್ಯ ಸ್ಥಿರವಾಗಿರುತ್ತದೆ. ಅವರ ಅಪ್ರಾಕೃತವಾದ ದೇಹಾಂಗಗಳ ಸೌಷ್ಟವು ಆನಂದ ಉದ್ರೇಕಕ್ಕೆ ಕಾರಣವಾದಾಗ್ಯೂ, ವಿಕಾರಗೊಳ್ಳುವುದಿಲ್ಲ. ಮುಕ್ತರು ಸ್ವಯೋಗ್ಯತಾನುಸಾರ ಪೂರ್ಣರಾಗಿ ಹರಿಧ್ಯಾನದಲ್ಲಿ ಅಪಾರ ಸ್ವರೂಪ ಸುಖವನ್ನು ಅನುಭವಿಸುತ್ತಾರೆ. ರುದ್ರಾದಿ ಅಮರರು, ಸುಜನರಿಂದ ಸ್ತುತಿಸಲ್ಪಡುವ ಶ್ರೀಮಧ್ವಾಚಾರ್ಯರು ನಮ್ಮಿಂದಲೂ ಉತ್ತಮ ಸಾಧನೆ ಮಾಡಿಸಲಿ.

ಶ್ಲೋಕ(೧೦)

ಆನಂದಾನ್ ಮಂದ-ಮಂದಾ ದದತಿ ಹಿ ಮಾರುತಃ ಕುಂದ-ಮಂದಾರ-ನಂದ್ಯಾ-
ವರ್ತಾ-ಮೋದಾನ್ ದಧಾನಾ ಮೃದುಪದಮುದಿತೋದ್‌ಗೀತಕೈಃ ಸುಂದರೀಣಾಮ್ ।
ವೃಂದೈರಾವಂದ್ಯ-ಮುಕ್ತೇಂದ್ವಹಿಮಗು-ಮದನಾ-ಹೀಂದ್ರ-ದೇವೇಂದ್ರ ಸೇವ್ಯೇ
ಮೌಕುಂದೇ ಮಂದಿರೇಽಸ್ಮಿನ್ನವಿರತ-ಮುದಯನ್-ಮೋದಿನಾಂ ದೇವ ದೇವ ॥ ೧೦ ॥

(ಭಾಮಿನಿ ಷಟ್ಪದಿ)

ದೇವತೆಗಳೆಲ್ಲರಿಗೆ ನೀನೆ ।
ದೇವನಾದಾನಂದ ತೀರ್ಥನೆ ।
ಭಾವ ಶುದ್ಧದಿ ನಿನ್ನ ಭಜಿಸೆ ಮುಕುಂದ ಮಂದಿರದೀ ।
ತೀವಿ ಕೊಂಡಿರ್ಪಾ ಪರಿಮಳದ ನಂ- ।
ದ್ಯಾವರ್ತ ಮಂದಾರ ಕುಂದದ ।
ಆ ವನದಿ ಬರುವಂಥ ಮಂದಾನಿಲನು ಸುಖ ಕೊಡುವ ॥ ೨೩ ॥

ಅಳಿಸ್ವರಕಿಂತಧಿಕ ಗಾಯನ ।
ಲಲನೆಯರ ಕೈಯಿಂದ ಸೇವೆಯ- ।
ಗೊಳುವ ಮುಕ್ತಾದಿಂದು ಅಹಿಮಗು ಸ್ಮರ ಅಹಿಪಸುರಪಾ- ॥
ಗಳು ಮೊದಲು ಪೂಜಿಸುವ ವಿಷ್ಣುನ
ಪೊಳಲೊಳನಿಶಾ ನಂದದಿಂದಲಿ ।
ಬಳಕೆ ಮಾಡುತ ಇರಲು ಎಲ್ಲ ಸುಖವ ಕೊಡುತಿಹವೂ ॥ ೨೪ ॥

ತಾತ್ಪರ್ಯಃ-

ವೈಕುಂಠದಲ್ಲಿ ಕುಂದ(ಮಲ್ಲಿಗೆ)ಮಂದಾರ, ನಂದಿಬಟ್ಟಲು ಮುಂತಾದ ಸುಗಂಧ ಭರಿತ, ಸರ್ವಋತುಗಳ ಪುಷ್ಪಗಳ ಅಸಂಖ್ಯಾತ ದೇವ ವೃಕ್ಷಗಳಿವೆ. ಗಾಳಿರೂಪದಿಂದ ವಾಯುದೇವರು ಮಂದ ಮಂದವಾಗಿ, ವೇಗವಾಗಿಯೂ ಸುಳಿಯುತ್ತ, ಬೀಸುತ್ತ, ಹೂಗಳನ್ನು ಸೂಕ್ಷ್ಮವಾಗಿ ಸ್ಪರ್ಶಿಸುತ್ತ ಅವುಗಳ ಪರಿಮಳವನ್ನು ಧರಿಸುತ್ತ ಚಲಿಸುತ್ತಿರುವರು. ಅವರ ಅಧೀನವಾದ ಸರ್ವ ಮುಕ್ತರಿಗೆ ಕುಂದ ಮಂದಾರ, ನಂದ್ಯಾವರ್ತಗಳ ಪರಿಮಳ ಬೀರಿ ಅವರಿಗೆ ಆನಂದದ ಅನುಭವ ಕೊಡುತ್ತಿರುವರು. ಸೂರ್ಯ ಮನ್ಮಥ, ಶೇಷ, ಇಂದ್ರ ರುದ್ರಾದಿ ಸಕಲ ದೇವತೆಗಳಿಂದ ವಂದ್ಯರಾದ ನೀವು ಭಾವಿ ಬ್ರಹ್ಮರಾಗಿರುವಿರಿ. ಮುಕ್ತರೆಲ್ಲರು ಶ್ರೀ ವಾಯುದೇವರನ್ನು ಮುಕ್ತ ಕಂಠದಿಂದ ಸ್ತುತಿಸುತ್ತಿರುವರು. ಸದೃಢ ಭಕ್ತಿ ಸುಮನ ನನ್ನಲ್ಲಿಯೂ ಅರಳಿ ಭಕ್ತಿ ಪರಿಮಳ ಜನುಮ ಜನುಮದಲ್ಲಿಯೂ ಬೀರುವಂತೆ ಪ್ರಾಣದೇವರು ಕರುಣಿಸುತ್ತಿರಲಿ.

ಶ್ಲೋಕ(೧೧)

ಉತ್ತಪ್ತಾತ್ಯುತ್ಕಟ-ತ್ವಿಟ್ ಪ್ರಕಟ-ಕಟಕಟ-ಧ್ವಾನ-ಸಂಘಟ್ಟನೋದ್ಯದ್-
ವಿದ್ಯುದ್-ವ್ಯೂಢ-ಸ್ಫುಲಿಂಗ-ಪ್ರಕರ-ವಿಕಿರಣೋತ್-ಕ್ವಾಥಿತೇ ಬಾಧಿತಾಂಗಾನ್ ।
ಉದ್ಗಾಢಂ ಪಾತ್ಯಮಾನಾ ತಮಸಿ ತತ ಇತಃ ಕಿಂಕರೈಃ ಪಂಕಿಲೇ ತೇ ।
ಪಂಕ್ತಿರ್ಗ್ರಾವ್ಣಾಂ ಗರಿಮ್ಣಾ ಗ್ಲಪಯತಿ ಹಿ ಭವದ್-ದ್ವೇಷಿಣೋ ವಿದ್ವದಾದ್ಯ ॥ ೧೧ ॥

(ಭಾಮಿನಿ ಷಟ್ಪದಿ)

ಆದಿ ವಿದ್ವಾಂಸರು ಗಳಿಗೆ ಶ್ರೀ-
ಮೋದ ತೀರಥ ಬಹಳ ತಪಿಸುವ
ಕಾದ ಶಿಲೆ ಸಾಲ್ ಪ್ರಕಟ ಮಾಡುವ ಕಟಕಟ ಧ್ವನಿಯಾ ।
ಬೋಧ ಸುಹ ಚನ್ನಾಗಿ ಘಟ್ಟಿಸೆ- ।
ಲಾದ ಚಪಲ ವಿಭಾಗ ಯ್ಯೆದಿದೋ- ।
ಪಾದಿ ಕಿಡಿಗಳ ಪಂಕ್ತಿ ಕಿರಣವು ಹರವಿದದರಲ್ಲಿ ॥ ೨೫ ॥

ಬಲು ಕುದಿಸುತಿಹ್ಯನರ್ಕ ಸಹಕ- ।
ತ್ತಲೆಯ ಕವಿದಿಹ ಅಂಧ ತಮಸಿ- ।
ನಲಿ ಬಿದ್ದು ಬಾಧಿತ ಶರೀರದ ತವ ವೈರಿಗಳಿಗೆ ।
ಮುಳಿದ ಗುರುತ್ವದ ನಿನ್ನ ದೂತರು- ।
ಗಳು ಎಲ್ಲ ಕಡೆಯಲಿ ಅವರಿಗೆ ।
ಅಳುವ ಪರಿ ದುಃಖವನು ಬಡಿಸುತಲಿಹರು ಅಹುದಲ್ಲಿ ॥ ೨೬ ॥

ತಾತ್ಪರ್ಯ-

ಶ್ರೀ ಹರಿಯನ್ನು ಹರಿಭಕ್ತರನ್ನು, ದ್ವೇಷಿಸುವ, ದೂಷಣಮಾಡುವ, ಹರಿದ್ವೇಷಿಗಳ ಅಂಧತಮಸಿನ ನರಕಯಾತನೆಯ ದುಃಖವನ್ನು ಇಲ್ಲಿ ಹೇಳಿದ್ದಾರೆ. ನಿಬಿಡವಾದ ಕತ್ತಲೆ, ಕೆಸರಿನ ಮಡುವು, ಸುರಿಯುವ ಕಲ್ಲುಗಳ ಹೊಡೆತದ ಮಳೆ, ಅಲ್ಲಿ ಪಸರಿಸಿರುವ ಅಗ್ನಿ ಜ್ವಾಲೆ, ಸಿಡಿಲಿನ ಆರ್ಭಟದ ಶಬ್ದಗಳಿಂದ ಕೇಳುವ ಭಯಂಕರ ಧ್ವನಿಯಿಂದ ಕಿವುಡಾಗುವ, ಕತ್ತಲೆಯಿಂದ ಕುರುಡಾಗುವ ವೇದನೆಗಳಿಂದ ಅತೀವ ದುಃಖ ಬರುವಂತೆ, ಹರಿದ್ವೇಷಿಗಳನ್ನು ಶ್ರೀಮಧ್ವಾಚಾರ್ಯರ ಭಟರಿಂದ ಶಿಕ್ಷಿಸಲಾಗುತ್ತದೆ. ಆದ್ದರಿಂದ ಶ್ರೀ ಹರಿ ವಾಯುದೇವರಲ್ಲಿ ಕನಸು-ಮನಸಿನಲ್ಲಿಯೂ, ಲವಲೇಶವೂ ದ್ವೇಷ ಎಣಿಸದಂತೆ, ನಮ್ಮನ್ನು ಅನುಗ್ರಹಿಸಿರಿ. "ಮಧ್ವ ಮತದ ಸಿದ್ಧಾಂತದ ಪದ್ಧತಿ ಬಿಡ ಬ್ಯಾಡ್ರಿ, ಬಿಡ ಬ್ಯಾಡ್ರಿ, ಬಿಟ್ಟು ಕೆಡಬ್ಯಾಡ್ರಿ ಕೆಡಬ್ಯಾಡ್ರಿ ॥ ಎಂಬುದೆ ನನ್ನಲ್ಲಿ ಸದಾ ಸ್ಮರಣೆಗೆ ಬರುತ್ತಿರಲಿ

ಅನ್ಯಥಾಶರಣಂನಾಸ್ತಿ । ತ್ವಮೇವ ಶರಣಂ ಮಮ ॥

ಶ್ಲೋಕ(೧೨)

ಅಸ್ಮಿನ್ನಸ್ಮದ್ಗುರೂಣಾಂ ಹರಿ-ಚರಣ-ಚಿರ-ಧ್ಯಾನ-ಸನ್ಮಂಗಲಾನಾಂ
ಯುಷ್ಮಾಕಂ ಪಾರ್ಶ್ವ-ಭೂಮಿಂ ಧೃತ-ರಣರಣಿಕ-ಸ್ವರ್ಗಿ-ಸೇವ್ಯಾಂ ಪ್ರಪನ್ನಃ ।
ಯಸ್ತೂದಾಸ್ತೇ ಸ ಆಸ್ತೇऽಧಿಭವ-ಮಸುಲಭ-ಕ್ಲೇಶ-ನಿರ್ಮೋಕಮಸ್ತ-
ಪ್ರಾಯಾನಂದಂ ಕಥಂಚಿನ್ನ ವಸತಿ ಸತತಂ ಪಂಚಕಷ್ಟೇऽತಿಕಷ್ಟೇ ॥ ೧೨ ॥

(ಭಾಮಿನಿ ಷಟ್ಪದಿ)

ಧರೆಯೊಳಗೆ ಮದ್ಗುರುವೆ ಶ್ರೀ ಹರಿ- ।
ಚರಣ ಚಿರ ಧ್ಯಾನದಲಿ ಮಂಗಳ-
ತರ ಸ್ವರೂಪವ ಧರಿಸಿ ಲವಲವಿಕೆಯ ಸುರರ ಕೈಯ್ಯಾ ।
ನಿರುತ ಸೇವ್ಯನೆ ನಿನ್ನ ಬಳಿ ನೆಲ-
ಸಿರುವ ನಾತನುದಾಸಿಸಿದ ಆ
ನರ ವಿಶೇಷಾಕಾರ ಈ ಬಗೆ ಕಷ್ಟ ಬಡುತಿಹನು ॥ ೨೩ ॥

ಸುಲಭಯಿಲ್ಲದೆ ಕ್ಲೇಶ ದುಃಖದಿ
ಬಳಲಿ ಬಿಟ್ಟಿಹ ದೊಡ್ಡ ನಂದವು
ಕಲತು ಸಂಸಾರಾದಿ ನಿರಂತರ ಅಲ್ಲೆ ಇರುತಿಹನು ।
ಬಲು ಕಷ್ಟ ದೈಕಷ್ಟ ವಾಗಿಹ
ನೆಲೆಯ ನರಕದ ಲೋಕದಲ್ಲೆಯೆ
ಕೆಲವು ಕಾಲದ ಲಾದರೆಯು ಸರಿ ವಾಸ ಮಾಡನು(?) ॥ ೨೮ ॥

ತಾತ್ಪರ್ಯಃ-

ಶ್ರೀ ವಾಯು ದೇವರು ಶ್ರೀ ಹರಿಚರಣ ಚಿರಧ್ಯಾನ ಮಗ್ನರಾಗಿ ಸಜ್ಜನರಿಗೆ ಸನ್ಮಂಗಳ ಪ್ರದರಾಗಿದ್ದಾರೆ. ಅಚ್ಯುತನ ಸೇವೆಯಲ್ಲಿ ಚೊಚ್ಚಲ ಮಗನಾಗಿದ್ದರೆ. ಪ್ರಾಣ ದೇವರು ನಮ್ಮ ವಿದ್ಯಾಗುರುಗಳಲ್ಲಿ ಸನ್ನಿಹಿತರಾಗಿದ್ದು, ನಮಗೆ ಜ್ಞಾನೋಪದೇಶವನ್ನು ಮಾಡಿಸುತ್ತಿರುವ ಆದಿಗುರುಗಳಾಗಿದ್ದಾರೆ. (೧) ಕೆಲವರಿಗೆ ಹರಿಯಲ್ಲಿ ವಾಯುದೇವರಲ್ಲಿ ಭಕ್ತಿ(೨) ಕೆಲವರಿಗೆ ದ್ವೇಷ(೩) ಇನ್ನೂ ಕೆಲವರಿಗೆ ಉದಾಸೀನವಿರುತ್ತದೆ. ಭಕ್ತಿಗೆ ಮುಕ್ತಿ, ದ್ವೇಷಕ್ಕೆ ನರಕ, ಉದಾಸೀನರಿಗೆ ನಿತ್ಯಸಂಸಾರ. ದ್ವೇಷಿಗಳಿಗೆ ಪಂಚ ಕಷ್ಟ-ಐದು ನರಕಗಳ ಯಾತನ ಇದೆ. ಹೇ ಶ್ರೀಪ್ರಾಣ ಪತಿಯೇ ನಿನ್ನಲ್ಲಿ ನನಗೆ ಭಕ್ತಿಯನ್ನು ಕರುಣಿಸು. (ಬಲು ಕಷ್ಟ ದೈಕಷ್ಟ ವಾಗಿಹ ನೆಲೆಯ ನರಕದ ಲೋಕದಲ್ಲೆಯೆ = ಅತಿಕಷ್ಟೇ) (ಕೆಲವು ಕಾಲದ ಲಾದರೆಯು ಸರಿ ವಾಸ ಮಾಡನು(?) = ಕಥಂಚಿನ್ನ ವಸತಿ) (ಮಂಗಳತರ ಸ್ವರೂಪವ ಧರಿಸಿ ಲವಲವಿಕೆಯ ಸುರರ ಕೈಯ್ಯಾ ।

ನಿರುತ ಸೇವ್ಯನೆ ನಿನ್ನ ಬಳಿ ನೆಲಸಿರುವ = ಧೃತ-ರಣರಣಿಕ-ಸ್ವರ್ಗಿ-ಸೇವ್ಯಾಂ ಪ್ರಪನ್ನಃ)

ಶ್ಲೋಕ(೧೩)

ಕ್ಷುತ್-ಕ್ಷಾಮಾನ್ ರೂಕ್ಷ-ರಕ್ಷೋ-ರದ-ಖರ-ನಖರ-ಕ್ಷುಣ್ಣವಿಕ್ಷೋಭಿತಾಕ್ಷಾನ್
ಆಮಗ್ನಾನಂಧ-ಕೂಪೇ ಕ್ಷುರ-ಮುಖ-ಮುಖರೈಃ ಪಕ್ಷಿಭಿರ್ವಿಕ್ಷತಾಂಗಾನ್ ।
ಪೂಯಾಸೃಜ್ -ಮೂತ್ರ-ವಿಷ್ಠಾ ಕ್ರಿಮಿ-ಕುಲ-ಕಲಿಲೇ ತತ್ಕ್ಷಣಕ್ಷಿಪ್ತಶಕ್ತ್ಯಾ-
ದ್ಯಸ್ತ್ರ-ವ್ರಾತಾರ್ದಿತಾಂಸ್ತ್ವದ್ ದ್ವಿಷ ಉಪಜಿಹತೇ ವಜ್ರ-ಕಲ್ಪಾ ಜಳೂಕಾಃ ॥ ೧೩ ॥

(ಭಾಮಿನಿ ಷಟ್ಪದಿ)

ಕೀವು ನೆತ್ತರ ಮೂತ್ರ ವಿಷ್ಠದ ।
ಠಾವು ಕ್ರಿಮಿ ಕುಲದಿಂದ ಕದಡಿದ ।
ನೋವಿನಂಧ ತಮಸಿನಲಿ ಚನ್ನಾಗಿ ಮುಳುಗತಲಿ ।
ತಾವು ಕ್ಷುದದಲಿ ಕ್ಷೀಣರಾದಾ ।
ಜೀವರಿಗೆ ಕೃಶರಾದ ರಾಕ್ಷಸ- ।
ರಾವಳಿಯು ದಂತದಲಿ ನಖದಲಿ ಚೂರ್ಣ ಮಾಡುವರು ॥ ೨೯ ॥

ತೆರೆದು ಕ್ಷೋಭಿಸು ಪಕ್ಷಿಯಲಿ । ನಿ-
ನ್ನರಿಗಳನು ಕಾಡುವರು ಅಲ್ಲಿಹ ।
ಕ್ಷುರ ಮುಖದ ಪಕ್ಷಿಗಳು ನಟಿಸುತ ಘಾಯಮಾಡುವರು ।
ತ್ವರದಿ ಶಕ್ತ್ಯಾದಸ್ತ್ರ ಸಮುಹವು
ಕರದು ಪೀಡಿಸುತಿರಲವರ ಬಳಿ
ನೆರೆದು ಜಗ್ಗುತಲಿಹ ವಜ್ರಸಮಾನ ಜಗಳಿಗಳು ॥ ೩೦ ॥

ತಾತ್ಪರ್ಯಃ-

ಶ್ರೀ ಹರಿ ಮತ್ತು ವಾಯು ದೇವರ ದ್ವೇಷವು ಎಂದೆಂದೂ ಸರ್ವಥಾ ಮಾಡಬಾರದೆಂದು, ಮಾಡಿದರೆ ಯಾವರೀತಿ ಶಿಕ್ಷೆ, ನರಕಯಾತನೆಯಾಗುವದೆಂದು, ನಿತ್ಯ ನರಕ ದುಃಖ ಎಷ್ಟು ಭಯಂಕರ, ಅಸಹನೀಯ ಹಾಗು ದೀರ್ಘವೇದನೀಯ ಎಂಬುದನ್ನು ''ಉತ್ತಪ್ತಾತ್ಯುತ್ಕಟ''ಮತ್ತು ''ಕ್ಷುತ್ ಕ್ಷಾಮಾನ್ ರೂಕ್ಷ'' ಈ ಎರಡು ಶ್ಲೋಕಗಳಲ್ಲಿ ವಿವರಿಸಿದ್ದಾರೆ. ಈ ಜನ್ಮದಲ್ಲಿ ಅಲ್ಲ - ಯಾವ ಜನ್ಮದಲ್ಲಿಯಾದರೂ ಹರಿ ವಾಯು ದ್ವೇಷ ದೂಷಣ ಮಾಡಿದವರಿಗೆ ಈ ಶಿಕ್ಷೆ ತಪ್ಪಿದ್ದಲ್ಲ, ನರಜನ್ಮದಿಂದ ಜ್ಞಾನ ಭಕ್ತಿ ಸಾಧನೆ. ನರ ಜನ್ಮ ಬಂದಾಗ ಈ ಮನವು ಹರಿ ಮಂದಿರವಾಗಬೇಕು, ಪ್ರಣಮ್ಯ ಮತಿಯಿಂದ ಪ್ರಾಣದೇವರ ಚರಣಕ್ಕೆ ಶರಣು ಬಂದರೆ, ಈ ನರಕದ ಭಯವಿಲ್ಲದಂತಾಗಿ, ಮತ್ತೆ ಜ್ಞಾನ ಭಕ್ತಿಯ ಸಾಧನೆಗೆ ಮಾರ್ಗವಾಗುತ್ತದೆ. ಆನಂದತೀರ್ಥರಂತರ್ಗತ ಮುಕುಂದನ ಸ್ಮರಣೆ ಬರುವುದೆ ಮುಕ್ತಿ ಸುಖ. ಸುಖ ತೀರ್ಥರು ನನಗೆ ಈ ಸುಖವನ್ನು ಮರೆಯದಲೆ ಕರುಣಿಸಲಿ.

ಶ್ಲೋಕ(೧೪)

ಮಾತರ್ಮೇ ಮಾತರಿಶ್ವನ್ ಪಿತರತುಲ-ಗುರೋ ಭ್ರಾತರಿಷ್ಟಾಪ್ತಬಂಧೋ
ಸ್ವಾಮಿನ್ ಸರ್ವಾಂತರಾತ್ಮನ್ನಜರ ಜರಯಿತರ್ಜನ್ಮ-ಮೃತ್ಯಾಮಯಾನಾಮ್ ।
ಗೋವಿಂದೇ ದೇಹಿ ಭಕ್ತಿಂ ಭವತಿ ಚ ಭಗವನ್ನೂರ್ಜಿತಾಂ ನಿರ್ನಿಮಿತ್ತಾಂ
ನಿರ್ವ್ಯಾಜಾಂ ನಿಶ್ಚಲಾಂ ಸದ್‌ಗುಣಗಣ ಬೃಹತೀಂ ಶಾಶ್ವತೀಮಾಶು ದೇವ ॥ ೧೪ ॥

(ಭಾಮಿನಿ ಷಟ್ಪದಿ)

ಮಾತ ಪಿತ ನಿರ್ದುಷ್ಟ ಗುರುವೆ ।
ಭ್ರಾತರಿಷ್ಟಾಪ್ತ ಸುಬಾಂಧವ ।
ವಾತ ದೇವನೆ ಸರ್ವರಂತರ್ಯಾಮಿಕನೆ, ಮುಪ್ಪಾ- ।
ತೀತ ಜನಿ ಮೃತಿ ರೋಗಗಳಿಗೆ ।
ಧಾತುಗೆಡಿಸುತ ಜರಕೊಡುತ ಹೇ ।
ಮಾತರಿಶ್ವನೆ ಆರುಗುಣ ಐಶ್ವರ್ಯ ಸಂಪನ್ನ ॥ ೩೧ ॥

ಹರಿಯ ಬಳಿ ನಿನ್ನಲಿ ಉರ್ಜಿತ
ನಿರನಿಮಿತ್ತ ನಿರ್ವ್ಯಾಜದಿಂದಲಿ ।
ಸ್ಥಿರದೊಳಿಹ ಸದ್ಗುಣದ ಉತವಳಿ - ದೊಡ್ಡ ಶಾಶ್ವತದ ।
ವರ ಭಕುತಿಯನು ಶೀಘ್ರದಿಂದಲಿ ।
ಮರುತ ದೇವನೆ ನೀನು ಅಂತಃ- ।
ಕರುಣದಲಿ ಒಲಿದೆನೆಗೆ ಕೊಡು ಅಚ್ಯುತನ ನಿಜದಾಸ ॥ ೩೨ ॥

ತಾತ್ಪರ್ಯಃ-

ಶ್ರೀ ಪ್ರಾಣ ಪತಿಯು 'ಜೀವರು'ಗಳಿಗೆ, ಪ್ರಾಣವನ್ನು, ತ್ರಾಣವನ್ನು, ಅನ್ನವನ್ನು, ಜ್ಞಾನವನ್ನು, ಕೈವಲ್ಯವನ್ನು ಕೊಟ್ಟು- ಕೊಡಿಸುವವರು. ಮಮತೆಯಲ್ಲಿ ತಾಯಿಯಾಗಿ, ಪೋಷಣೆಯಲಿ ತಂದೆಯಾಗಿ, ತತ್ವ ಉಪದೇಶ ಮಾಡುವಲ್ಲಿ ಗುರುಗಳಾಗಿ, ಪ್ರೀತಿಯಲ್ಲಿ ಭ್ರಾತೃವಾಗಿ, ಕಷ್ಟ ಬಂದಾಗ ಸಹಾಯ ಮಾಡುವ ಇಷ್ಟ ಮಿತ್ರನಾಗಿ, ಸಮಯೋಚಿತ ಉಪಕಾರ ಮಾಡುವಲ್ಲಿ ಆಪ್ತ ಬಂಧುಗಳಾಗಿ, ನಮ್ಮ ಅಪೇಕ್ಷೆ ಪೂರೈಸುವಲ್ಲಿ ಸ್ವಾಮಿ(ಯಜಮಾನ)ಯಾಗಿ, ಸರ್ವರಲ್ಲಿ ಸರ್ವಾಂತರ್ಯಾಮಿಯಾಗಿ ಅನಾದಿ ಕಾಲದ ಬಂಧುವಾಗಿ ಈ ಜೀವಕ್ಕೆ(ನನಗೆ) ರಕ್ಷಕ, ಆರಕ್ಷಕ ಸುಶಿಕ್ಷಕನಾಗಿ ರಕ್ಷಣೆಮಾಡುವ ನಿನಗೆ ಅನಂತಾನಂತ ಪ್ರಣಾಮಗಳು. ಪುನರಪಿ ನಮೋ ನಿನ್ನ ಪಾದಪದ್ಮಗಳಿಗೆ. ಸೃಷ್ಟಿ, ಸ್ಥಿತಿ, ನಿಯಮನ-ಪಾಲನ ವ್ಯಾಪಾರಗಳಲ್ಲಿ ಶ್ರೀ ಹರಿ ಸಂಕಲ್ಪದಂತೆ ಸದಾ ಮರುತದೇವರು ನಿರುತರು. ಸಜ್ಜನರಿಗೆ ಭಕ್ತಿ, ಜ್ಞಾನ, ವೈರಾಗ್ಯ, ಐಶ್ವರ್ಯ, ಸುಖದ ವರ ಕೊಡುವವರು. ಸಕಲ ವೇದ ಪ್ರತಿಪಾದ್ಯನಾದ ಶ್ರೀ ಹರಿ-ಗೋವಿಂದನಲ್ಲಿ ನನಗೆ ಶಾಶ್ವತವಾದ ಭಕ್ತಿಯು, ಸರ್ವಾವಸ್ಥಾ, ಸರ್ವಕಾಲದಲ್ಲಿ ಇರುವಂತೆ ಅನುಗ್ರಹಿಸು. ನಿನ್ನನ್ನೇ ನಂಬಿದ ನನಗೆ, ನಿನ್ನಲ್ಲಿ ಶ್ರೀ ಹರಿಯಲ್ಲಿ ನಿಜವಾದ ಭಕ್ತಿ ಕೊಡಬೇಕಾಗಿ ಪ್ರಾರ್ಥನೆಗಳು.

ಶ್ಲೋಕ(೧೫)

ವಿಷ್ಣೋರತ್ಯುತ್ತಮತ್ವಾ-ದಖಿಲ-ಗುಣ-ಗಣೈಸ್ತತ್ರ ಭಕ್ತಿಂ ಗರಿಷ್ಠಾಂ
ಸಂಶ್ಲಿಷ್ಟೇ ಶ್ರೀಧರಾಭ್ಯಾಮ-ಮುಮಥ ಪರಿವಾರಾತ್ಮನಾ ಸೇವಕೇಷು ।
ಯಃ ಸಂಧತ್ತೇ ವಿರಿಂಚ-ಶ್ವಸನ-ವಿಹಗಪಾ-ನಂತ ರುದ್ರೇಂದ್ರ ಪೂರ್ವೇ-
ಷ್ವಾಧ್ಯಾಯಂಸ್ತಾರತಮ್ಯಂ ಸ್ಫುಟಮವತಿ ಸದಾ ವಾಯು-ರಸ್ಮದ್ಗುರುಸ್ತಮ್ ॥ ೧೫ ॥

ಶ್ರೀ ಪ್ರಾಣೇಶ ದಾಸರ ಕೃತಿ

(ಭಾಮಿನಿ ಷಟ್ಪದಿ)

ಗುಣ ಗಣಗಳಖಿಳದಲಿ ನಾರಾ- ।
ಯಣಗೆ, ಅತ್ಯುತ್ತಮದಿ ಇಹ ಕಾ- ।
ರಣವು, ಆ ವಿಷ್ಣು ನಲಿ ಶ್ರೇಷ್ಠಾದಂಥ ಭಕ್ತಿಯನು ।
ವನಜ ಆಲಯ ಧರಿಯ ಆಲಿಂ- ।
ಗನಿಯೊಳಲಿಹ ಹರಿಯಲ್ಲಿ ಆವಾ- ।
ತನು ಮಾಡುತಿಹನು ತರುವಾಯದಲಿ ಹರಿ ಕುರಿತು ॥ ೩೩ ॥
ಪರಿವಾರಾಪ್ತಕರಾಗಿ ಇರುವರು ।
ಸರಿಸಿಜಾಸನ ಶ್ವಸನ ವಿಹಗಪ ।
ಉರಗಪತಿ ರುದ್ರೇಂದ್ರ ಮೊದಲಾದ್ದರಿಯ ದಾಸರೊಳೂ ॥ ೩೪ ॥
ಹಿರಿಕಿರಿದು ತರತಮ್ಯ ಚನ್ನಾ- ।
ಗರಿತು ಸ್ಮರಿಸುತ ಭಕ್ತಿ ಮಾಡುವ ।
ನರಗೆ ಮದ್ಗುರು ಮರುತನೀಶ ರಕ್ಷಿಸುತಲಿಹನು ॥ ೩೪ ॥

ತಾತ್ಪರ್ಯಃ-

ಶ್ರೀ ರಮಾರಮಣನೂ, ಬ್ರಹ್ಮರುದ್ರೇಂದ್ರಾದಿ ದೇವತೆಗಳಿಂದ ಪರಮ ಪೂಜ್ಯನೂ, ಶ್ರೀಮನ್ ನಾರಾಯಣನೂ, ವೇದಪ್ರತಿಪಾದ್ಯನೂ ಆದ ಶ್ರೀ ಹರಿಯು ಅನಂತ ಗುಣವುಳ್ಳವನು. ಒಂದೊಂದು ಗುಣವೂ ಪರಿಪೂರ್ಣವಾಗಿರುವ ಸ್ವತಂತ್ರನು, ಅಪ್ರಾಕೃತಕಾಯನು, ಜ್ಞಾನಾನಂದ ಶರೀರವುಳ್ಳವನು, ಸಕಲ ದೋಷದೂರನು. ನೀರಜ ಭವಾಂಡೋದಯ ಸ್ಥಿತಿಕಾರಣನು ಕೈವಲ್ಯ ದಾಯಕನು ನಿತ್ಯತೃಪ್ತನು. ಇಂಥ ಭಗವಂತನ ಪರಮಾನುಗ್ರಹಕ್ಕೆ ಪಾತ್ರರಾದ, ಬ್ರಹ್ಮದೇವರಲ್ಲಿ ವಾಯುದೇವರಲ್ಲಿ ಮತ್ತು ತಾರತಮ್ಯೋಕ್ತ ಎಲ್ಲ ದೇವತೆಗಳಲ್ಲಿ, ಗುರುಗಳಲ್ಲಿ ಮತ್ತು ಸರ್ವೋತ್ತಮ ಶ್ರೀಹರಿಯಲ್ಲಿ ಚೆನ್ನಾಗಿ ಭಕ್ತಿ ಮಾಡಬೇಕು. ವಾಯುದೇವರು ಮೂರು ಅವತಾರಗಳಲ್ಲಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಸದ್ಭಕ್ತರನ್ನು ರಕ್ಷಿಸಿದ್ದಾರೆ. ಇಂಥ ವಾಯುದೇವರ ಚರಣ ಸ್ಮರಣೆ ಸದಾ ಮನದಲ್ಲಿ ನೆಲೆಸಿರಲಿ.

(ಆವಾ- ।ತನು ಮಾಡುತಿಹನು = ಯಃ ಸಂಧತ್ತೇ) (ಸರಿಸಿಜಾಸನ ಶ್ವಸನ ವಿಹಗಪ ।
ಉರಗಪತಿ ರುದ್ರೇಂದ್ರ ಮೊದಲಾದ್ದರಿಯ ದಾಸರೊಳೂ । ಹಿರಿಕಿರಿದು ತರತಮ್ಯ ಚನ್ನಾ- ।
ಗರಿತು = ವಿರಿಂಚ-ಶ್ವಸನ-ವಿಹಗಪಾ-ನಂತ ರುದ್ರೇಂದ್ರ ಪೂರ್ವೇ-ಷ್ವಾಧ್ಯಾಯಂಸ್ತಾರತಮ್ಯಂ ಸ್ಫುಟಮ್)
(ವನಜ ಆಲಯ ಧರಿಯ ಆಲಿಂ- । ಗನಿಯೊಳಲಿಹ ಹರಿಯಲ್ಲಿ = ಸಂಶ್ಲಿಷ್ಟೇ ಶ್ರೀಧರಾಭ್ಯಾಮ್ ಅಮುಮ್)

ಶ್ಲೋಕ(೧೬)

ತತ್ವ-ಜ್ಞಾನ್ ಮುಕ್ತಿ-ಭಾಜಃ ಸುಖಯಸಿ ಹಿ ಗುರೋರ್ಯೋಗ್ಯತಾ ತಾರತಮ್ಯಾದ್
ಆಧತ್ಸೇ ಮಿಶ್ರ-ಬುದ್ಧೀನ್ ತ್ರಿದಿವ-ನಿರಯ-ಭೂಗೋಚರಾನ್ ನಿತ್ಯ-ಬದ್ಧಾನ್ ।
ತಾಮಿಸ್ರಾಂಧಾದಿಕಾಖ್ಯೇ ತಮಸಿ ಸು-ಬಹುಲಂ ದುಃಖಯಸ್ಯ-ನ್ಯಥಾಜ್ಞಾನ್
ವಿಷ್ಣೋರಾಜ್ಞಾಭಿರಿತ್ಥಂ ಶ್ರುತಿಶತಮಿತಿಹಾಸಾದಿ ಚಾಕರ್ಣಯಾಮಃ ॥೧೬ ॥

(ಭಾಮಿನಿ ಷಟ್ಪದಿ)

ಗುರುವೆ ತತ್ವಜ್ಞಾನ ಇಹ ಅಪ- ।
ವರಗ ಯೋಗ್ಯದ ಜೀವ ಮಾನುಷ- ।
ವರರು ಮೊದಲಾದರಿಗೆ ತರತಮ್ಯಾನುಸಾರದಲಿ ।
ಹರುಷದಲಿ ಸುಖಬಡಿಸಿ ಸಲುಹುವಿ ।
ನಿರುತ ಸಂಸಾರಿಗಳ ಸ್ವರ್ಗದಿ ।
ನಿರಯ ಭೂಮಿಯೊಳಿಡುವಿ ಮಿಶ್ರಜ್ಞಾನ ಕಾರಣದಿ ॥೩೫ ॥
ಅನ್ಯ ಜ್ಞಾನರ ಅಂಧತಾಮಿ -
ಶ್ರೆನ್ನುತಿಹ ತಮಸಿನಲಿ ಅತಿದೃಢ- ।
ದುಣ್ಣಿಸುವಿ ದುಃಖವನು ಈ ರೀತಿಯಲಿ ಹರಿ ಆಜ್ಞಾ।
ನಿನ್ನೊಳಿಹದೆಂದೆನುತ ಶ್ರುತಿ ಶತ ।
ಘನ್ನ ಇತಿಹಾಸಗಳು ಭಾರತ- ।
ವನ್ನೆ ಮೊದಲು ಪ್ರಸಿದ್ಧ ಗ್ರಂಥವು ಕೇಳುತಿಹವೆಲ್ಲ ॥೩೬ ॥

ತಾತ್ಪರ್ಯಃ-

ವಾಯು ಜೀವೋತ್ತಮರು, ಮುಕ್ತಿಯೋಗ್ಯರಾದ ಸರ್ವಜೀವರಿಗೂ ಸುಜ್ಞಾನವನ್ನು ಅವರವರ ಗುರುಗಳಿಂದ ಪಡೆಯುವಂತೆ ಮಾಡುವಿರಿ. ನಿತ್ಯ ಸಂಸಾರಿಗಳಿಗೆ ಮಿಶ್ರ ಜ್ಞಾನ, ತಮೋಯೋಗ್ಯಜೀವರಿಗೆ ವಿಪರೀತ ಜ್ಞಾನ ಕೊಡುವಿರಾದ್ದರಿಂದ ಭಗವಂತನ ಸಂಕಲ್ಪದಂತೆ 'ಜೀವ'ರಿಗೆಲ್ಲರಿಗೂ ಗುರುಗಳೆಂದರೆ ವಾಯುದೇವರೇ ಆಗಿದ್ದಾರೆ. ಆ ಜೀವರುಗಳಿಂದ ಅವರವರಿಗೆ ಅವರ ಗುಣ ಅನುಸಾರ ಸಾಧನ ಮಾಡಿಸುವವರು ವಾಯುದೇವರು. ಸ್ವರ್ಗ ಮೋಕ್ಷದಿ ಸುಖವನ್ನು. ತಮೋಯೋಗ್ಯರಿಗೆ ದುಃಖವನ್ನು ಕೊಡುವ ಅಧಿಕಾರವು ಶ್ರೀ ಹರಿಗೆ ಮಾತ್ರ ಇದೆ. ಆದರೂ ತನ್ನ ಭಕ್ತಾಗ್ರೇಸರರಾದ ವಾಯುದೇವರಿಗೆ ಈ ಸುಖ ದುಃಖಗಳನ್ನು ಕೊಡುವಂತೆ ಹರಿಯಾಜ್ಞೆಯಾಗಿದೆ. ವೇದಗಳು, ಸಚ್ಛಾಸ್ತ್ರಗಳು, ಭಾರತ ಇತಿಹಾಸಾದಿಗಳು ಇದಕ್ಕೆ ಪ್ರಮಾಣವಾಗಿವೆ.

(ಅಪ-ವರಗ ಯೋಗ್ಯದ ಜೀವ ಮಾನುಷ- । ವರರು = ಮುಕ್ತಿಭಾಜಃ) (ನಿರುತ ಸಂಸಾರಿಗಳ -ಮಿಶ್ರ-ಬುದ್ಧೀನ್) (ಸ್ವರ್ಗದಿ ।
ನಿರಯ ಭೂಮಿಯೊಳಿಡುವಿ = ತ್ರಿದಿವ-ನಿರಯ-ಭೂಗೋಚರಾನ್ ನಿತ್ಯ-ಬದ್ಧಾನ್ ಆಧತ್ಸೇ)

ಶ್ಲೋಕ(೧೩)

ವಂದೇಽಹಂ ತಂ ಹನೂಮಾನ್ ಇತಿ ಮಹಿತ-ಮಹಾ-ಪೌರುಷೋ ಬಾಹುಶಾಲೀ
ಖ್ಯಾತಸ್ತೇಽಗ್ರ್ಯೋಽವತಾರಃ ಸಹಿತ ಇಹ ಬಹು ಬ್ರಹ್ಮಚರ್ಯಾದಿ-ಧರ್ಮೈಃ ।
ಸಸ್ನೇಹಾನಾಂ ಸಹಸ್ವಾನಹರಹರಹಿತಂ ನಿರ್ದಹನ್ ದೇಹ ಭಾಜಾ-
ಮಂಹೋ-ಮೋಹಾಪಹೋ ಯಃ ಸ್ಪೃಹಯತಿ ಮಹತೀಂ ಭಕ್ತಿಮದ್ಯಾಪಿ ರಾಮೇ ॥ ೧೩ ॥

(ಭಾಮಿನಿ ಷಟ್ಪದಿ)

ವಾತ ನಿನಗಾನಮಿಸುವೆನು ಈ ।
ಭೂತಳದಿ ಹನುಮೆಂಬ ನಾಮದಿ ।
ಖ್ಯಾತ ಅವತಾರ ಬಹು ವಟು ಧರ್ಮವುಳ್ಳಂಥಾ ।
ನೀತಪೂಜೆಯ ಎಲ್ಲರಿಂದಲಿ ।
ತಾ ತೆಗೆದು ಕೊಂಬಂಥ ತೋಳ್ಬಲ- ।
ದಾತಿಶಯ-ಯಿದ್ದಂಥ ತಾಳುವ ಶಕ್ತಿಸಹಿತಾದ ॥ ೩೭ ॥

ಅತಿ ಬಲದ ಅವತಾರ ನೀನೇ
ಅತುಲ ಸ್ನೇಹದಲಿಂದ ಭಕ್ತಿಲಿ
ಸತತ ಸೇವಿಸುವಂಥ ದೇಹವ ಧರಿಸಿ ಇಹನೆಂಬಾ ।
ಪ್ರತಿ ದಿವಸ ಅಪ್ರೀಯವನು ದಹಿ- ।
ಸುತ ದುರಿತ ಅಜ್ಞಾನ ಕೆಡಿಸುತ ।
ಕ್ಷಿತಿಮಗಳ ಪತಿಯಲ್ಲಿ ಹರಿಭಕ್ತಿಯನು ಇಚ್ಛೈಸೀ ॥ ೩೮ ॥

ತಾತ್ಪರ್ಯಃ-

ಶ್ರೀ ವಾಯುದೇವರು ತಮ್ಮ ಮೂರು ಅವತಾರಗಳಲ್ಲಿ ಮೂಲರೂಪಕ್ಕೆ ಸಮನಾದ, ಜ್ಞಾನ ಕಾರ್ಯ, ಬಲ ಕಾರ್ಯ, ಸೇವಾಕ್ಕೈಂಕರ್ಯ ಮಾಡಿ ''ಹನುಮಾನ್'' ಎಂಬ ಹೆಸರಿಗೆ ಅನ್ವರ್ಥಕವಾಗಿ ಪ್ರಖ್ಯಾತರಾಗಿದ್ದಾರೆ. ಹನು, ಮಹಾಜ್ಞಾನಪೌರುಷ, ಬಾಹುಶಾಲಿ, ಬ್ರಹ್ಮಚರ್ಯ, ಸಹನೆ, (ಮೋಹಾಪಹಃ=) ಅಜ್ಞಾನವನ್ನು ಪರಿಹರಿಸುವವರು, ಪೂರ್ಣಭಕ್ತಿ, ನಿಷ್ಕಾಮ ಸೇವೆಯುಳ್ಳವರು, ಹರಿ ಇಚ್ಛಾನುಸಾರ ನಡೆಯುವರು ಆದ ಹನುಮಂತದೇವರು ಧೀಮಂತ, ಗುಣವಂತ, ಬಲವಂತ ಎಂದು ಹೆಸರಿಗೆ ತಕ್ಕಂತೆ ಇರುವವರಾಗಿ ಶ್ರೀರಾಮನ ದೂತರಾಗಿ, ಪ್ರಖ್ಯಾತರಾಗಿದ್ದಾರೆ. ಅಪಾರಮಹಿಮಾತಿಶಯವುಳ್ಳ ಜೀವೋತ್ತಮರಾದ ವಾಯುದೇವರಿಗೆ, ಅನಂತ ಕಲ್ಯಾಣ ಗುಣ ಪರಿಪೂರ್ಣ ಶ್ರೀಹರಿಗೆ ನನ್ನ ಅನಂತ ಪ್ರಣಾಮಗಳು.

(ನೀತಪೂಜೆಯ ಎಲ್ಲರಿಂದಲಿ । ತಾ ತೆಗೆದು ಕೊಂಬಂಥ = ಮಹಿತ)

ಶ್ಲೋಕ(೧೮)

ಪ್ರಾಕ್ ಪಂಚಾಶತ್‌ಸಹಸ್ರೈರ್ವ್ಯವಹಿತ-ಮಮಿತಂ ಯೋಜನೈಃ ಪರ್ವತಂ ತ್ವಂ
ಯಾವತ್ ಸಂಜೀವನಾದ್ಯೌಷಧ-ನಿಧಿಮಧಿಕಪ್ರಾಣ ಲಂಕಾಮನೈಷೀಃ ।
ಅದ್ರಾಕ್ಷೀದುತ್-ಪತಂತಂ ತತ ಉತ ಗಿರಿಮುತ್‌ಪಾಟಯಂತಂ ಗೃಹೀತ್ವಾಽಽ-
ಯಾಂತಂ ಖೇ ರಾಘವಾಂಘ್ರೌ ಪ್ರಣತಮಪಿ-ತದೈಕ-ಕ್ಷಣೇ ತ್ವಾಂ ಹಿ ಲೋಕಃ ॥ ೧೮ ॥

(ಭಾಮಿನಿಷಟ್ಪದಿ)

ಅಧಿಕಪ್ರಾಣನೆ ಪೂರ್ವದಲಿ ನೀ ।
ಮುದದಿ ಐವತ್ ಸಹಸ್ರಮಿತ ಗಾ- ।
ವದದ ವ್ಯವಧಾನಮಿತ-ಮೃತರ(ದ) ಸಂಜೀವನೌಷಧವಾ ।
ಮೊದಲೆ ಆಗಿಹ ವನಸ್ಪತಿಗಳಿಂ-
ದುದಧಿಯೆನಿಸಿದ ಗಂಧಮಾದನ
ಚದುರನೇ ಎಲ್ಲಾ ಗಿರಿಯ ಲಂಕಾಪುರಕೆ ತಂದೀ ॥ ೩೯ ॥

ತರುವಾಯ ಲಂಕಿದ ಕಿತ್ತಿದ ।
ಗಿರಿ ತೆಗೆದು ಕೊಂಡ್ಹಾರಿ ಮೇಲಕೆ ।
ಹರಿಪದದ ಮಾರ್ಗದಲಿ ಬಂದಾ ರಾಘವಾಂಘ್ರಿಯಲಿ ।
ಶಿರವಿಡುತ ನಮನವನು ಮಾಡಿದ ।
ಮರುತನೇ ನಿನ್ನಖಿಲ ಲೋಕದ ।
ನರರು ಒಂದೇ ಕ್ಷಣದಿ ನೋಡ್ದರು ಬಹುಪ್ರಸಿದ್ಧವಿದು ॥ ೪೦ ॥

ತಾತ್ಪರ್ಯಃ-

ಪ್ರಾಣದೇವರು ಸರ್ವತತ್ವಗಳಿಗೆ, ಸರ್ವಜೀವರಿಗೆ ಪ್ರೇರಕರು. ಸರ್ವಜೀವ ನಿಯಾಮಕರು.ಲಂಕೆಯಿಂದ ಐವತ್ತು ಸಹಸ್ರಯೋಜನ ದೂರವಿರುವ ಗಂಧಮಾದನ ಪರ್ವತವನ್ನು ಕಿತ್ತಿ ತಂದು, ಮೃತಸಂಜೀವಿನಿ, ಸಂಧಾನುಕರಣ ಮೂಲಿಕೆ, ವಿಶಲ್ಯಕರಣೀಮೂಲಿಕೆ, ಸವರ್ಣಕರಣೀ ಮೂಲಿಕೆಗಳನ್ನು ತಂದು ಅಪಾರ ಸೈನ್ಯವನ್ನು ಬದುಕಿಸಿದರು. ಒಂದೇ ಕ್ಷಣದಲ್ಲಿ ನೀವು ಗಂಧಮಾದನ ಪರ್ವತ ತರಲು, ಹಾರಿದ್ದನ್ನು, ಪರ್ವತ ಕಿತ್ತು ತಂದು, ಪ್ರಯೋಜನ ಪ್ರಬಲವಾಗಿ ಪಡೆದು, ಮರುಕ್ಷಣದಲ್ಲಿ ಶ್ರೀರಾಮಚಂದ್ರನಂಘ್ರಿಗಳಿಗೆ ನಮಸ್ಕರಿಸುತ್ತಿರುವುದನ್ನು ಎಲ್ಲಾ ದೇವತೆಗಳು ನೋಡಿ ವಿಸ್ಮಿತರಾದರು. ಇಂಥ ವಿಚಿತ್ರ ಶಕ್ತಿ, ವೇಗ, ಕಾರ್ಯನಿರ್ವಾಹಕ ದಕ್ಷತೆಯನ್ನು ಲಂಕೆಯಲ್ಲಿದ್ದವರೆಲ್ಲರೂ, ಆಕಾಶದಲ್ಲಿದ್ದವರೆಲ್ಲರು ನೋಡಿ ನಿನ್ನ ಕೊಂಡಾಡಿದ್ದಾರೆ. ಈ ರೀತಿ ಮಹಿಮಾತಿಶಯ ಶಕ್ತಿಯುಳ್ಳ ಪ್ರಾಣದೇವರಿಗೆ ನನ್ನ ಅನಂತ ನಮನಗಳು.

(ಸಂಜೀವನೌಷಧವಾ । ಮೊದಲೆ ಆಗಿಹ ವನಸ್ಪತಿಗಳಿಂದುದಧಿ = ಸಂಜೀವನಾದ್ಯೌಷಧನಿಧಿಮ್)

ಶ್ಲೋಕ(೧೫)

ವಿಷ್ಣೋರತ್ಯುತ್ತಮತ್ವಾ-ದಖಿಲ-ಗುಣ-ಗಣೈಸ್ತತ್ರ ಭಕ್ತಿಂ ಗರಿಷ್ಠಾಂ
ಸಂಶ್ಲಿಷ್ಟೇ ಶ್ರೀಧರಾಭ್ಯಾಮ-ಮುಮಥ ಪರಿವಾರಾತ್ಮನಾ ಸೇವಕೇಷು ।
ಯಃ ಸಂಧತ್ತೇ ವಿರಿಂಚ-ಶ್ವಸನ-ವಿಹಗಪಾ-ನಂತ ರುದ್ರೇಂದ್ರ ಪೂರ್ವೇ-
ಷ್ವಾಧ್ಯಾಯಂಸ್ತಾರತಮ್ಯಂ ಸ್ಫುಟಮವತಿ ಸದಾ ವಾಯು-ರಸ್ಮದ್ಗುರುಸ್ತಮ್ ॥ ೧೫ ॥

ಶ್ರೀ ಪ್ರಾಣೇಶ ದಾಸರ ಕೃತಿ
(ಭಾಮಿನಿ ಷಟ್ಪದಿ)

ಗುಣ ಗಣಗಳಖಿಳದಲಿ ನಾರಾ- ।
ಯಣಗೆ, ಅತ್ಯುತ್ತಮದಿ ಇಹ ಕಾ- ।
ರಣವು, ಆ ವಿಷ್ಣುನಲಿ ಶ್ರೇಷ್ಠಾದಂಥ ಭಕ್ತಿಯನು ।
ವನಜ ಆಲಯ ಧರಿಯ ಆಲಿಂ- ।
ಗನಿಯೊಳಲಿಹ ಹರಿಯಲ್ಲಿ ಆವಾ- ।
ತನು ಮಾಡುತಿಹನು ತರುವಾಯದಲಿ ಹರಿ ಕುರಿತು ॥ ೩೩ ॥
ಪರಿವಾರಾಪ್ತಕರಾಗಿ ಇರುವರು ।
ಸರಿಸಿಜಾಸನ ಶ್ವಸನ ವಿಹಗಪ ।
ಉರಗಪತಿ ರುದ್ರೇಂದ್ರ ಮೊದಲಾದ್ದರಿಯ ದಾಸರೊಳೂ ॥ ೩೪ ॥
ಹಿರಿಕಿರಿದು ತರತಮ್ಯ ಚನ್ನಾ- ।
ಗರಿತು ಸ್ಮರಿಸುತ ಭಕ್ತಿ ಮಾಡುವ ।
ನರಗೆ ಮದ್ಗುರು ಮರುತನೀಶ ರಕ್ಷಿಸುತಲಿಹನು ॥ ೩೪ ॥

ತಾತ್ಪರ್ಯಃ-

ಶ್ರೀ ರಮಾರಮಣನೂ, ಬ್ರಹ್ಮರುದ್ರೇಂದ್ರಾದಿ ದೇವತೆಗಳಿಂದ ಪರಮ ಪೂಜ್ಯನೂ, ಶ್ರೀಮನ್ ನಾರಾಯಣನೂ, ವೇದಪ್ರತಿಪಾದ್ಯನೂ ಆದ ಶ್ರೀ ಹರಿಯು ಅನಂತ ಗುಣವುಳ್ಳವನು. ಒಂದೊಂದು ಗುಣವೂ ಪರಿಪೂರ್ಣವಾಗಿರುವ ಸ್ವತಂತ್ರನು, ಅಪ್ರಾಕೃತಕಾಯನು, ಜ್ಞಾನಾನಂದ ಶರೀರವುಳ್ಳವನು, ಸಕಲ ದೋಷದೂರನು. ನೀರಜ ಭವಾಂಡೋದಯ ಸ್ಥಿತಿಕಾರಣನು ಕೈವಲ್ಯ ದಾಯಕನು ನಿತ್ಯತೃಪ್ತನು. ಇಂಥ ಭಗವಂತನ ಪರಮಾನುಗ್ರಹಕ್ಕೆ ಪಾತ್ರರಾದ, ಬ್ರಹ್ಮದೇವರಲ್ಲಿ ವಾಯುದೇವರಲ್ಲಿ ಮತ್ತು ತಾರತಮ್ಯೋಕ್ತ ಎಲ್ಲ ದೇವತೆಗಳಲ್ಲಿ, ಗುರುಗಳಲ್ಲಿ ಮತ್ತು ಸರ್ವೋತ್ತಮ ಶ್ರೀಹರಿಯಲ್ಲಿ ಚೆನ್ನಾಗಿ ಭಕ್ತಿ ಮಾಡಬೇಕು. ವಾಯುದೇವರು ಮೂರು ಅವತಾರಗಳಲ್ಲಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಸದ್ಭಕ್ತರನ್ನು ರಕ್ಷಿಸಿದ್ದಾರೆ. ಇಂಥ ವಾಯುದೇವರ ಚರಣ ಸ್ಮರಣೆ ಸದಾ ಮನದಲ್ಲಿ ನೆಲೆಸಿರಲಿ.

(ಆವಾ- ।ತನು ಮಾಡುತಿಹನು = ಯಃ ಸಂಧತ್ತೇ) (ಸರಿಸಿಜಾಸನ ಶ್ವಸನ ವಿಹಗಪ ।
ಉರಗಪತಿ ರುದ್ರೇಂದ್ರ ಮೊದಲಾದ್ದರಿಯ ದಾಸರೊಳೂ । ಹಿರಿಕಿರಿದು ತರತಮ್ಯ ಚನ್ನಾ- ।
ಗರಿತು = ವಿರಿಂಚ-ಶ್ವಸನ-ವಿಹಗಪಾ-ನಂತ ರುದ್ರೇಂದ್ರ ಪೂರ್ವೇ-ಷ್ವಾಧ್ಯಾಯಂಸ್ತಾರತಮ್ಯಂ ಸ್ಫುಟಮ್)
(ವನಜ ಆಲಯ ಧರಿಯ ಆಲಿಂ- । ಗನಿಯೊಳಲಿಹ ಹರಿಯಲ್ಲಿ = ಸಂಶ್ಲಿಷ್ಟೇ ಶ್ರೀಧರಾಭ್ಯಾಮ್ ಅಮುಮ್)

ಶ್ಲೋಕ(೧೬)

ತತ್ವ-ಜ್ಞಾನ್ ಮುಕ್ತಿ-ಭಾಜಃ ಸುಖಯಸಿ ಹಿ ಗುರೋರ್ಯೋಗ್ಯತಾ ತಾರತಮ್ಯಾದ್
ಆಧತ್ಸೇ ಮಿಶ್ರ-ಬುದ್ಧೀನ್ ತ್ರಿದಿವ-ನಿರಯ-ಭೂಗೋಚರಾನ್ ನಿತ್ಯ-ಬದ್ಧಾನ್ ।
ತಾಮಿಸ್ರಾಂಧಾದಿಕಾಖ್ಯೇ ತಮಸಿ ಸು-ಬಹುಲಂ ದುಃಖಯಸ್ಯ-ನ್ಯಥಾಜ್ಞಾನ್
ವಿಷ್ಣೋರಾಜ್ಞಾಭಿರಿತ್ಥಂ ಶ್ರುತಿಶತಮಿತಿಹಾಸಾದಿ ಚಾಕರ್ಣಯಾಮಃ ॥೧೬ ॥

(ಭಾಮಿನಿ ಷಟ್ಪದಿ)

ಗುರುವೆ ತತ್ವಜ್ಞಾನ ಇಹ ಅಪ- ।
ವರಗ ಯೋಗ್ಯದ ಜೀವ ಮಾನುಷ- ।
ವರರು ಮೊದಲಾದರಿಗೆ ತರತಮ್ಯಾನುಸಾರದಲಿ ।
ಹರುಷದಲಿ ಸುಖಬಡಿಸಿ ಸಲುಹುವಿ ।
ನಿರುತ ಸಂಸಾರಿಗಳ ಸ್ವರ್ಗದಿ ।
ನಿರಯ ಭೂಮಿಯೊಳಿಡುವಿ ಮಿಶ್ರಜ್ಞಾನ ಕಾರಣದಿ ॥೩೫ ॥
ಅನ್ಯ ಜ್ಞಾನರ ಅಂಧತಾಮಿ -
ಶ್ರೆನ್ನುತಿಹ ತಮಸಿನಲಿ ಅತಿದೃಢ- ।
ದುಣ್ಣಿಸುವಿ ದುಃಖವನು ಈ ರೀತಿಯಲಿ ಹರಿ ಆಜ್ಞಾ ।
ನಿನ್ನೊಳಿಹದೆಂದೆನುತ ಶೃತಿ ಶತ ।
ಘನ್ನ ಇತಿಹಾಸಗಳು ಭಾರತ- ।
ವನ್ನೆ ಮೊದಲು ಪ್ರಸಿದ್ಧ ಗ್ರಂಥವು ಕೇಳುತಿಹವೆಲ್ಲ ॥೩೬ ॥

ತಾತ್ಪರ್ಯಃ-

ವಾಯು ಜೀವೋತ್ತಮರು, ಮುಕ್ತಿಯೋಗ್ಯರಾದ ಸರ್ವಜೀವರಿಗೂ ಸುಜ್ಞಾನವನ್ನು ಅವರವರ ಗುರುಗಳಿಂದ ಪಡೆಯುವಂತೆ ಮಾಡುವಿರಿ. ನಿತ್ಯ ಸಂಸಾರಿಗಳಿಗೆ ಮಿಶ್ರ ಜ್ಞಾನ, ತಮೋಯೋಗ್ಯಜೀವರಿಗೆ ವಿಪರೀತ ಜ್ಞಾನ ಕೊಡುವಿರಾದ್ದರಿಂದ ಭಗವಂತನ ಸಂಕಲ್ಪದಂತೆ 'ಜೀವ'ರಿಗೆಲ್ಲರಿಗೂ ಗುರುಗಳೆಂದರೆ ವಾಯುದೇವರೇ ಆಗಿದ್ದಾರೆ. ಆ ಜೀವರುಗಳಿಂದ ಅವರವರಿಗೆ ಅವರ ಗುಣ ಅನುಸಾರ ಸಾಧನ ಮಾಡಿಸುವವರು ವಾಯುದೇವರು. ಸ್ವರ್ಗ ಮೋಕ್ಷದಿ ಸುಖವನ್ನು. ತಮೋಯೋಗ್ಯರಿಗೆ ದುಃಖವನ್ನು ಕೊಡುವ ಅಧಿಕಾರವು ಶ್ರೀ ಹರಿಗೆ ಮಾತ್ರ ಇದೆ. ಆದರೂ ತನ್ನ ಭಕ್ತಾಗ್ರೇಸರರಾದ ವಾಯುದೇವರಿಗೆ ಈ ಸುಖ ದುಃಖಗಳನ್ನು ಕೊಡುವಂತೆ ಹರಿಯಾಜ್ಞೆಯಾಗಿದೆ. ವೇದಗಳು, ಸಚ್ಛಾಸ್ತ್ರಗಳು, ಭಾರತ ಇತಿಹಾಸಾದಿಗಳು ಇದಕ್ಕೆ ಪ್ರಮಾಣವಾಗಿವೆ.

(ಅಪ-ವರಗ ಯೋಗ್ಯದ ಜೀವ ಮಾನುಷ- । ವರರು = ಮುಕ್ತಿಭಾಜಃ) (ನಿರುತ ಸಂಸಾರಿಗಳ
-ಮಿಶ್ರ-ಬುದ್ಧೀನ್) (ಸ್ವರ್ಗದಿ ।
ನಿರಯ ಭೂಮಿಯೊಳಿಡುವಿ = ತ್ರಿದಿವ-ನಿರಯ-ಭೂಗೋಚರಾನ್ ನಿತ್ಯ-ಬದ್ಧಾನ್ ಆಧತ್ಸೇ)

ಶ್ಲೋಕ(೧೩)

ವಂದೇಽಹಂ ತಂ ಹನೂಮಾನ್ ಇತಿ ಮಹಿತ-ಮಹಾ-ಪೌರುಷೋ ಬಾಹುಶಾಲೀ
ಖ್ಯಾತಸ್ತೇಽಗ್ರ್ಯೋಽವತಾರಃ ಸಹಿತ ಇಹ ಬಹು ಬ್ರಹ್ಮಚರ್ಯಾದಿ-ಧರ್ಮೈಃ ।
ಸಸ್ನೇಹಾನಾಂ ಸಹಸ್ವಾನಹರಹರಹಿತಂ ನಿರ್ದಹನ್ ದೇಹ ಭಾಜಾ-
ಮಂಹೋ-ಮೋಹಾಪಹೋ ಯಃ ಸ್ಪೃಹಯತಿ ಮಹತೀಂ ಭಕ್ತಿಮದ್ಯಾಪಿ ರಾಮೇ ॥ ೧೩ ॥

(ಭಾಮಿನಿ ಷಟ್ಪದಿ)

ವಾತ ನಿನಗಾನಮಿಸುವೆನು ಈ ।
ಭೂತಳದಿ ಹನುಮೆಂಬ ನಾಮದಿ ।
ಖ್ಯಾತ ಅವತಾರ ಬಹು ವಟು ಧರ್ಮವುಳ್ಳಂಥಾ ।
ನೀತಪೂಜೆಯ ಎಲ್ಲರಿಂದಲಿ ।
ತಾ ತೆಗೆದು ಕೊಂಬಂಥ ತೋಳ್ಬಲ- ।
ದಾತಿಶಯ-ಯಿದ್ದಂಥ ತಾಳುವ ಶಕ್ತಿಸಹಿತಾದ ॥ ೩೭ ॥

ಅತಿ ಬಲದ ಅವತಾರ ನೀನೇ
ಅತುಲ ಸ್ನೇಹದಲಿಂದ ಭಕ್ತಿಲಿ
ಸತತ ಸೇವಿಸುವಂಥ ದೇಹವ ಧರಿಸಿ ಇಹನೆಂಬಾ ।
ಪ್ರತಿ ದಿವಸ ಅಪ್ರೀಯವನು ದಹಿ- ।
ಸುತ ದುರಿತ ಅಜ್ಞಾನ ಕೆಡಿಸುತ ।
ಕ್ಷಿತಿಮಗಳ ಪತಿಯಲ್ಲಿ ಹರಿಭಕ್ತಿಯನು ಇಚ್ಛೈಸೀ ॥ ೩೮ ॥

ತಾತ್ಪರ್ಯ:-

ಶ್ರೀ ವಾಯುದೇವರು ತಮ್ಮ ಮೂರು ಅವತಾರಗಳಲ್ಲಿ ಮೂಲರೂಪಕ್ಕೆ ಸಮನಾದ, ಜ್ಞಾನ ಕಾರ್ಯ, ಬಲ ಕಾರ್ಯ, ಸೇವಾಕೈಂಕರ್ಯ ಮಾಡಿ "ಹನುಮಾನ್" ಎಂಬ ಹೆಸರಿಗೆ ಅನ್ವರ್ಥಕವಾಗಿ ಪ್ರಖ್ಯಾತರಾಗಿದ್ದಾರೆ. ಹನು, ಮಹಾಜ್ಞಾನಪೌರುಷ, ಬಾಹುಶಾಲಿ, ಬ್ರಹ್ಮಚರ್ಯ, ಸಹನೆ, (ಮೋಹಾಪಹ=) ಅಜ್ಞಾನವನ್ನು ಪರಿಹರಿಸುವವರು, ಪೂರ್ಣಭಕ್ತಿ, ನಿಷ್ಕಾಮ ಸೇವೆಯುಳ್ಳವರು, ಹರಿ ಇಚ್ಛಾನುಸಾರ ನಡೆಯುವವರು ಆದ ಹನುಮಂತದೇವರು ಧೀಮಂತ, ಗುಣವಂತ, ಬಲವಂತ ಎಂದು ಹೆಸರಿಗೆ ತಕ್ಕಂತೆ ಇರುವವರಾಗಿ ಶ್ರೀರಾಮನ ದೂತರಾಗಿ, ಪ್ರಖ್ಯಾತರಾಗಿದ್ದಾರೆ. ಅಪಾರಮಹಿಮಾತಿಶಯವುಳ್ಳ ಜೀವೋತ್ತಮರಾದ ವಾಯುದೇವರಿಗೆ, ಅನಂತ ಕಲ್ಯಾಣ ಗುಣ ಪರಿಪೂರ್ಣ ಶ್ರೀಹರಿಗೆ ನನ್ನ ಅನಂತ ಪ್ರಣಾಮಗಳು.

(ನೀತಪೂಜೆಯ ಎಲ್ಲರಿಂದಲಿ । ತಾ ತೆಗೆದು ಕೊಂಬಂಥ = ಮಹಿತ)

ಶ್ಲೋಕ(೧೮)

ಪ್ರಾಕ್ ಪಂಚಾಶತ್‌ಸಹಸ್ರೈರ್ವ್ಯವಹಿತ-ಮಮಿತಂ ಯೋಜನೈಃ ಪರ್ವತಂ ತ್ವಂ
ಯಾವತ್ ಸಂಜೀವನಾದ್ಯೌಷಧ-ನಿಧಿಮಧಿಕಪ್ರಾಣ ಲಂಕಾಮನೈಷೀಃ ।
ಅದ್ರಾಕ್ಷೀದುತ್-ಪತಂತಂ ತತ ಉತ ಗಿರಿಮುತ್‌ಪಾಟಯಂತಂ ಗೃಹೀತ್ವಾಽಽ-
ಯಾಂತಂ ಖೇ ರಾಘವಾಂಘ್ರೌ ಪ್ರಣತಮಪಿ-ತದೈಕ-ಕ್ಷಣೇ ತ್ವಾಂ ಹಿ ಲೋಕಃ ॥ ೧೮ ॥

(ಭಾಮಿನಿಷಟ್ಪದಿ)

ಅಧಿಕಪ್ರಾಣನೆ ಪೂರ್ವದಲಿ ನೀ ।
ಮುದದಿ ಐವತ್ ಸಹಸ್ರಮಿತ ಗಾ- ।
ವದದ ವ್ಯವಧಾನಮಿತ-ಮೃತರ(ದ) ಸಂಜೀವನೌಷಧವಾ ।
ಮೊದಲೆ ಆಗಿಹ ವನಸ್ಪತಿಗಳಿಂ-
ದುದಧಿಯೆನಿಸಿದ ಗಂಧಮಾದನ
ಚದುರನೇ ಎಲ್ಲಾ ಗಿರಿಯ ಲಂಕಾಪುರಕೆ ತಂದೀ ॥ ೩೯ ॥

ತರುವಾಯ ಲಂಕಿದ ಕಿತ್ತಿದ ।
ಗಿರಿ ತೆಗೆದು ಕೊಂಡ್ಹಾರಿ ಮೇಲಕೆ ।
ಹರಿಪದದ ಮಾರ್ಗದಲಿ ಬಂದಾ ರಾಘವಾಂಘ್ರಿಯಲಿ ।
ಶಿರವಿಡುತ ನಮನವನು ಮಾಡಿದ ।
ಮರುತನೇ ನಿನ್ನಖಿಲ ಲೋಕದ ।
ನರರು ಒಂದೇ ಕ್ಷಣದಿ ನೋಡ್ದರು ಬಹುಪ್ರಸಿದ್ಧವಿದು ॥ ೪೦ ॥

ತಾತ್ಪರ್ಯ:-

ಪ್ರಾಣದೇವರು ಸರ್ವತತ್ವಗಳಿಗೆ, ಸರ್ವಜೀವರಿಗೆ ಪ್ರೇರಕರು. ಸರ್ವಜೀವ ನಿಯಾಮಕರು.ಲಂಕೆಯಿಂದ ಐವತ್ತು ಸಹಸ್ರಯೋಜನ ದೂರವಿರುವ ಗಂಧಮಾದನ ಪರ್ವತವನ್ನು ಕಿತ್ತಿ ತಂದು, ಮೃತಸಂಜೀವಿನಿ, ಸಂಧಾನುಕರಣ ಮೂಲಿಕೆ, ವಿಶಲ್ಯಕರಣೀಮೂಲಿಕೆ, ಸವರ್ಣಕರಣೀ ಮೂಲಿಕೆಗಳನ್ನು ತಂದು ಅಪಾರ ಸೈನ್ಯವನ್ನು ಬದುಕಿಸಿದರು. ಒಂದೇ ಕ್ಷಣದಲ್ಲಿ ನೀವು ಗಂಧಮಾದನ ಪರ್ವತ ತರಲು, ಹಾರಿದ್ದನ್ನು, ಪರ್ವತ ಕಿತ್ತು ತಂದು, ಪ್ರಯೋಜನ ಪ್ರಬಲವಾಗಿ ಪಡೆದು, ಮರುಕ್ಷಣದಲ್ಲಿ ಶ್ರೀರಾಮಚಂದ್ರನಂಘ್ರಿಗಳಿಗೆ ನಮಸ್ಕರಿಸುತ್ತಿರುವುದನ್ನು ಎಲ್ಲಾ ದೇವತೆಗಳು ನೋಡಿ ವಿಸ್ಮಿತರಾದರು. ಇಂಥ ವಿಚಿತ್ರ ಶಕ್ತಿ, ವೇಗ, ಕಾರ್ಯನಿರ್ವಾಹಕ ದಕ್ಷತೆಯನ್ನು ಲಂಕೆಯಲ್ಲಿದ್ದವರೆಲ್ಲರೂ, ಆಕಾಶದಲ್ಲಿದ್ದವರೆಲ್ಲರು ನೋಡಿ ನಿನ್ನ ಕೊಂಡಾಡಿದ್ದಾರೆ. ಈ ರೀತಿ ಮಹಿಮಾತಿಶಯ ಶಕ್ತಿಯುಳ್ಳ ಪ್ರಾಣದೇವರಿಗೆ ನನ್ನ ಅನಂತ ನಮನಗಳು.

(ಸಂಜೀವನೌಷಧವಾ । ಮೊದಲೆ ಆಗಿಹ ವನಸ್ಪತಿಗಳಿಂದುದಧಿ = ಸಂಜೀವನಾದ್ಯೌಷಧನಿಧಿಮ್)

ಶ್ಲೋಕ(೧೯)

ಕ್ಷಿಪ್ತಃ ಪಶ್ಚಾತ್ ಸಲೀಲಂ ಶತಮತುಲಮತೇಯೋಜನಾನಾಂ ಸ ಉಚ್ಚ-
ಸ್ತಾವದ್ ವಿಸ್ತಾರವಾಂಶ್ಚಾ-ಪ್ಯುಪಲ-ಲವ ಇವ ವ್ಯಗ್ರ -ಬುದ್ಧ್ಯಾ ತ್ವಯಾತಃ ।
ಸ್ವ-ಸ್ವ-ಸ್ಥಾನ-ಸ್ಥಿತಾತಿ-ಸ್ಥಿರ ಶಕಲ-ಶಿಲಾ-ಜಾಲ-ಸಂಶ್ಲೇಷ ನಷ್ಟ-
ಚ್ಛೇದಾಂಕಃ ಪ್ರಾಗಿವಾಭೂತ್ ಕಪಿವರ-ವಪುಷಃ ತೇ ನಮಃ ಕೌಶಲಾಯ ॥ ೧೯ ॥

(ಭಾಮಿನಿ ಷಟ್ಪದಿ)

ಸರಿ ರಹಿತ ಮತಿ ಮುಖ್ಯ ಪ್ರಾಣನೆ ।
ಗಿರಿಯ ಶತ ಯೋಜನದ ಉನ್ನತ ।
ಪರಿಮಿತದ ವಿಸ್ತಾರ ಅಷ್ಟೇ ಆದರು ಸರಿಯೇ ।
ಹಿರಿದ್ನು ಶ್ರೇಷ್ಠವಾಗಿರ್ದ ಗುಣ ವಾ- ।
ನರದ ರೂಪದ ನಿನ್ನ ಆಟದಿ ।
ತರುವಾಯ ಮಣಿ ಲೇಶದೋಪಾದಿ-ರಿಸು ಪಟ್ಟಿತೆಲಾ ॥೪೧॥

ತರುವಾಯ ತಮ್ಮ ತಮ್ಮ ಸ್ಥಳದಲಿ
ಸ್ಥಿರದೊಳಿಹ ಪಾಷಾಣ ಜಾಲವು
ವರಸುತಿರೆ ಮುರಿದಿರ್ದಾನಿ ಕಿತ್ತಿರ್ದ ಖೂನಗಳಾ ।
ಯಿರದೆ ಮಾಜುತ ಮೊದಲಿನಂದದಿ
ಮರಿಯಾದಿಯನೆ ಆಯಿತು ಕೇಳು ಕಪಿ- ।
ವರ ಶರೀರನೆ ತವ ಕುಶಲಗೋಸ್ಕರ ನಮನವಂ ಮಾಳ್ಪೆ ॥ ೪೨॥

ತಾತ್ಪರ್ಯ:-
ಅತುಲಮತೇ, ಕಪಿವರವಪುಷಃ ಅಸಾಮಾನ್ಯವೆನಿಸುವ ಇತರರಿಗೆ ಸರಿಸಾಟಿ ಇಲ್ಲದ ವಿಶೇಷ ಪೂರ್ಣಪ್ರಜ್ಞಾವಂತರೆನಿಸಿದ ಕಪಿರೂಪದ ಹನುಮಂತನ ಬಲವೂ, ಕೌಶಲವು ಅಸಾಧಾರಣ ಅಪ್ರತಿಮವಾದುದು. ೧೨೦೦ ಮೈಲು, ಎತ್ತರ, ಅಷ್ಟೇ ಗಾತ್ರದ ಪರ್ವತವನ್ನು ಲಂಕಾ ಪಟ್ಟಣದಿಂದ ಐದು ಸಹಸ್ರ ಯೋಜನಾ ದೂರವಿರುವ ಆ ಮೂಲಸ್ಥಾನಕ್ಕೆ ಚಿಕ್ಕ ಗೋಲಿ ಗುಂಡನ್ನು ಆಟವಾಡಿ ಒಗೆಯುವಂತೆ, ಎಸೆದಾಗ, ಪರ್ವತದಲ್ಲಿದ್ದ ತೃಣ ಕಣ, ಜೀವರಾಶಿಗಳಿಗೆ ಯಾವ ನೋವು ಬದಲಾವಣೆಯಾಗದಂತೆ, ಯಥಾವತ್ತಾಗಿ ಅದೇ ಜಾಗಕ್ಕೆ ಪರ್ವತ ಸ್ಥಾಪಿಸಿ, ಇಟ್ಟ ನಿಮ್ಮ ಸರಿಸಾಟಿ ಇಲ್ಲದ ಬುದ್ಧಿ ಕೌಶಲ, ವಿಜ್ಞಾನಕ್ಕೆ ಅನಂತ ನಮನಗಳು. ಕಪಿರೂಪದಲ್ಲಿದ್ದಗೂ 'ಮೂಲ ರೂಪ' ವಾಯು ದೇವರಲ್ಲಿದ್ದ ಗುಣ, ಬಲ, ಅಗಣಿತ ಚಾತುರ್ಯಗಳನ್ನು ತೋರಿದ ಹನುಮಂತ ದೇವರಿಗೆ ನನ್ನ ನಮನಗಳು.
(ಸರಿ ರಹಿತ ಮತಿ ಮುಖ್ಯ ಪ್ರಾಣನೆ = ಅತುಲಮತೇ) (ಶ್ರೇಷ್ಠವಾಗಿರ್ದ ಗುಣ ವಾ-ನರದ ರೂಪದ = ಕಪಿವರ-ವಪುಷಃ) (ಮಣಿ ಲೇಶದೋಪಾದಿ- ಉಪಲ-ಲವ ಇವ) (ತರುವಾಯ ತಮ್ಮ ತಮ್ಮ ಸ್ಥಳದಲಿ ಸ್ಥಿರದೊಳಿಹ ಪಾಷಾಣ ಜಾಲವು ವರಸುತಿರೆ ಮುರಿದಿರ್ದಾನಿ ಕಿತ್ತಿರ್ದ ಖೂನಗಳಾ ।ಯಿರದೆ ಮಾಜುತ ಮೊದಲಿನಂದದಿ ಮರಿಯಾದಿಯನೆ ಆಯಿತು = ಸ್ವ-ಸ್ವ-ಸ್ಥಾನ-ಸ್ಥಿತಾತಿ-ಸ್ಥಿರ ಶಕಲ-ಶಿಲಾ-ಜಾಲ-ಸಂಶ್ಲೇಷ ನಷ್ಟ- ಚ್ಛೇದಾಂಕಃ ಪ್ರಾಗಿವಾಭೂತ್)

ಶ್ಲೋಕ(೨೦)

ದೃಷ್ಟ್ವಾ ದುಷ್ಟಾಧಿಪೋರಃ ಸ್ಫುಟಿತ-ಕನಕ-ಸದ್-ವರ್ಮ ಘೃಷ್ಟಾಸ್ಥಿಕೂಟಂ
ನಿಷ್ಪಿಷ್ಟಂ ಹಾಟಕಾದ್ರಿ ಪ್ರಕಟ-ತಟ-ತಟಾಕಾತಿ ಶಂಕೋ ಜನೋऽಭೂತ್ ।
ಯೇನಾऽಜೌ ರಾವಣಾರಿ ಪ್ರಿಯ-ನಟನ ಪಟುರ್ಮುಷ್ಟಿರಿಷ್ಟಂ ಪ್ರದೇಷ್ಟುಂ
ಕಿಂ ನೇಷ್ಟೇ ಮೇ ಸ ತೇऽಷ್ಟಾಪದ-ಕಟಕ-ತಟಿತ್ ಕೋಟಿ-ಭಾಮೃಷ್ಟ ಕಾಷ್ಠಃ ॥ ೨೦ ॥

(ಭಾಮಿನಿ ಷಟ್ಪದಿ)

ರಾವಣಾರಿಗೆ ಪ್ರಿಯ ನಟಿಸುವ ।
ಭಾವ ಪಟು ಆದಂಥ ಕರದಲಿ ।
ಸೂಸುವ ಕಂಕಣವು ಕೋಟಿ ತಟಿತ್ಪ್ರಕಾಶವನು ।
ತೀವಿ-ದಾಸೆಯ ನಿನ್ನ ಮೂಷ್ಟಿಯು
ದೇವ ಎನಗೆ ಅಭೀಷ್ಟ ಫಲಗಳು
ಈ ವದಕೆ ಶಕ್ತಲ್ಲ ವೇನೋ ಆ ಮುಷ್ಟಿಯಿಂದ ॥ ೪೩ ॥

ದುರುಳ ದೈತ್ಯಾಧಿಪ ದಶಾಸ್ಯನ ।
ಭರಮ ಕವಚವ ಸೀಳಿ ಅಸ್ಥಿಯ ।
ಮುರಿದು ನುಗ್ಗುಗಳಂತೆ ಚೂರ್ಣವ ಮಾಡುತಿರಲವನಾ ।
ಉರವು ಜನ ನೋಡಲ್ಕೆ ಹಾಟಕ- ।
ಪರವತದ ತೀರದಲಿ ಅತ್ಯಂ- ।
ತಿರುವ ಶಂಖಗಳಂತೆ ಆ ಕ್ಷಣದೊಳಗೆ ಅದು ಆಯ್ತು ॥ ೪೪ ॥

ತಾತ್ಪರ್ಯ:-
ಲಕ್ಷ್ಮಣನು ರಾವಣನ ಶಕ್ತ್ಯಾಯುಧದ ಪ್ರಯೋಗದಿಂದ ಮೂರ್ಛಿತನಾದಾಗ, ರಾವಣನು ಲಕ್ಷ್ಮಣನನ್ನು ಸೆರೆಹಿಡಿಯಲು ಪ್ರಯತ್ನಿಸಿದಾಗ, ಹನುಮಂತನು, ರಾವಣನ ಎದೆಗೆ ಹಗುರವಾಗಿ ಮುಷ್ಟಿಯಿಂದ ಹೊಡೆದನು. ಹನುಮಂತನು ಹೊಡೆಯಲು ಕೈಯೆತ್ತಿದಾಗ, ಆತನ ಕೈಯಲ್ಲಿದ್ದ ಕಂಕಣಗಳು ಕೋಟಿ ಮಿಂಚಿನಂತೆ ಪ್ರಕಾಶಿಸಿ ರಾಕ್ಷಸ ಸೈನ್ಯಕ್ಕೆ ದಿಗ್ಭ್ರಾಂತರನ್ನಾಗಿಸಿತು. ಹನುಮಂತನ ಬಲವಾದ ವಜ್ರ ಮುಷ್ಟಿಯ ತಾಡನಕ್ಕೆ ರಾವಣ ಧರಿಸಿದ ಕನಕ-ಕವಚವು ಪುಡಿಯಾಗಿ, ಎದೆ ಆಳವಾದ ಹೊಂಡವಾದಂತಾಯಿತು. ಹನುಮಂತನ ಹೊಡೆತಕ್ಕೆ ರಾವಣನ ಎದೆ ಗೂಡಿನ ಎಲವುಗಳು ಮುರಿದು ಬಿದ್ದಾಗ, ಸರೋವರದ ದಂಡೆಗೆ ಶಂಖಗಳ ರಾಶಿ ಬಿದ್ದಂತೆ ಕಂಡಿತು. ಶ್ರೀ ರಾಮನ ಭಕ್ತರಿಗೆ ಇಷ್ಟಾರ್ಥಗಳನ್ನು ಕೊಡುವ, ದೈತ್ಯಾದಿಗಳಿಗೆ ಅನಿಷ್ಟವನ್ನುಂಟು ಮಾಡುವ, ಶ್ರೀ ಪ್ರಾಣದೇವರ ಕರುಣಾಮುಷ್ಟಿ ನನ್ನ ಇಷ್ಟಾರ್ಥಗಳನ್ನು ಪೂರೈಸಲಿ ಎಂದು ಪ್ರಣಾಮಗಳನ್ನು ಸಲ್ಲಿಸುತ್ತೇನೆ.
(ದುರುಳ ದೈತ್ಯಾಧಿಪ ದಶಾಸ್ಯನ । ಭರಮ ಕವಚವ ಸೀಳಿ ಅಸ್ಥಿಯ । ಮುರಿದು ನುಗ್ಗುಗಳಂತೆ ಚೂರ್ಣವ ಮಾಡುತಿರಲು = ದುಷ್ಟಾಧಿಪೋರಃ ಸ್ಫುಟಿತ-ಕನಕ-ಸದ್-ವರ್ಮ ಘೃಷ್ಟಾಸ್ಥಿಕೂಟಂ ನಿಷ್ಪಿಷ್ಟಂ
* ದಶಾಸ್ಯ = ಹತ್ತುಮುಖದ ರಾವಣ; ಹಾಟಕಪರವತ = ಚಿನ್ನದ ಪರ್ವತವಾದ ಮೇರು

ಶ್ಲೋಕ(೨೧)

ದೇವ್ಯಾದೇಶ -ಪ್ರಣೀತಿ-ದ್ರುಹಿಣ-ಹರ-ವರಾವಧ್ಯ-ರಕ್ಷೋ-ವಿಘಾತಾ-
ದ್ಯಾ ಸೇವೋದ್ಯದ್-ದಯಾರ್ದ್ರಃ ಸಹಭುಜಮಕರೋದ್ ರಾಮನಾಮಾ ಮುಕುಂದಃ ।
ದುಷ್ಪ್ರಾಪೇ ಪಾರಮೇಷ್ಠ್ಯೇ ಕರ-ತಲಮತುಲಂ ಮೂರ್ಧ್ನಿ ವಿನ್ಯಸ್ಯ ಧನ್ಯಂ
ತನ್ವನ್ ಭೂಯಃ ಪ್ರಭೂತ-ಪ್ರಣಯ-ವಿಕಸಿತಾಬ್ಜೇಕ್ಷಣಸ್ತ್ವೇಕ್ಷಮಾಣಃ ॥ ೨೧ ॥

(ಭಾಮಿನಿ ಷಟ್ಪದಿ)

ಧರಿ ಸುತೆಗೆ ಶ್ರೀರಾಮನಾಜ್ಞವ ।
ತ್ವರದಿ ಪೇಳುತ ಬ್ರಹ್ಮ ರುದ್ರರ ।
ವರಗಳಿಂದಲವಧ್ಯರಾಗಿಹ ರಾಕ್ಷಸರುಗಳನಾ ।
ಮರಣ ಮಾಳ್ಪದ ಕಾದಿಯೆನಿಸುತ ।
ಸರುವ ಸೇವೆಯೊಳಿರಲು ಹುಟ್ಟಿದ ।
ಕರುಣ ರಸದಾರ್ದ್ರಾ ಮಗದೊಬ್ಬರಿಗೊಶ್ಯವಹ-ದಂಥಾ ॥ ೪೫ ॥
ಪರಮೇಷ್ಠಿ ಪದ ಕೊಡುತ ಅಸದೃಶ ।
ಕರತಳವು ಮೂರ್ಧ್ನಿ ಯೊಳಿಡುತಲಿ
ಗುರುವೆ ನಿನ್ನ ಕೃತಾರ್ಥ ಮಾಡೆ-ಭಿವ್ಯಕ್ತ ಸ್ನೇಹದಲೀ ।
ತಿರುಗಿ ವಿಕಸಿತ ಅಬ್ಜದೋಲ್ ಕಣ್ ।
ತೆರೆದು ಶ್ರೀರಾಮೆಂಬ್ಜೆಸರಿನ ।
ಹರಿಯು ನಿನ್ನ ವಿಶೇಷ ನೋಡುತ ಭೋಗ ಮಾಡಿದನು ॥ ೪೬ ॥

ತಾತ್ಪರ್ಯ:-

ಮೋಕ್ಷವನ್ನು ಕೊಡುವ ಅಧಿಕಾರ ಶ್ರೀ ಹರಿಯ ಹೊರತು ಅನ್ಯ ಯಾವ ದೇವತೆಗಳಿಗೆ ಇಲ್ಲ. ಶ್ರೀ ಹರಿಯು ರಾಮಾವತಾರವನ್ನೆತ್ತಿದಾಗ -ನೀವು (ವಾಯು ಹನುಮಂತ ದೇವರು) ಮಾಡಿದ ಅದ್ಭುತ, ಅಗಣಿತ ಸೇವೆಗೆ ಮೆಚ್ಚಿ ಕರುಣಾ ರಸಾರ್ದ್ರಭರಿತನಾದ ಶ್ರೀರಾಮನ ಪ್ರೀತಿ ಪ್ರತಿ ಕ್ಷಣ-ಕ್ಷಣಕ್ಕೆ ಉಕ್ಕಿ ಸಂತೋಷದಿಂದ ಶ್ರೀರಾಮನ ನಯನಾರವಿಂದಗಳು ಅರಳಿ ನಿಮ್ಮನ್ನೇ ವೀಕ್ಷಿಸುತ್ತಿದ್ದವು. ಬ್ರಹ್ಮ-ರುದ್ರ ದೇವರಿಂದ ವರ ಪಡೆದ ಅವಧ್ಯ ರಾಕ್ಷಸರನ್ನು ಶ್ರೀ ಹರಿ ಸಂಕಲ್ಪದಂತೆ ಅಂತ್ಯಾರ್ಹರನ್ನಾಗಿ ಮಾಡಿ (ಅಂತ್ಯ = ಸಾವು) ಸದೆ ಬಡಿದು, ಶ್ರೀ ಸೀತಾ ಪತಿಯ ಸೇವೆ ಅಮೋಘವಾಗಿ ಮಾಡಿದ, ಈಡಿಲ್ಲದ ಪುಣ್ಯ ಕಾರ್ಯಕ್ಕೆ ಮನ ಮೆಚ್ಚಿ ಶ್ರೀರಾಮನು ನಿಮ್ಮ ಶಿರದ ಮೇಲೆ ಅಸದೃಶವಾದ ಅಮೃತ ಹಸ್ತವನ್ನು ಇಟ್ಟು ಅನುಗ್ರಹಿಸಿದನು. ಸ್ವರ್ಗ ಲೋಕದ ಸ್ವರೂಪಸುಖವನ್ನು ಶ್ರೀಹರಿಯು ಭೋಗಿಸುತ್ತಿದ್ದಂತೆ, ನಿಮಗೂ ಆ ಸುಖದ ಸಹಭೋಗ ನೀಡಿ ಬ್ರಹ್ಮಪದವಿ ಕರುಣಿಸಿದ್ದಾನೆ. ಶ್ರೀ ರಾಮನ ಕರುಣಾ ಪಾರಮ್ಯ ಪಡೆದ ಶ್ರೀರಾಮದೂತನಾದ ಪ್ರಾಣದೇವರು ನನಗೆ ಜ್ಞಾನ-ಭಕ್ತಿ-ವಿರಕ್ತಿ ಸಾಧನೆಗೆ ತ್ರಾಣ ಕರುಣಿಸಲಿ ಎಂದು ಪ್ರಾರ್ಥಿಸುವೆ.

(ಧರಿ ಸುತೆಗೆ = ದೇವ್ಯಾ) (ಮಗದೊಬ್ಬರಿಗೊಶ್ಯವಹ-ದಂಥಾ = ದುಷ್ಪ್ರಾಪೇ)

ಧರಿ ಸುತೆಗೆ = ಭೂಮಿಯ ಮಗಳಾದ ಜಾನಕೀ ದೇವಿ(ಸೀತಾದೇವಿಗೆ); ಮಗದೊಬ್ಬರಿಗೊಶ್ಯವಹ-ದಂಥಾ = ಇನ್ನೊಬ್ಬರಿಗೆ ವಶವಲ್ಲದ, ಸಿಗದ

ಶ್ಲೋಕ(೨೨)

ಜಘ್ನೇ ನಿಘ್ನೇನ ವಿಘ್ನೋ ಬಹುಲ-ಬಲ-ಬಕಧ್ವಂಸನಾದ್ ಯೇನ ಶೋಚದ್-
ವಿಪ್ರಾನು ಕ್ರೋಶ-ಪಾಶೈ-ರಸು-ವಿಧೃತಿ ಸುಖಸ್ಯೈಕ ಚಕ್ರಾ-ಜನಾನಾಮ್ ।
ತಸ್ಮೈ ತೇ ದೇವಕುರ್ಮಃ ಕುರು -ಕುಲ-ಪತಯೇ ಕರ್ಮಣಾ ಚ ಪ್ರಣಾಮಾನ್
ಕಿರ್ಮೀರಂ ದುರ್ಮತೀನಾಂ ಪ್ರಥಮಮಥಚಯೋ ನರ್ಮಣಾ ನಿರ್ಮಮಾಥ ॥ ೨೨ ॥

(ಭಾಮಿನಿ ಷಟ್ಪದಿ)

ಎಲೊ ಎಲೊ ಕ್ರೀಡಾ ಮೊದಲು ಗುಣ- ।
ಗಳ ವಿಶಿಷ್ಟದ ಭೀಮಶೇನನೆ
ಬಲು ಕ್ಲೇಶ ಬಡುವಂಥ ಭೂಸುರರಲ್ಲಿ ದಯೆವೆಂಬಾ ।
ಚೆಲುವ ಪಾಶಾಧೀನ ನಿನ್ನಿಂ- ।
ದಳಿಯುವಂತತಿ ಬಲದ ಬಕನಾ ।
ಪೊಳಲ ಜನರಿಗೆ ವಿಘ್ನ ಕೊಂದಸುರ-ನಧಿಕ ಸುಖವಿತ್ತೇ ॥ ೪೭ ॥
ತರುವಾಯು ದುರ್ಬುದ್ಧಿಯಾದ ಅ- ।
ಸುರ ಮೊದಲಿಗ ಕಿರ್ಮೀರವನ ।
ಪರಿಹಾಸದಿಂ ಕೊಂದೆಯಾ ಈ ಮಹಿಮೆಯುಳ್ಳಾ ।
ಕುರುಕುಲಕೆ ಪತಿಯಾದ ನಿಮಗೋ-
ಸ್ಕರ ನಿನ್ನಯ ಕರ್ಮಗಳಿಗೂ ।
ಪರಮ ಭಕುತಿಯಲಿಂದ ನಿರುತದಿ-ನಮನ ಮಾಡುವೆನು ॥ ೪೮ ॥

ತಾತ್ಪರ್ಯ:-

ಶ್ರೀ ಭೀಮಸೇನನ, ಅವತಾರದಲ್ಲಿ ಮಾಡಿರುವ ಅದ್ಭುತ ವ್ಯಾಪಾರಗಳನ್ನು ವರ್ಣಿಸುತ್ತ ಶ್ರೀ ವಾಯುದೇವರನ್ನು ಸ್ತುತಿಸಲಾಗಿದೆ. ಶ್ರೀ ಭೀಮಸೇನ ದೇವರು ಮಾಡಿದ ಬಾಲಲೀಲೆಗಳು, ಆಡಿದ ಕ್ರೀಡೆಗಳು ಹರಿವಿರೋಧಿಯಾದ ದುರ್ಯೋಧನ, ಅವನ ಅನುಯಾಯಿ, ಅಭಿಮಾನಿಗಳನ್ನು ನಿಗ್ರಹ ಮಾಡಿ, ಅಂತ್ಯಗೊಳಿಸುವ ಹಾಗೂ ಸಾಧು-ಸಜ್ಜನರ ಶೋಕ ಪರಿಹಾರಗೊಳಿಸುವ ಕಾರ್ಯಗಳಾಗಿವೆ. ಆದಿಯಲ್ಲಿ ಬಕಾಸುರ, ಕಿರ್ಮೀರನ್ನು ಕೊಂದು, ಕುರುಕುಲಕ್ಕೆ ಮಹಾ ಸಾಹಸಿಗಳೆನಿಸಿದಿರಿ. ಇದರಿಂದ ಏಕಚಕ್ರಾ ನಗರದ ಜನರಿಗೆ ಅಷ್ಟೇ ಅಲ್ಲದೆ, ಸಕಲ ಸಾತ್ವಿಕ ಜನರಿಗೆ, ಸಂತೋಷವೆನಿಸಿತು. ಹನುಮ, ಭೀಮ, ಮಧ್ವ ಮೂರು ಅವತಾರಗಳಲ್ಲಿಯೂ ಚಕ್ರಪಾಣಿ ಶ್ರೀಹರಿಯನ್ನು ಸೇವಿಸುತ್ತ, ನಿಮ್ಮ ಆಜ್ಞೆ ಮತ್ತು ಪ್ರೀತಿಯ ಚಕ್ರದಲ್ಲಿರುವವರನ್ನು ಸಂರಕ್ಷಿಸಿದ ನಿಮ್ಮ ಬಲ, ಜ್ಞಾನ ಕಾರ್ಯಕ್ಕೆ ನನ್ನ ಪುನಃ ಪುನಃ ನಮನಗಳು.

॥ಘನದಯಾನಿಧಿಯಾದ ಪವನ ರಾಯನೆ ನಮೋ ।
ಪುನರಪಿ ನಮೋ ನಿನ್ನ ಪಾದ ಸರಸಿರುಹಕೆ ॥

ಎಂಬ ಸುಳಾದಿ ಸ್ಮರಣೆಯಲ್ಲಿ ಸುಳಿಯಿತು. ಶ್ರೀ ಶೇಷದಾಸರು ರಚಿಸಿದ ಸುಳಾದಿ.

ಶ್ಲೋಕ(೨೩)

ನಿರ್ಮೃದ್ನನ್ನತ್ಯಯತ್ನಂ ವಿಜರ-ವರ ಜರಾಸಂಧ-ಕಾಯಾಸ್ಥಿ-ಸಂಧೀನ್
ಯುದ್ಧೇ ತ್ವಂ ಸ್ವಧ್ವರೇವಾ ಪಶುಮಿವ ದಮಯನ್ ವಿಷ್ಣು-ಪಕ್ಷ ದ್ವಿಡೀಶಮ್ ।
ಯಾವತ್ ಪ್ರತ್ಯಕ್ಷ-ಭೂತಂ ನಿಖಿಲ-ಮಖ-ಭುಜಂ-ತರ್ಪಯಾಮಾಸಿಥಾಸೌ
ತಾವತ್ಯಾऽऽಯೋಜಿ ತೃಪ್ತ್ಯಾ ಕಿಮು ವದ ಭಗವನ್ ರಾಜಸೂಯಾಶ್ವಮೇಧೇ ॥ ೨೩ ॥

(ಭಾಮಿನಿ ಷಟ್ಪದಿ)

ಜರೆರಹಿತ ದೇವತೆ ಗಳೆಲ್ಲರ ।
ಹಿರಿಯನೆನಿಸುವ ಭೀಮಶೇನನೆ ।
ಜರಿಜಕಾಯದ ಅಸ್ಥಿ ಸಂಧಿಗಳನು ಅನಾಯಾಸ ।
ಮುರಿದು ಯುದ್ಧದಿ ಸಧ್ವರಪರಿ
ಹರಿಯ ಪಕ್ಷಗರಿಗಳೆನಿಸಿರುವ ।
ದುರಳರೀಶಾ ಮಾಗಧನ ಮೇಧದಲಿ ಪಶುವೋಲು ॥ ೪೯ ॥

ಮರಣ ಮಾಡಿ ಪ್ರತ್ಯಕ್ಷ ತೋರುವ ।
ಧರಿಯೊಳಖಿಳಾ ಯಾಗ ಭುಂಜಿಪ ।
ಹರಿಗೆ ಯಾವತ್ತೃಪ್ತಿ ಬಡಿಸಿದ್ಯೆ ಪೂಜ್ಯ ಶ್ರೀ ಭೀಮಾ ।
ಅರಸ ಸೂಯಾಧರಿ ಮೇಧದಲಿ ಆ ।
ಹರಿಯು ಪೂರ್ಣಾದಂಥ ತೃಪ್ತದಿ ।
ಮರುತ ನಿಮ್ಮೊಳು ಸಂಬಂಧ ಮಾಡಿದನೆ ಏನ್ಹೇಳೋ ॥ ೫೦ ॥

ತಾತ್ಪರ್ಯಃ-

ಪಾಂಡುರಾಜನಿಗೆ ಇಂದ್ರ ಸಭೆಯ ಗೌರವ ಪ್ರಾಪ್ತಿಯಾಗಲು ರಾಜಸೂಯ ಯಾಗ ಮಾಡಬೇಕೆಂದು ನಾರದನು ಧರ್ಮ ರಾಜನಿಗೆ ತಿಳಿಸುತ್ತಾನೆ. ಈ ಯಜ್ಞ ಮಾಡಲು ಶ್ರೀ ಕೃಷ್ಣನ ಅಪ್ಪಣೆ -ಸಲಹೆ ಕೇಳಿಕೊಳ್ಳುತ್ತಾನೆ. ಶ್ರೀ ಕೃಷ್ಣನ ವೈರಿ ಹಾಗು ಹರಿ ಭಕ್ತರ ದ್ವೇಷಿಗಳ ಮುಖಂಡನಾದ ಜರಾಸಂಧ-(ಮಾಗಧನ)ನ ವಧೆಯಾಗದೆ-ಈ ಯಜ್ಞ ಸಫಲವಾಗದು ಎಂದು ತಿಳಿದು, ಭೀಮಾರ್ಜುನರೊಡನೆ, ಶ್ರೀಕೃಷ್ಣನು ಗಿರಿವ್ರಜ ಎಂಬ ನಗರಕ್ಕೆ ಜರಾಸಂಧನಿದ್ದಲ್ಲಿಗೆ ಹೋದನು. ಯುದ್ಧ ಏರ್ಪಟ್ಟಿತು. ಮುಪ್ಪಿಲ್ಲದ ದೇವತೆಗಳಿಗೆ ಶ್ರೇಷ್ಠರಾಗಿ ಒಪ್ಪುತ್ತಿರುವ ಭೀಮಸೇನ ದೇನರು ಜರಾಸಂಧನೊಡನೆ ಸೆಣೆಸಿ, ಬ್ರಹ್ಮ ದೇವರಿಂದ ವರ ಪಡೆದ ಆ ಜರಾಸಂಧನನ್ನು ಹರಿ ಇಚ್ಛೆಗನುಗುಣವಾಗಿ, ಅನಾಯಾಸವಾಗಿ ಜರಾಸಂಧನ ದೇಹವನ್ನು ಇಬ್ಭಾಗಮಾಡಿ, ಶ್ರೀಹರಿ ಸಮ್ಮುಖದಲ್ಲಿ (ಪ್ರತ್ಯಕ್ಷವಾಗಿ) ಯುದ್ಧ ಎಂಬ ಯಜ್ಞದಲ್ಲಿ ಪೂರ್ಣಾಹುತಿಯನ್ನಾಗಿ ಕೊಟ್ಟು ಮುಕುಂದನ ಪ್ರೀತಿಗೆ ಪಾತ್ರರಾದರು. ಅಂತಹ ಶ್ರೀ ಭೀಮಶೇನ ದೇವರು ನಮಗೂ ಜ್ಞಾನ ಶಕ್ತಿಯನ್ನು ಕೊಡುವಂತೆ ಅನುಗ್ರಹಿಸಲಿ.
(ಹರಿಯ ಪಕ್ಷಗರಿಗಳೆನಿಸಿರುವ । ದುರಳರೀಶಾ ಮಾಗಧನ = ವಿಷ್ಣು-ಪಕ್ಷ ದ್ವಿಡೀಶಮ್) (ವಿಜರ-ವರ = ಜರೆರಹಿತ ದೇವತೆ ಗಳೆಲ್ಲರ । ಹಿರಿಯನೆನಿಸುವ ಭೀಮಶೇನನೆ) (ಪ್ರತ್ಯಕ್ಷ ತೋರುವ । ಧರಿಯೊಳಖಿಳಾ ಯಾಗ ಭುಂಜಿಪ । ಹರಿಗೆ ಯಾವತ್ತೃಪ್ತಿ ಬಡಿಸಿದ್ಯೆ = ಪ್ರತ್ಯಕ್ಷ-ಭೂತಂ ನಿಖಿಲ-ಮಖ- ಭುಜಂ-ತರ್ಪಯಾಮಾಸಿಥ)

ಶ್ಲೋಕ(೨೪)

ಕ್ಷ್ವೇಳಾಕ್ಷೀಣಾಟ್ಟಹಾಸಂ ತವರಣಮರಿ-ಹನ್ನುದ್ಗದೋದ್ದಾಮಬಾಹೋಃ
ಬಹ್ವಕ್ಷೋಹಿಣ್ಯನೀಕ-ಕ್ಷಪಣ-ಸುನಿಪುಣಂ ಯಸ್ಯ ಸರ್ವೋತ್ತಮಸ್ಯ ।
ಶುಶ್ರೂಷಾರ್ಥಂ ಚಕರ್ಥ ಸ್ವಯಮಯಮಿಹ ಸಂವಕ್ತುಮಾನಂದತೀರ್ಥ
ಶ್ರೀ ಮನ್ನಾಮನ್ ಸಮರ್ಥಸ್ತ್ವಮಪಿ ಹಿ ಯುವಯೋಃ ಪಾದಪದ್ಮಂ ಪ್ರಪದ್ಯೇ ॥ ೨೪ ॥

(ಭಾಮಿನಿ ಷಟ್ಪದಿ)

ಅರಿ ಸಂಹಾರಕ-ನಾದ ಸಂಪ- ।
ತ್ಕರದ ಆನಂದಾರ್ಯ ನಾಮದಿ ।
ಇರುವ ಭೀಮನ ಸಿಂಹದೋಪಾದೇಲಿ ಅಭಿವೃದ್ಧ ।
ಹಿರಿ ನಗಿಯು ಯುಕ್ತಾದ ನಿನ್ನೊಳು ।
ಬರುವ ಬಹಳಾ ಕ್ಷೋಹಿಣೀ ದಳ ।
ತ್ವರದಿ ಸಂಹಾರ ಮಾಡಿ ಬಹು ನಿಪುಣದಲಿ ರಣವನ್ನೂ ॥ ೫೧ ॥

ದಾವ ಸರ್ವೋತ್ತಮಗೆಯಿದು ಅತಿ- ।
ಸೇವ ಅರ್ಥದಿ ಮಾಡ್ದ ಮಹಗದೆ ।
ತಾವು ಹಿಡಿದೆದಿರಿಲ್ಲ-ದಂಥಾ ಬಾಹುಗಳು ಉಳ್ಳಾ ।
ದೇವ ತವ ಯುದ್ಧದಿ ಅನಂತರ
ಶ್ರೀ ವರನು ಸಂಯುಕ್ತ ವಾಗಿಹ
ಭಾವದಿಂ ನಿಮ್ಮಿಬ್ಬರಡಿ ಪದ್ಮಗಳ ಮೊರೆ ಹೋಗುವೆ ॥ ೫೨ ॥

ತಾತ್ಪರ್ಯಃ-

ಶ್ರೀ ಭೀಮಸೇನ ದೇವರ ಮಹಾ-ಬಾಹು ಯುದ್ಧ ಮತ್ತು ಶ್ರೀ ಮನ್ ಮಧ್ವಾಚಾರ್ಯರ ಚಾತುರ್ಯದ ವಾಕ್ ಯುದ್ಧ ಇವೆರಡೂ ಅಪ್ರತಿಮವಾದ್ದರಿಂದ ವರ್ಣಿಸಲಸದಳವೆಂದೂ ಹೇಳುತ್ತ, ಜ್ಞಾನ ಬಲಕ್ಕೆ ಸರಿಸಾಟಿ ಇಲ್ಲದ ಭೀಮಸೇನ ಹಾಗು ಆನಂದತೀರ್ಥರ ಉಭಯರ ಪಾದಪದ್ಮಗಳಿಗೆ ಶರಣು ಶರಣೆಂದು ನಮಿಸಿದ್ದಾರೆ. ಶ್ರೀ ಮಧ್ವಾಚಾರ್ಯರು ಸಂಚರಿಸುತ್ತ ಕುರುಕ್ಷೇತ್ರಕ್ಕೆ ಬಂದಾಗ, ಭೂಗತವಾಗಿದ್ದ ಗದೆಯನ್ನು ತೆಗೆಯಿಸಿ, ಆ ಗದೆಯನ್ನು ಎತ್ತಿ ತೋರಿಸಿ, ತಾವೇ ಆ ಭೀಮಬಲವುಳ್ಳ ಭೀಮಸೇನರೆಂದು ಸ್ಪಷ್ಟಪಡಿಸಿದಿರಿ. ಭೀಮಸೇನದೇವರು ಹೂಂಕರಿಸಿದಾಗ, ಸಿಂಹನಾದ, ಅಟ್ಟಹಾಸದ ನಗುವಿನಲ್ಲಿ ಸಿಂಹಘರ್ಜನೆಯಂತೆ ಆದ ಶಬ್ದಕ್ಕೆ ವೈರಿಗಳ ಜಂಘಾಬಲವೇ ಉಡುಗಿಹೋಗುತ್ತಿತ್ತು. ಕುರುಕ್ಷೇತ್ರದಲ್ಲಿ ಮಾಡಿದ ಯುದ್ಧವು ಶ್ರೀಕೃಷ್ಣನ ಪ್ರೀತ್ಯರ್ಥ, ಭೀಮಸೇನದೇವರು ಮಾಡಿದ್ದು, ಬೇರೆ ಉದ್ದೇಶದಿಂದ ಅಲ್ಲ. ಇದನ್ನು ಶ್ರೀಕೃಷ್ಣನು ಕಣ್ಣಾರೆ ಕಂಡಿದ್ದಾನೆ. ಇವರ ಅನುಗ್ರಹ ಸ್ಮರಣೆಯಿಂದ ನನ್ನಲ್ಲಿ ಹರಿಭಕ್ತಿ ನಿರಂತರವಾಗಿ, ಸ್ಥಿರವಾಗಿರಿಸಿ ವೃದ್ಧಿಸಲೆಂದು ಬೇಡಿಕೊಳ್ಳುವೆ.
(ಸಂಪತ್ಕರದ ಆನಂದಾರ್ಯ ನಾಮದಿ । ಇರುವ = ಆನಂದತೀರ್ಥ ಶ್ರೀಮನ್ನಾಮನ್)

ಶ್ಲೋಕ(೨೫)

ದ್ರುಹ್ಯಂತೀಂ ಹೃದ್-ರುಹಂ ಮಾಂ ದ್ರುತ-ಮನಿಲ ಬಲಾದ್ ದ್ರಾವಯಂತೀಮ-ವಿದ್ಯಾ-
ನಿದ್ರಾಂ ವಿದ್ರಾವ್ಯ ಸದ್ಯೋರಚನ ಪಟುಮಥಾಽಪಾದ್ಯ ವಿದ್ಯಾ ಸಮುದ್ರ ।
ವಾಗ್-ದೇವೀ ಸಾ ಸುವಿದ್ಯಾ-ದ್ರವಿಣ-ದ ವಿದಿತಾ ದ್ರೌಪದೀ ರುದ್ರ-ಪತ್ನ್ಯಾ ॥
ದ್ಯುದ್ರಿಕ್ತಾ ದ್ರಾಗ-ಭದ್ರಾದ್ ರಹಯತು ದಯಿತಾ ಪೂರ್ವಭೀಮಾಽಜ್ಞಯಾ ತೇ ॥ ೨೫ ॥

(ಭಾಮಿನಿ ಷಟ್ಪದಿ)

ಜ್ಞಾನ ತತ್ವ ಸಮುದ್ರನೇ ಸು- ।
ಜ್ಞಾನ ತತ್ವೆಂಬಂಥ ದ್ರವ್ಯವು ।
ನೀನು ಕೊಡವವ ಮುಂಚೆ ಭೀಮಾವತಾರ ತಾಳ್ದ ಶಾಪಾ ।
ಏಣಲೋಚನೆ ದ್ರೌಪದಿಯು ಶಿವ - ।
ರಾಣಿ ಶಚ್ಯಾದಿಗಳಧಿಕ ತವ ।
ಮಾನಿನಿಯು ವಾಗ್ದೇವಿ ದ್ರೋಹವ ಮಾಳ್ಪ ಬುದ್ಧಿಯನು ॥ ೫೩ ॥

ಮತ್ತೆ ಹೃದಯದಿ ದುಃಖ ಬಡಿಪದು ।
ಅತ್ತ ಇತ್ತೋಡಾಡುತಿಹ ಮನ ।
ಕತ್ತಲೆಯ ಅಜ್ಞಾನಾಲಶ್ಯವು ನಿನ್ನ ಆಜ್ಞೆಯಲಿ ।
ಶಕ್ತಿ ಕಳೆದವಕೆಲ್ಲ ಓಡಿಸಿ ।
ತತ್ಕಾಲ ಕವಿತೆ ಪೇಳ್ವ ಪಟು ಮಾಡೆ- ।
ತ್ಯಂತ ತ್ವರ ಬಹ ಅಮಂಗಲ ಬಿಡಿಸಲತಿಬಲದೀ ॥ ೫೪ ॥

ತಾತ್ಪರ್ಯಃ-

ವಾಯುದೇವರು ವಿದ್ಯಾ ಸಮುದ್ರರು, ವೇದ-ಸಚ್ಛಾಸ್ತ್ರಗಳಲ್ಲಿ ಸಾಗರದ ಆಳ ಅಗಲದಷ್ಟು ಜ್ಞಾನ ಉಳ್ಳವರು, ಪೂರ್ಣ ಪ್ರಜ್ಞರು, ಜ್ಞಾನಸಂಪತ್ತನ್ನು ಮತ್ತು ಶಾಶ್ವತ ಸುಖಕ್ಕೆ ಸಾಧನವಾದ ವಿದ್ಯೆಯನ್ನು ಬೋಧಿಸುವ ಜಗದ್ಗುರುಗಳು. ಭಾರತೀದೇವಿಯು ವೇದ ಶಾಸ್ತ್ರಗಳ ಅಭಿಮಾನಿ ದೇವತೆ; (ಅವರನ್ನು) ವಾಯುದೇವರ ಇಚ್ಛಾ-ಆಜ್ಞಾನುಸಾರ -

ಸತತ ಹರಿಯಲಿ ಗುರುಗಳಲಿ ಸದ್ರತಿಯ ಪಾಲಿಸಿ ।
ಭಾಗವತ ಭಾರತ ಪುರಾಣ ರಹಸ್ಯ ತತ್ವಗಳರುಪು ಕರುಣದಲಿ ॥''

ಎಂದು ಪ್ರಾರ್ಥಿಸುವೆ. ಅನಾದಿ ಕಾಲದಿಂದಲೂ ಅಜ್ಞಾನ, ವಿಪರೀತ ಜ್ಞಾನಗಳಿಂದ ನಿಶ್ಚಿತವಾದ ಹರಿ ಸರ್ವೋತ್ತಮತ್ವ ಜ್ಞಾನವನ್ನು ಪಡೆಯದೆ, ಸಂಸಾರ ದುಃಖ ಸಾಗರದಲ್ಲಿ ಈ ಜೀವ ನರಳುತ್ತಿದೆ. ಶ್ರೀ ವಾಗ್ದೇವಿಯಿಂದ ಸುಜ್ಞಾನವನ್ನು ಸಾಧನೆಗಾಗಿ ಬೇಗ ಕರುಣಿಸುವಂತೆ ಪ್ರೇರೇಪಿಸು, ಅವಿದ್ಯೆ ವಿಪರೀತಜ್ಞಾನದ ಅಂಧಕಾರವನ್ನು ಓಡಿಸಿ, ಜ್ಞಾನದ ಬೆಳಕಿನಲ್ಲಿ ಜೀವನ ಬೆಳಗುವಂತೆ ಮಾಡಲು ಭಾರತೀದೇವಿಯವರಿಗೆ ಮಾತ್ರ ಸಾಧ್ಯ. ಕಾರಣ ಶ್ರೀ ಭಾರತೀಶನ, ಭಾರತೀದೇವಿಯರ ಚರಣ ಕಮಲಗಳಿಗೆ ಶರಣಾಗಿ, ಕಾರುಣ್ಯಕ್ಕೆ ಪ್ರಾರ್ಥಿಸುವೆ.

(ಏಣಲೋಚನೆ = ಜಿಂಕೆಯ ಕಣ್ಣುಳ್ಳವಳು, ಅಜ್ಞಾನಾಲಶ್ಯವು = ಅವಿದ್ಯೆಯೆಂಬ ಅಜ್ಞಾನ, ಆಲಸ್ಯ)

ಶ್ಲೋಕ(೨೬)

ಯಾಭ್ಯಾಂ ಶುಶ್ರೂಷರಾಸೀಃ ಕುರು-ಕುಲ-ಜನನೇ ಕ್ಷತ್ರ-ವಿಪ್ರೋದಿತಾಭ್ಯಾಂ
ಬ್ರಹ್ಮಭ್ಯಾಂ ಬೃಂಹಿತಾಭ್ಯಾಂ ಚಿತಿ-ಸುಖ-ವಪುಷಾ ಕೃಷ್ಣನಾಮಾಸ್ಪದಾಭ್ಯಾಮ್ ।
ನಿರ್ಭೇದಾಭ್ಯಾಂ ವಿಶೇಷಾದ್ ದ್ವಿ-ವಚನ-ವಿಷಯಾಭ್ಯಾಮ್- ಅಮೂಭ್ಯಾಮ್- ಉಭಾಭ್ಯಾಂ
ತುಭ್ಯಂ ಚ ಕ್ಷೇಮದೇಭ್ಯಃ ಸರಸಿಜ ವಿಲಸಲ್ಲೋಚನೇಭ್ಯೋ ನಮೋಽಸ್ತು ॥ ೨೬ ॥

(ಭಾಮಿನಿ ಷಟ್ಪದಿ)

ಅನಿಲ ನೀ ಕುರುರಾಯನೊಂಶದಿ ।
ಜನನ ಮಾಡಿರೆ ಕ್ಷತ್ರ ಕುಲ ಬ್ರಾ- ।
ಹ್ಮಣ ಕುಲದಿ ವ್ಯಕ್ತಾಗಿ ಚಿತ ಸುಖ ದೇಹ ಯುಕ್ತಾದಾ ।
ಕೊನೆಯು ಭೇದಿಲ್ಲದ ವಿಶೇಷಾ-
ತ್ಮನ ಎರಡು ರೂಪಗಳು ವ್ಯಾಸ-ಕೃ- ।
ಷ್ಣನು ಎಂಬ ನಾಮಗಳಿಗಿವರ ವಿಷಯರಾದಂಥಾ ॥ ೫೫ ॥

ಮುದದೊಳಿಬ್ಬರು ಕೃಷ್ಣ ನಾಮಾ- ।
ಸ್ಪದರು ಶಬ್ದ ಬ್ರಹ್ಮವಾಚ್ಯರು ।
ಚದುರ ಇವರಿಬ್ಬರಿಗೆ ಸೇವೆಯ ಇಚ್ಛೆಯವನಾ-ದೀ ।
ಸದಮಲಿನ ಸಜ್ಜನರಿಗತಿ ಸುಖ- ।
ಪ್ರದನೆ ಕಣ್ಗೊಳು ಕಮಲಗಳ ಅಂ- ।
ದದಿ ಎಸೆಯುತಿಹ ನಿಮಗಾಗಲಿ ಎನ್ನ ನಮನಗಳು ॥ ೫೬ ॥

ತಾತ್ಪರ್ಯಃ-

ಶ್ರೀ ಭೀಮಸೇನ ದೇವರು ಶ್ರೀ ಕೃಷ್ಣನನ್ನು ಮತ್ತು ಶ್ರೀ ವೇದವ್ಯಾಸ ದೇವರನ್ನೂ ಸೇವಿಸುವುದಕ್ಕಾಗಿ ಕುರುಕುಲದಲ್ಲಿ ಅವತರಿಸಿದರು. ಶ್ರೀ ವೇದವ್ಯಾಸರು ನಾರಾಯಣನ ಅವತಾರವೆಂಬುದಕ್ಕೆ ಬ್ರಹ್ಮಾಂಡ ಪುರಾಣದ ಪ್ರಮಾಣವಿದೆ. ಶ್ರೀ ಕೃಷ್ಣನೂ ನಾರಾಯಣನ ಅವತಾರ. ಇವರ ದೇಹವು ಅಪ್ರಾಕೃತ. ಜ್ಞಾನಾನಂದ ಪರಿಪೂರ್ಣವಾದದ್ದು. ಆದ್ದರಿಂದ 'ಬ್ರಹ್ಮ' ಎಂದು ಕರೆಯಲಾಗಿದೆ, ಇವರ ವ್ಯಾಪ್ತಿ ಬ್ರಹ್ಮಾಂಡದ ಒಳ ಹೊರಗೂ ಇದೆ. ಕ್ಷತ್ರಿಯನಾದ ಯದುರಾಜನ ವಂಶದಲ್ಲಿ ವಸುದೇವ ಮತ್ತು ದೇವಕಿಯರಿಗೆ ಮಗನಾಗಿ ಶ್ರೀಕೃಷ್ಣ ಅವತರಿಸಿದನು. ಬ್ರಾಹ್ಮಣರಾದ ವಶಿಷ್ಠರ ವಂಶದಲ್ಲಿ ಪರಾಶರ ಮತ್ತು ಸತ್ಯವತೀ ದೇವಿಯರಿಗೆ ಮಗನಾಗಿ ಶ್ರೀ ವೇದವ್ಯಾಸದೇವರು, ಇವರಲ್ಲಿ ಭೇದವಿಲ್ಲ. ನಾರಾಯಣ, ಕ್ಷಾತ್ರ ಬ್ರಾಹ್ಮಣ ಕುಲದಲ್ಲಿ ವ್ಯಕ್ತನಾಗಿದ್ದಾನೆ. ಜ್ಞಾನ ಭಕ್ತಿ-ವೈರಾಗ್ಯದಿಂದಲೇ ಜೀವಕ್ಕೆ ಕ್ಷೇಮ. ಇಂಥ ಕ್ಷೇಮವನ್ನು ಉಂಟುಮಾಡಲು ನಿಮ್ಮ ಹನುಮ (ಭೀಮ-ಮಧ್ವರ) ಅಂತರ್ಗತ ಪ್ರಕಾಶಿಸುತ್ತಿರುವ ಶ್ರೀಕೃಷ್ಣ ವೇದವ್ಯಾಸಾತ್ಮಕ ಶ್ರೀ ಹರಿಯನ್ನು ಪ್ರಾರ್ಥಿಸುತ್ತ ಅನಂತ ಪ್ರಣಾಮಗಳನ್ನು ಅರ್ಪಿಸುತ, ನನ್ನ ನಮನಗಳು.

(ಕ್ಷತ್ರ ಕುಲ ಬ್ರಾ- ಹ್ಮಣ ಕುಲದಿ ವ್ಯಕ್ತಾಗಿ ಚಿತ ಸುಖ ದೇಹ ಯುಕ್ತಾದಾ । ಕೊನೆಯು ಭೇದಿಲ್ಲದ ವಿಶೇಷಾ-ತ್ಮನ ಎರಡು ರೂಪಗಳು ವ್ಯಾಸ-ಕೃಷ್ಣನು ಎಂಬ ನಾಮಗಳಿಗಿವರ ವಿಷಯರಾದಂಥಾ = ಕ್ಷತ್ರ-ವಿಪ್ರೋದಿತಾಭ್ಯಾಂ ಬ್ರಹ್ಮಭ್ಯಾಂ ಬೃಂಹಿತಾಭ್ಯಾಂ ಚಿತಿ-ಸುಖ-ವಪುಷಾ ಕೃಷ್ಣನಾಮಾಸ್ಪದಾಭ್ಯಾಮ್ ।)

ಶ್ಲೋಕ(೨೭)

ಗಚ್ಛನ್ ಸೌಗಂಧಿಕಾರ್ಥಂ ಪಥಿ ಸ ಹನುಮತಃ ಪುಚ್ಛಮಚ್ಛಸ್ಯ ಭೀಮಃ
ಪ್ರೋದ್ಧರ್ತುಂ ನಾಶಕತ್ ಸ ತ್ವಮುಮ್ ಉರು-ವಪುಷಾ ಭೀಷಯಾಮಾಸ ಚೇತಿ ।
ಪೂರ್ಣ-ಜ್ಞಾನೌಜಸೋಸ್ತೇ ಗುರುತಮವಪುಷೋಃ ಶ್ರೀಮದಾನಂದತೀರ್ಥ
ಕ್ರೀಡಾಮಾತ್ರಂ ತದೇತತ್ ಪ್ರಮದ-ದ ಸುಧಿಯಾಂ ಮೋಹಕ-ದ್ವೇಷಭಾಜಾಮ್ ॥೨೭॥

(ಭಾಮಿನಿ ಷಟ್ಪದಿ)

ಭರತನೇ ಭೀಮಾವತಾರದಿ ।
ಪರಿಮಳದ ಸೌಗಂಧಿಕಾರ್ಥದಿ ।
ತ್ವರದಿ ಪೋಗಲು ಮಾರ್ಗದಲಿ ಹನುಮಂತ-ಬಾಲವನು ।
ಕರದಿ ಎತ್ತಲು ಅಶಕ್ತನಾದಂ- ।
ದರಿಪ ದೊಡ್ಡ ಶರೀರದಲಿ ಪೃಥ ।
ಎ(ಗೆ?)ರಡನೇ ಮಗನಂಜಿಸಿದ ಹೀಗೆಂದು ತವ ಮಹಿಮೆ ॥
ದ್ವೇಷ ಮಾಡುವ ದೈತ್ಯ ನರಿಗೆ ।
ಮೋಸ ಮೋಹಕ ಜ್ಞಾನಿಗಳಿಗಿದು ।
ತೋಷ ಕೊಡುವದು ಗುರುತಮಾನಂದಾರ್ಯನಂತಿನ್ನಾ ।
ಲೇಸು ಅವತಾರಗಳ ಪರಿ ಪೂ- ।
ರ್ಣಾಸು-ಜ್ಞಾನದ ಬಲಕೆ ಕ್ರೀಡ ವಿ- ।
ಲಾಸ-ದೀ ವಪುಗಳು ಯೆನುತ ತಿಳಿವರು ಸುಜನರೆಲ್ಲಾ ॥

ತಾತ್ಪರ್ಯ;-
ಸಾವಿರ ದಳಗಳು ಇರುವ, ಸುಗಂಧಯುಕ್ತವಾದ, ಬಂಗಾರದ ಸೌಗಂಧಿಕಾ ಪುಷ್ಪವನ್ನು ದ್ರೌಪದಿಯು ಅಪೇಕ್ಷಿಸಿದಾಗ, ತರಲು ಭೀಮಸೇನ ದೇವರು ಹೋಗುವಾಗ ಗಂಧಮಾದನ ಪರ್ವತ ದಾಟುತ್ತಿರುವಾಗ ಹಾದಿಯಲ್ಲಿ ಕುಳಿತಿದ್ದ ಹನುಮಂತ ದೇವರನ್ನು ಕಂಡು ಬಾಲವನ್ನು ಸರಿಸಲು ಹೇಳಿದರು. ಹನುಮಂತನು 'ಬಾಲವನ್ನು ಸರಿಪಡಿಸಿಕೊಂಡು ಹೋಗು' ಎಂದು ಹೇಳಿದಾಗ, ಬಾಲವನ್ನು ಎತ್ತಲು ಸಾಧ್ಯವಾಗಲಿಲ್ಲ. ಇದರಿಂದ ಅಜ್ಞಾನಿಗಳಿಗೆ ಭೀಮಶೇನನು ಪರಾಜಿತನಾದನೆಂದು ವಿಪರೀತ ಜ್ಞಾನ ಉಂಟುಮಾಡಲು, ಮಾಡಿ ತೋರಿಸಿದ ನಿಮ್ಮ ಲೀಲೆ ಎಂದು ಜ್ಞಾನಿಗಳು ತಿಳಿಯುವರು. ಸಜ್ಜನರಿಗೆ ಸೋಂಕುವ ವಿಪರೀತ ಜ್ಞಾನ ಪರಿಹರಿಸಿ, ವಿಶೇಷ ಆನಂದವನ್ನು ಕೊಡುವ ತೀರ್ಥ ಅಂದರೆ-ಶಾಸ್ತ್ರಕ್ಕೆ, ಅಂಥಹ ಶಾಸ್ತ್ರ -ಸರ್ವಮೂಲಗ್ರಂಥಗಳನ್ನು ಬರೆದಿರುವ ಮೂರನೆ ಅವತಾರವೆನಿಸಿರುವ ಗುರುತಮರೆನಿಸಿದ ಆನಂದತೀರ್ಥರೆಂಬ ಹೆಸರು ಪ್ರಖ್ಯಾತಿಯಾಗಿದೆ. ಇಂಥವರಿಗೆ ನಮ್ಮ ನಮನಗಳು.
(ಪರಿಮಳದ ಸೌಗಂಧಿಕಾರ್ಥದಿ । ತ್ವರದಿ ಪೋಗಲು ಮಾರ್ಗದಲಿ ಹನುಮಂತ-ಬಾಲವನು । ಕರದಿ ಎತ್ತಲು ಅಶಕ್ತನಾದಂ- । ದರಿಪ = ಸೌಗಂಧಿಕಾರ್ಥಂ ಪಥಿ ಸ ಹನುಮತಃ ಪುಚ್ಛಮಚ್ಛಸ್ಯ ಭೀಮಃ ಪ್ರೋದ್ಧರ್ತುಂ ನಾಶಕತ್)

ಶ್ಲೋಕ(೨೮)

ಬಹ್ವೀಃ ಕೋಟೀರಟೀಕಃ ಕುಟಿಲ-ಕಟು-ಮತೀನ್ ಉತ್ಕಟಾಟೋಪ-ಕೋಪಾನ್
ದ್ರಾಕ್ ಚ ತ್ವಂ ಸತ್ವರ-ತ್ವಾಚ್ಚರಣದ ಗದಯಾ ಪ್ರೋಥಯಾಮಾಸಿಥಾರೀನ್ ।
ಉನ್ಮಥ್ಯಾ-ತಥ್ಯ-ಮಿಥ್ಯಾತ್ವವಚನ-ವಚನಾನ್-ಉತ್ಪಥಸ್ಥಾಂಸ್ತಥಾऽನ್ಯಾನ್ ।
ಪ್ರಾಯಚ್ಛಃ ಸ್ವ-ಪ್ರಿಯಾಯೈ ಪ್ರಿಯತಮಕುಸುಮಂ ಪ್ರಾಣ ತಸ್ಮೈ ನಮಸ್ತೇ ॥ ೨೮ ॥

(ಭಾಮಿನಿ ಷಟ್ಪದಿ)

ಶರಣರಿಗೆ ಸಂರಕ್ಷಿಸುತ ಶ್ರೀ ।
ಹರಿಯ ತೋರಿಸಿ ಕೊಡುವ ಪ್ರಾಣನೆ ।
ದುರಬುದ್ಧಿ ಕಟು ಕುಟಿಲ, ಹೆಚ್ಚಿದ ಕೆಂಗಿಡಿಯ ಕೋಪ- ।
ದಿರುವ ಬಹು ಕೋಟಿಗಳ-ಸಂಖ್ಯದ ।
ಅರಿಗಳನ ಸಂಹರಿಸಲೋಸುಗ ।
ತ್ವರ-ಗಮನದಿಂ ಗದೆಯಿಂದೀ-ಪರಿ ಕಾದಿ ಶೀಘ್ರದಲಿ ॥ ೫೯ ॥
ಒಳ್ಳೇ ಮಾರ್ಗವ ಬಿಟ್ಟ ಬದ್ಧದಿ
ಸುಳ್ಳು ವಚನವ ಹೇಳ್ವ ವಾಕ್ಯದಿ ।
ಬಲ್ಲಿದರು ಎಂದೆನಿಪ ಮತ್ತೇ ಕೆಲವು ದೈತ್ಯರನಾ ।
ಕೊಲ್ಲುತಲಿ ತ್ವರ ಪ್ರೀಯಳೆನಿಸುವ
ನಲ್ಲೆ ದ್ರೌಪದಿ ಪ್ರೀತಿ ಅತಿಶಯ
ಉಳ್ಳ ಸೌಗಂಧಿಕವ ಕೊಟ್ಟಾನಿಲನೆ ನಮೋ ನಿನಗೆ ॥ ೬೦ ॥

ತಾತ್ಪರ್ಯಃ-
ಶರಣದ ಅಂದರೆ ರಕ್ಷಕ. ಶ್ರೀಹರಿಯು ಸರ್ವರ ರಕ್ಷಕ. ಪ್ರಾಣದೇವರು ಮಧ್ವರಾಯರು ಶಾಸ್ತ್ರಗಳಿಂದ ಶ್ರೀ ಹರಿಯನ್ನು ತಿಳಿಯುವಂತೆ ಮಾಡುವರು. ಸದ್ಭಕ್ತ-ಸುಜನರಿಗೆ ಹರಿಯನ್ನು ಸದಾ ಧ್ಯಾನಿಸುವಂತೆ ಪ್ರೇರಣೆ ನೀಡಿ, ಅಂತರಂಗದಲ್ಲಿ ಶ್ರೀರಂಗನನ್ನು ಕಂಗಳಿಗೆ ಕಾಣುವಂತೆ ಅನುಗ್ರಹಿಸುವರು. ಹೀಗೆ ಭಕ್ತರನ್ನು ರಕ್ಷಿಸುವ ನಿಮಗೆ ಅನಂತ ನಮನಗಳು. ಸೌಗಂಧಿಕ ವನಕ್ಕೆ ಭೀಮಸೇನದೇವರು ಧಾವಿಸಿದಾಗ, ಅತಿ ಪ್ರಬಲವಾದ, ಅತ್ಯಂತ ಕೋಪಿಷ್ಠರಾದ, ವಿಷ್ಣು ದ್ವೇಷಿಗಳಾದ, ಮಿಥ್ಯಾವಾದಿಗಳಾದ, ಲಕ್ಷ ಲಕ್ಷ ದೈತ್ಯರೊಡನೆ ಯುದ್ಧಮಾಡಿ ಅವರೆಲ್ಲರನ್ನೂ ಗದಾಪ್ರಹಾರದಿಂದ ಸಂಹರಿಸಿದಿರಿ. ದ್ರೌಪದಿ ದೇವಿಯ ಆಕಾಂಕ್ಷೆಯಂತೆ ೮೧ ಸಹಸ್ರ ಯೋಜನಾ ದೂರವಿರುವ, ೭೫ ಸಹಸ್ರ ಯೋಜನಾ ಎತ್ತರವಿರುವ, ಗಂಧ ಮಾದನ ಪರ್ವತದಲ್ಲಿರುವ ಕುಬೇರನ ಪಟ್ಟಣಕ್ಕೆ ಹೋಗಿ ಸೌಗಂಧಿಕ ಕಮಲ ಸರೋವರಕ್ಕೆ ಧಾವಿಸಿದಿರಿ. 'ಕುಟಿಲಕಟುಮತೀನ್'ರಾದ ಮಣಿಮಂತ ಮುಂತಾದ ದೈತ್ಯರನ್ನು, ಸಂಹರಿಸಿದ ಭಿಮಸೇನದೇವರ ಅಪ್ರತಿಮ ಬಲಕ್ಕೆ ನಮೋ ನಮಃ ನಂತರ ಕುಬೇರನೊಡನೆ ಯುದ್ಧ ಮಾಡಿ ಗೆದ್ದು, ಸೌಗಂಧಿಕಾ ಪುಷ್ಪವನ್ನು ದ್ರೌಪದಿಗೆ ತಂದುಕೊಟ್ಟ-ನಿಮ್ಮ ಸಾಮರ್ಥ್ಯ ವಾತ್ಸಲ್ಯಕ್ಕೆ ಅನಂತ ಪ್ರಣಾಮಗಳು.
(ಒಳ್ಳೇ ಮಾರ್ಗವ ಬಿಟ್ಟ ಬದ್ಧದಿ ಸುಳ್ಳು ವಚನವ ಹೇಳ್ವ ವಾಕ್ಯದಿ । ಬಲ್ಲಿದರು ಎಂದೆನಿಪ ಮತ್ತೇ ಕೆಲವು ದೈತ್ಯರನಾ । =
ಉನ್ಮಥ್ಯಾ-ತಥ್ಯ-ಮಿಥ್ಯಾತ್ವವಚನ-ವಚನಾನ್-ಉತ್ಪಥಸ್ಥಾಂಸ್ತಥಾऽನ್ಯಾನ್)

ಶ್ಲೋಕ(೨೯)

ದೇಹಾದುತ್ ಕ್ರಾಮಿತಾನಾಮಧಿಪತಿ-ರಸತಾಮಕ್ರಮಾದ್ ವಕ್ರಬುದ್ಧಿಃ
ಕ್ರುದ್ಧಃ ಕ್ರೋಧೈಕವಶ್ಯಃ ಕ್ರಿಮಿರಿವ ಮಣಿಮಾನ್ ದುಷ್ಕೃತೀ ನಿಷ್ಕ್ರಿಯಾರ್ಥಮ್ ।
ಚಕ್ರೇ ಭೂ-ಚಕ್ರಮೇತ್ಯ ಕ್ರಕಚಮಿವ ಸತಾಂ ಚೇತಸಃ ಕಷ್ಟಶಾಸ್ತ್ರಂ
ದುಸ್ತರ್ಕಂ ಚಕ್ರಪಾಣೇರ್ಗುಣ-ಗಣ ವಿರಹಂ ಜೀವತಾಂ ಚಾಧಿಕೃತ್ಯ ॥ ೨೯ ॥

(ಭಾಮಿನಿ ಷಟ್ಪದಿ)

ಶರೀರ ದೊಳು ಮ್ಯಾಲೆ ಗದ ಪ್ರ- ।
ಹರದಿ ಹೊಡಿಸಿದ್ಯಾಗ ಸಜ್ಜನ ।
ದುರುಳ ದೈತ್ಯಾಧೀಶ ಕುಟಿಲದ ಬುದ್ಧಿಯುಳ್ಳವನು ।
ಪರಮ ಕೋಪದಿ ದುಷ್ಟಜಂತುನ ।
ಪರಿಯ ಕ್ರೋಧಕ ಮುಖ್ಯ ವಾಸನಾ
ನಿರುತ ದುಷ್ಕರ್ಮವುಳ್ಳ ಮಣಿಮಂತನೆಂಬ ರಾಕ್ಷಸನು ॥ ೬೧ ॥

ಹಿರಿತನದಿ ಭೂ ಚಕ್ರವನು ಸಂ- ।
ಚರಿಸಿ ಚಕ್ರವ ಕರದಿ ಪಿಡಿದಿಹ ।
ಹರಿಗೆ ಗುಣ ಗಣ ಭೇದಿಸುತ ಜೀವೈಕ್ಯ ಸ್ಥಾಪಿಸುತಾ ।
ಪರಮ ಸಜ್ಜನ ಮನಕೆ ಕರಗಸ ।
ಪರಿಯು ವೇದ ವಿರುದ್ಧ ಯುಕ್ತಿಯಲಿ ।
ಪರಿಪರಿಯ ಕಷ್ಟವನು ಕೊಡುತಿಹ ಶಾಸ್ತ್ರ ಮಾಡಿದನು ॥ ೬೨ ॥

ತಾತ್ಪರ್ಯಃ-

ಗಂಧಮಾದನ ಪರ್ವತ(ಮೇರು ಪರ್ವತ)ದಲ್ಲಿ ಸೌಗಂಧಿಕ ಕಮಲಸಾಗರವನ್ನು ರಕ್ಷಿಸುವ ಮುನ್ನೂರು ಕೋಟಿ ರಾಕ್ಷಸರನ್ನು ಭೀಮಸೇನನು ಸಂಹಾರ ಮಾಡಿದ ಸೇಡಿಗಾಗಿ ಮಣಿಮಂತನೆಂಬ ರಾಕ್ಷಸನು ಈ ಭೂಮಿ ಮೇಲೆ ಜನ್ಮವೆತ್ತಿದನು. ಬಾಹುಬಲದಿಂದಲು, ವಾಕ್ಬಲದಿಂದಲೂ ವಾಯುದೇವರನ್ನು ಸೋಲಿಸುವದು ಅಸಾಧ್ಯವೆನಿಸಿದಾಗ ''ಕಷ್ಟಶಾಸ್ತ್ರ''ಹರಿ ವಿರೋಧ-ಜೀವೈಕ್ಯಶಾಸ್ತ್ರ-(ಕುಶಾಸ್ತ್ರ)ವನ್ನು ರಚಿಸಿ ಸಜ್ಜನರ ಬುದ್ಧಿ ಕೆಡುವಂತೆ ಅಡ್ಡದಾರಿ ತುಳಿದು ನರಕಕ್ಕೆ ಮಾರ್ಗದರ್ಶಿಯಾಗಿದ್ದನು. ಶ್ರೀ ಹರಿಯ ಜಗಜನ್ಮಾದಿ ಕಾರಣನು. ಸೃಷ್ಟಿಕರ್ತ-ಸರ್ವ ವ್ಯಾಪ್ತ, ಸರ್ವದೋಷದೂರ, ಅನಂತ ಕಲ್ಯಾಣಗುಣ ಪರಿಪೂರ್ಣ, ಜ್ಞಾನಾನಂದಮಯ ಅಪ್ರಾಕೃತ, ನಿತ್ಯತೃಪ್ತ, ಕೈವಲ್ಯದಾತ ಹೀಗೆಂದು ವೇದ-ಆಗಮ-ಶಾಸ್ತ್ರಗಳು ಭಗವಂತನನ್ನು ಸ್ತುತಿಸುತ್ತಿರುವಾಗ ಮಣಿಮಂತನು ಇದಕ್ಕೆ ವಿರೋಧವಾಗಿ ಶಾಸ್ತ್ರರಚಿಸಿದನು.

ಶ್ಲೋಕ(೩೦)

ತದ್-ದುಷ್ಪ್ರೇಕ್ಷಾನುಸಾರಾತ್ ಕತಿಪಯ ಕುನರೈರಾದೃತೋಽನ್ಯೈರ್ವಿಸೃಷ್ಟೋ ।
ಬ್ರಹ್ಮಾಹಂ ನಿರ್ಗುಣೋಽಹಂ ವಿತಥಮಿದ ಮಿತಿ ಹ್ಯೇಷ ಪಾಷಂಡವಾದಃ ।
ತದ್-ಯುಕ್ತ್ಯಾಭಾಸ-ಜಾಲ-ಪ್ರಸರ-ವಿಷ-ತರೂದ್ದಾಹ-ದಕ್ಷ-ಪ್ರಮಾಣ-
ಜ್ವಾಲಾ-ಮಾಲಾ-ಧರಾಗ್ನಿಃ ಪವನ ವಿಜಯತೇ ತೇಽವತಾರ ಸ್ತೃತೀಯಃ ॥ ೩೦ ॥

(ಭಾಮಿನಿ ಷಟ್ಪದಿ)

ನಾನೆ ಬ್ರಹ್ಮನು ನಿರ್ಗುಣನು ನಾ ।
ಕಾಣಿಸುವ ಜಗವೆಲ್ಲ ಮಿಥ್ಯಂ ।
ಹೀನ ಆ ಸಂಕರನ ದುರ್ಬುದ್ಧಿಯನು ಅನುಸರಿಸಿ ।
ಕ್ಷೋಣಿಯೊಳು ಪಾಷಂಡ ಕೆಲರ ।
ಜ್ಞಾನಿಕ ಸ್ಥಿತ ಪುರುಷರಿಗೆ ಬಹು ।
ಕಾಣಿಸಿತು ಆದರವು ಅನ್ಯೈರಿಗೆಲ್ಲ ಬಿಟ್ಟಿಹದು ॥೬೩ ॥

ಭರತ ಆ ಸಂಕರನ-ಬದ್ಧದ ।
ಮರುಳು ಯುಕ್ತಿ ಸಮೂಹ ಹರವಿದ ।
ಗರಳ ವೃಕ್ಷವು ಸುಡುವದಕೆ ಪಟುವೆಂದ ವಾಕ್ಯಂಬ ।
ಉರಿಯ ಮಾಲಿಕೆ ಧರಿಸಿ ಇಹ ತವ ।
ನಿರಮಲದ ತೃತೀಯಾವತಾರವು ।
ಧರೆಯೊಳ ಸ್ಥಿರ ಅಗ್ನಿ ಬಹಳುತ್ಕಲ್ಪವಾಗಿಹದು ॥೬೪ ॥

ತಾತ್ಪರ್ಯಃ-

'ನಾನು ಪರಬ್ರಹ್ಮ ನಾಗಿರುವೆನು', ನಾನು ನಿರ್ಗುಣನು', ಈ ಪ್ರಪಂಚವು ಸುಳ್ಳು, ಎಂಬ ವಾದವು ವೇದ ವಿರುದ್ಧವಾದ ಪಾಷಂಡಿ ವಾದವನ್ನು ಕೆಲವರು ಸ್ವೀಕರಿಸುವರು. ಈ ರೀತಿಯ ಮಾಯಾವಾದ, ಯುಕ್ತಿಗಳು ವಿಷವೃಕ್ಷ ಬಳ್ಳಿಗಳಂತೆ ಬೆಳೆ ಸರ್ವತ್ರ ವ್ಯಾಪಿಸಿದಾಗ, ಹೇ ಪವನ ತೇ ತೃತೀಯಃಅವತಾರಃ ವಿಜಯತೇ ಎಂದಂತೆ ವಾಯುದೇವರ ಮೂರನೇ ಅವತಾರವಾಗಿ ಶ್ರೀಮನ್ ಮಧ್ವಾಚಾರ್ಯರ ಅವತಾರವಾಯಿತು. ವಿಷ ವೃಕ್ಷಗಳ ಕಾಡಿಗೆ - ಮಾಯವಾದಿಗಳ ವನಕ್ಕೆ ಶ್ರೀ ಮಧ್ವಾಚಾರ್ಯರು ದಾವಾಗ್ನಿಯಂತೆ, ಪ್ರಮಾಣಗಳ ಜ್ವಾಲಾ ಮಾಲೆಯಂತೆ ಪರಿಣಮಿಸಿ ಕುವಾದಿಗಳ ಮಾಯಾವಾದವನ್ನು ನಿರ್ನಾಮ ಮಾಡಿದರು.

(ನಾನೆ ಬ್ರಹ್ಮನು ನಿರ್ಗುಣನು ನಾ । ಕಾಣಿಸುವ ಜಗವೆಲ್ಲ ಮಿಥ್ಯಂ ।ಹೀನ ಆ ಸಂಕರನ ದುರ್ಬುದ್ಧಿ =ಬ್ರಹ್ಮಾಹಂ ನಿರ್ಗುಣೋಽಹಂ ವಿತಥಮಿದ ಮಿತಿ ಹ್ಯೇಷ ಪಾಷಂಡವಾದಃ)

ಶ್ರಿ ಮಧ್ವಾಂತರ್ಗತಶ್ರೀಕೃಷ್ಣಾರ್ಪಣಮಸ್ತು

ಹರಿಃ ಓಂ

ಶ್ರಿ ಹರಿ ವಾಯು ಸ್ತುತಿಃ

ಶ್ಲೋಕ(೩೧)

ಆಕ್ರೋಶಂತೋ ನಿರಾಶಾಭಯ-ಭರ-ವಿವಶ-ಸ್ವಾಶಯಾಶ್ಛಿನ್ನದರ್ಪಾಃ
ವಾಶಂತೋ ದೇ-ನಾಶ-ಸ್ತ್ವಿತಿ ಬತ ಕು-ಧಿಯಾಂ ನಾಶಮಾಶಾ ದಶಾಽಶು ।
ಧಾವಂತೋಽಶ್ಲೀಲ -ಶೀಲ ವಿತಥ-ಶಪಥಶಾಪಾಶಿವಾಃಶಾಂತಶೌರ್ಯಾಃ ।
ತ್ವದ್-ವ್ಯಾಖ್ಯಾ-ಸಿಂಹನಾದೇ ಸಪದಿ ದದೃಶಿರೇ ಮಾಯಿ-ಗೋಮಾಯವಸ್ತೇ
॥೩೧॥

(ಭಾಮಿನಿ ಷಟ್ಪದಿ)

ಪೂರ್ಣಪ್ರಜ್ಞಾಚಾರ್ಯರೇ ತವ ।
ಚಾರು ವಾಖ್ಯಾನೆಂಬ ಸಿಂಹದ ।
ವೀರ ಗರ್ಜನೆ ಕೇಳಿ ಸೋತಿಹ ಮಾಯಿಗಳು ಎಂಬಾ ।
ಕ್ರೂರ ನರಿಗಳು ಬಹ ಪರಸ್ಪರ ।
ಬೀರಿದರು ಜಯ ಇಚ್ಛೆ ಪೊಯ್ತಿಂ -
ದೀ ರೀತಿ ಕಂಗೆಡುತ ಭರದಲಿ ಪರವಶದಿ ತಮ್ಮ ॥೬೫ ॥
ದುರುಳ ಅಭಿಪ್ರಾಯವನು ಛೇದಿಸು- ।
ತಿರಲು ಗರ್ವಿನ ಕುಸ್ಥಿತದ ಮತಿ ।
ಭರಿತರೆಲ್ಲರು ದೇಶ-ಶರೀರಕೆ ನಾಶವೆಂತೆಂದಾ- ।
ಶ್ಚರ್ಯದಲಿ ಕೂಗುತಲಿ ದಶದಿಶ ।
ಕುರಿತು ಓಡುತ ಗ್ರಾಮ್ಯಕರ್ವದಿ
ವ್ಯರಥ ಶಪಥಾ ಶೌರ್ಯ ಅರಿವರು ಕಾಣಿಸುವರೆಲ್ಲ ॥೬೬॥

ತಾತ್ಪರ್ಯಃ-

ಶ್ರೀ ಪೂರ್ಣಪ್ರಜ್ಞಾಚಾರ್ಯರು, ಹರಿಸರ್ವೋತ್ತಮತ್ವ, ಪಂಚಭೇದ, ತಾರತಮ್ಯ ಮಧ್ವಸಿದ್ಧಾಂತದ ಬಗ್ಗೆ ಪ್ರವಚನ ಮಾಡಿದಾಗ, ನರಿಗಳು ಸಿಂಹ ಗರ್ಜನೆ ಕೇಳಿ, ಭಯಭೀತಿಗಳಿಂದ ದಶೆಗೆಟ್ಟು ಓಡಿ ಅವಿತುಕೊಳ್ಳುವಂತೆ. ಮಾಯಾವಾದಿ, ಪಾಷಂಡವಾದಿಗಳೆಂಬ ನರಿಗಳು ತಮ್ಮ ಸ್ಥಾನಗಳಿಂದ ಪಲಾಯನ ಮಾಡಿದರು. ಮಾಯಾವಾದಿ ಕುವಾದಿಗಳು ಶ್ರೀ ಮಧ್ವಾಚಾರ್ಯರ ಪ್ರಮಾಣ, ಪ್ರಮೇಯಗಳ ಉಕ್ತಿಗೆ ಸೋತಾಗ, ಶಪಥ-ಶಾಪಗಳಿಂದ ಶ್ರೀಮನ್ ಮಧ್ವಾಚಾರ್ಯರಿಗೆ ಮಾಯವಾದಿಗಳು ಅಶ್ಲೀಲ ಅಪಚಾರಗಳನ್ನು ಮಾಡುತ್ತಾರೆ. ಆದರೆ ಎಲ್ಲವೂ ವಿಫಲವಾಗಿ ನಿಸ್ತೇಜರಾಗಿ ಮೂಲೆಗುಂಪಾಗಿ "ಅಶಿವ" ಕಳೆ ರಹಿತರಾಗುತ್ತಾರೆ. ನಿಮ್ಮ 'ತತ್ವವಾದ'ದ ಸಿಂಹ ಗರ್ಜನೆ ಶ್ರೀ ಲಕ್ಷ್ಮೀನರಸಿಂಹ ದೇವರಿಗೆ ಪ್ರಿಯವಾಗಿದೆ. ನಿಮ್ಮ ಆ ಸಿಂಹ ಗರ್ಜನೆ ತತ್ವ ಸಿದ್ಧಾಂತ ಮೇರು ಪರ್ವತದಲ್ಲಿ ಶ್ರೀ ಹರಿಭಕ್ತರ, ದಾಸವರೇಣ್ಯರ ಹೃದ್ಗುಹೆಗಳಲ್ಲಿ ಇಂದಿಗು ಸುಸ್ಪಷ್ಟವಾಗಿ ಪ್ರತಿಧ್ವನಿಸುತ್ತಿದೆ. ಈ ಧ್ವನಿ ನನಗೆ ಸದಾ ಮೋದ-ಪ್ರಮೋದ ನೀಡುತ್ತಿರಲಿ.

(ವ್ಯರಥ ಶಪಥಾ ಶೌರ್ಯ = **ವಿತಥಶಪಥಶಾಪಾಶಿವಾಃ ಶಾಂತಶೌರ್ಯಾಃ**)

(ಗ್ರಾಮ್ಯಕರ್ವದಿ = ವಿಕಾರಧ್ವನಿಯಲ್ಲಿ)

ಶ್ಲೋಕ(೩೨)

ತ್ರಿಷ್ವಪ್ಯೇವಾವತಾರೇಷು ಅರಿಭಿ-ರಪ-ಘೃಣಂ ಹಿಂಸಿತೋ ನಿರ್ವಿಕಾರಃ
ಸರ್ವಜ್ಞಃ ಸರ್ವಶಕ್ತಿಃ ಸಕಲಗುಣಗಣಾ-ಪೂರ್ಣರೂಪ-ಪ್ರಗಲ್ಭಃ ।
ಸ್ವಚ್ಛಃ ಸ್ವಚ್ಛಂದ-ಮೃತ್ಯುಃ ಸುಖಯಸಿ ಸುಜನಂ ದೇವ ಕಿಂ ಚಿತ್ರಮತ್ರ
ತ್ರಾತಾ ಯಸ್ಯ ತ್ರಿ-ಧಾಮಾ ಜಗದುತ ವಶ-ಗಂ ಕಿಂಕರಾಃಶಂಕರಾದ್ಯಾಃ ॥

(ಭಾಮಿನಿಷಟ್ಪದಿ)

ಮರುತನೇ ಕ್ರೀಡಾದಿ ಗುಣಗಳ ।
ಭರಿತ ತವ ತೃತಿಯಾವ-ತಾರದಿ
ಅರಿಗಳಲಿ ದಯ ರಹಿತನಾಗಿ ಬಡಿಯಲೂ ಸರಿಯೇ ।
ಸರುವ ಶಕ್ತಿ ಜ್ಞಾನ ಗುಣ ಗಣ
ಶರೀರ ಪ್ರೌಢುದಂಥ ಶ್ವೇಚ್ಛಾ ।
ಮರಣ ಉಳ್ಳವ ನೀನು ಸುಜನರ ತೋಷಬಡಿಸುತಹೀ ॥೬೭ ॥

ಮೂರು ಮನೆಗಳ ಉಳ್ಳ ಶ್ರೀಹರಿ ।
ತಾರಕನು ಜಗವೆಲ್ಲ-ಧೀನವು ।
ಮಾರರಿಪು ಮೊದಲಾದ ದಿವಿಜರು ಎಲ್ಲ ಕಿಂಕರರು ।
ಮಾರುತನ ಆ ಮಹಿಮೆ ಎಮಗೀ
ಸೂರಿಜನ ಸುಖ ಬಡಿಪ ವಿಷಯದಿ
ತೋರುವದೆ ಆಯಾಸ ನಿನಗಿದು ಏನು ಆಶ್ಚರ್ಯ ॥೬೮ ॥

ತಾತ್ಪರ್ಯಃ-

ಶ್ರೀ ಮದ್‌ಹನುಮಾವತಾರದಲ್ಲಿ ರಾಕ್ಷಸಿ ಸಿಂಹಿಕೆಯು ನಿಮ್ಮನ್ನು ನಿಗ್ರಹಿಸಬೇಕೆಂದಾಗ, ಇಂದ್ರಜಿತುವಿನ ಬ್ರಹ್ಮಾಸ್ತ್ರದಿಂದ ಬಂಧಿತರಾದಾಗ, ಭೀಮಾವತಾರದಲ್ಲಿ ವಿಷಪ್ರಯೋಗ, ಸರ್ಪಗಳಿಂದ ಬಾಧೆ, ನೀರಿನ ಮಡುವಿಗೆ ನೂಕಿದಾಗ, ಅರಗಿನ ಮನೆಗೆ ಬೆಂಕಿ ಇಟ್ಟಾಗ, ಮಧ್ವಾವತಾರದಲ್ಲಿ ಮಣಿಮಂತನು ಹಾವಿನ ರೂಪದಲ್ಲಿ ಬಂದಾಗ, ಕೊಡಿಪಾಡಿತ್ತಾಯ, ಮೂಡಂಪಾಡಿತ್ತಾಯ ನಿಮ್ಮನ್ನು ಕೊಲ್ಲಲು ಬಂದಾಗ, ವಾಯುದೇವರು ಸ್ವಲ್ಪವು ವಿಕಾರಗೊಳ್ಳದೆ, ಅವರ ಪ್ರಯತ್ನಗಳನ್ನು ವಿಫಲಗೊಳಿಸಿದಿರಿ. ಕಿಷ್ಕಿಂಧಾ ಪರ್ವತದ ತಪ್ಪಲದಲ್ಲಿ ಶ್ರೀರಾಮಚಂದ್ರನು ಬಂದು ನಿಂತಾಗ, ಪ್ರಪ್ರಥಮ ದರ್ಶನದಲ್ಲಿ ಶ್ರೀರಾಮನ ಸರ್ವೋತ್ತಮ ಗುಣ, ಸ್ವಾತಂತ್ರ್ಯ, ನಿರ್ದೋಷತ್ವ, ಅನಂತಕಲ್ಯಾಣ ಗುಣಗಳನ್ನು ಸ್ತುತಿಸಿ, ಸರ್ವಜ್ಞರೆನಿಸಿಕೊಂಡಿರುವಿರಿ. ಭೀಮಾವತಾರದಲ್ಲಿ ಕುರುಕುಲ ಅಕ್ಷೋಹಿಣಿ ಸೈನ್ಯವನ್ನು ನಾಶಮಾಡಿ, ಸರ್ವಶಕ್ತಃ ಎಂದೆನಿಸಿಕೊಂಡಿರಿ. ಮಧ್ವಾವತಾರದಲ್ಲಿ ಸರ್ವ ಮೂಲಗ್ರಂಥಗಳನ್ನು ರಚಿಸಿ, ಪೂರ್ಣಪ್ರಜ್ಞರೆನಿಕೊಂಡಿರಿವಿರಿ. ಅನಂತಾಸನ ಶ್ವೇತದ್ವೀಪ, ವೈಕುಂಠ ಮೂರು ಲೋಕದ ಅಧಿ ಪತಿಯಾದ ಶ್ರೀ ಹರಿಯ ಪೂರ್ಣ ಅನುಗ್ರಹಕ್ಕೆ ಪಾತ್ರರಾದ ಸುಜನರಿಗೆ ಸಂತೋಷ ಕೊಡುತ್ತಿರುವಿರಿ.

ಶ್ಲೋಕ(೩೩)

ಉದ್ಯನ್ಮಂದ ಸ್ಮಿತ-ಶ್ರೀಮೃದು-ಮಧು ಮಧುರಾಲಾಪ ಪೀಯೂಷಧಾರಾ-
ಪೂರಾಸೇಕೋಪಶಾಂತಾ ಸುಖ-ಸುಜನ-ಮನೋಲೋಚನಾಪೀಯಮಾನಮ್ ।
ಸಂದ್ರಕ್ಷ್ಯೇ ಸುಂದರಂ ಸಂದುಹದಿಹ ಮಹದಾನಂದಮಾನಂದತೀರ್ಥ
ಶ್ರೀಮದ್-ವಕ್ತ್ರೇಂದುಬಿಂಬಂ ದುರಿತನುದುದಿತಂ ನಿತ್ಯದಾಽಹಂ ಕದಾ ನು ॥

(ಭಾಮಿನಿ ಷಟ್ಪದಿ)

ಹರಿಯು ನಿತ್ಯದಿ ತೋರಿ ಕೊಡುತಿಹ ।
ಹರುಷ ತೀರ್ಥನೆ ಉದಯಿಸಿದ ತವ ।
ಕಿರಿ ನಗೆಯ ಕಾಂತಿಯಲಿ ಮೃದು ಮಧು ಮಧುರವಚನವೆಂಬಾ ।
ಶರಧಿ ಭವ ಧಾರೆಗಳ ಸಮೂಹವು ।
ಕರಿಯೆ ಆ ಸುಖವು ನಷ್ಟವಾಗಿಹ ।
ಪರಮಸುಜನರ ಮನಸು ಕಣ್ಣನುಭವಿಪ ಸೌಂದರ್ಯವು ॥ ೬೯ ॥

ನಾ ಮೊದಲು ಬಹು ಭಕ್ತ ಜನರಿಗೆ
ಭೂಮಿಯೊಳು ಮಹ ಸುಖವ ಕೊಡುತಲಿ ।
ತಾಮಸದ ಪಾಪವನು ಪರಿಹಾರವನು ಮಾಡುತಲಿ ।
ಪ್ರೇಮದಲಿ ಪ್ರಸನ್ನವಾಗಿಹ ।
ಶ್ರೀ ಮತ್ ವಕ್ತ್ರೇಂದುಬಿಂಬವು ।
ಸ್ವಾಮಿ ಕೇಳುವಾಗ ನಾ ಚನ್ನಾಗಿ ಕಂಡೇನು ॥ ೭೦ ॥

ತಾತ್ಪರ್ಯಃ-

ಶ್ರೀಮದಾನಂದತೀರ್ಥರು ಆನಂದ ಪರಿಪೂರ್ಣನಾದ ಶ್ರೀ ಹರಿಯನ್ನು ಯಾವಾಗಲು ಸ್ಮರಿಸುತ್ತ, ಆನಂದದಾಯಕವಾದ ಶಾಸ್ತ್ರವನ್ನು ರಚಿಸಿ, ತಮ್ಮಲ್ಲಿ ನಿಷ್ಠೆಯುಳ್ಳ ಭಕ್ತರಿಗೆ ಸಚ್ಛಾಸ್ತ್ರದ್ವಾರ ಶ್ರೀಹರಿಯನ್ನು ಅಂತರಂಗದಲ್ಲಿ ಕಾಣುವಂತೆ ಮಾಡುತ್ತ ಮುಮುಕ್ಷುಗಳಿಗೆ ಮೋಕ್ಷಾನಂದವನ್ನು ಕೊಡುತ್ತಿರುವರು. ಶ್ರೀ ಹರಿಯ ಅನಂತರೂಪಗಳಿಗೆ ಸಾಕ್ಷಾತ್ ಪ್ರತಿಬಿಂಬರೂಪರಾದವರು ವಾಯುದೇವರು. ಈ ಮೂಲ ಬಿಂಬರೂಪದ, ಮತ್ತು ಅದರ ಸಾಕ್ಷಾತ್ ಪ್ರತಿಬಿಂಬರೂಪದ ದರುಶನವೇ ಬಿಂಬಸಾಕ್ಷಾತ್ಕಾರ. ಚಂದ್ರ ಮಂಡಲದಂತೆ ಇರುವ ಶ್ರೀ ಮಧ್ವಾಚಾರ್ಯರ ಮುಖದಿಂದ ಹೊರಸೂಸುವ ಮುಗುಳ್ನಗೆಯ ಬೆಳದಿಂಗಳ ಕಾಂತಿ, ಸಜ್ಜನರ ಪಾಪ ಪರಿಹಾರ ಮಾಡಿ, ಅವರಿಗೆ ಸುಖ ನೀಡುತ್ತದೆ. ಶ್ರೀ ಮನ್ ಮಧ್ವಾಚಾರ್ಯರ ಮೃದು ನುಡಿಗಳಲ್ಲಿ ಸುಧೆಯ(ಅಮೃತದ) ಮಧುರ ರಸ ತುಂಬಿ ತುಳುಕುತ್ತಿದೆ. ಶ್ರೀ ಮದಾನಂದತೀರ್ಥರ ಮುಖವು ಉದಯಿಸಿದ ಚಂದ್ರನಂತೆ, ಆಡಿದ ನುಡಿಗಳಲ್ಲಿ ಮೌಕ್ತಿಕದ ಕಾಂತಿಯಂತೆ, ಮಾತಿನ ಅರ್ಥದಲ್ಲಿ ಮಧು ಮಧುರವಾದ ಮಧು ರಸಭರಿತವಾಗಿವೆ. ಇಂಥ ಸುಖ ತೀರ್ಥರ ಮಾತು ನನಗೆ ಸದಾ ಸುಖವನ್ನು ನೀಡುತ್ತಿರಲಿ.

ಶ್ಲೋಕ(೩೪)

ಪ್ರಾಚೀನಾಚೀರ್ಣ-ಪುಣ್ಯೋಚ್ಚಯ ಚತುರತರಾಚಾರತಶ್ಚಾರುಚಿತ್ತಾನ್
ಅತ್ಯುಚ್ಚಾಂ ರೋಚಯಂತೀಂ ಶ್ರುತಿ-ಚಿತವಚನಾಂ ಛ್ರಾವಕಾಂಶ್ಚೋದ್ಯ-ಚುಂಚೂನ್ ।
ವ್ಯಾಖ್ಯಾಮುತ್-ಖಾತ-ದುಃಖಾಂ ಚಿರಮುಚಿತ ಮಹಾಚಾರ್ಯ ಚಿಂತಾರತಾಂಸ್ತೇ
ಚಿತ್ರಾಂ ಸಚ್ಛಾಸ್ತ್ರ-ಕರ್ತಶ್ಚರಣ ಪರಿಚರಾಂಛ್ರಾವಯಾಸ್ಮಾಂಶ್ಚ ಕಿಂಚಿತ್ ॥ ೩೪ ॥

(ಭಾಮಿನಿ ಷಟ್ಪದಿ)

ನಿರದುಷ್ಟ ಭಾಷ್ಯದಿ ಶಾಸ್ತ್ರ-
ಕರತನೇ ಮಹ ಯೋಗ್ಯ ಪೂಜಾ-
ಚರಣ ಮಧ್ವಾಚಾರ್ಯ ಪೂರ್ವದ ಜನ್ಮದಲಿ ಮಾಡ್ದಾ ।
ಪರಿಪರಿಯ ಪುಣ್ಯಗಳ ಸಮುಹದಿ ।
ಪರಮ ಚಾತುರರಾದವರ ಆ- ।
ಚರಣೆಯಿಂದಲಿ ಮನೋಹರದ ಮನದಿಂದ ಪ್ರಶ್ನೆದಲಿ ॥ ೭೧॥

ಬಲು ಪ್ರಸಿದ್ಧರು ಆದ ಶ್ರೋತ್ರಿಯ- ।
ಗಳ ಕುರಿತು ಅತ್ಯಂತ ಕಾಂತಿಯ ।
ಬಲದಿ ಬಹು ಉತ್ಕೃಷ್ಟ ದುಃಖವ ಕಳೆವ ಶ್ರುತಿಯಲ್ಲೀ ।
ಕಲತ ವಾಕ್ಯ ವಿಚಿತ್ರದಿಂದಲಿ ।
ಹೇಳುವ ವ್ಯಾಖ್ಯಾನವನು ಧ್ಯಾನದಿ
ನಿಲಿಸಿ ಇಹ ತವ ಪಾದಕಿಂಕರ(ಗೆ?) ಕೇಳಿಸುವದಲ್ವಾ ॥ ೭೨॥

ತಾತ್ಪರ್ಯಃ-

ಶ್ರೀಮದಾಚಾರ್ಯರು ರಚಿಸಿದ ಸಚ್ಛಾಸ್ತ್ರಗಳನ್ನು ಓದಬೇಕು; ಅವುಗಳ ಪ್ರವಚನ ಕೇಳಿ ಜೀವನ ಪಾವನವಾಗುವುದು. ಶಾಸ್ತ್ರ ಶ್ರವಣದಿಂದ ಜ್ಞಾನ. ಜ್ಞಾನದಿಂದ ಭಕ್ತಿ. ಭಕ್ತಿಯಿಂದ ಮುಕ್ತಿ, ಕಾರಣ ಆಚಾರ್ಯರ ಶಾಸ್ತ್ರಗಳ ಶ್ರವಣಮಾಡಲೇಬೇಕು. ಆಚಾರ್ಯರ ವ್ಯಾಖ್ಯಾನ-ಭಾಷ್ಯಗಳು ಶ್ರೀ ಹರಿಯ ಮಹಿಮೆಯನ್ನು ಅತ್ಯುತ್ತಮವಾಗಿ ತಿಳಿಸುತ್ತವೆ. ಭಾಗವತ, ಭಾರತ, ರಾಮಾಯಣಗಳಿಗೆ ತಾತ್ಪರ್ಯನಿರ್ಣಯಗ್ರಂಥ ತತ್ವಸಿದ್ಧಾಂತಗಳ ಕೈಗನ್ನಡಿಯಾಗಿದೆ. ಆಚಾರ್ಯರ, ಅನುಗ್ರಹ ಶ್ರೀ ಹರಿಯ ಕರುಣೆಯಿಂದ ಪಾಪ ಮೂಲಕವಾದ ದುಃಖಗಳು ದೂರಾಗುತ್ತವೆ. ಕಾರಣ ಆಚಾರ್ಯರ ಶಾಸ್ತ್ರ ಶ್ರವಣ ಸದಾ ಕೇಳುವಂಥ ಭಾಗ್ಯ ಆಚಾರ್ಯರು ಕರುಣಿಸಲಿ ಎಂದು ಪ್ರಾರ್ಥಿಸುವೆ.
(ಬಹು ಉತ್ಕೃಷ್ಟ ದುಃಖವ ಕಳೆವ ಶ್ರುತಿಯಲ್ಲೀ ಕಲತ ವಾಕ್ಯ ವಿಚಿತ್ರದಿಂದಲಿ = ವ್ಯಾಖ್ಯಾಮುತ್-ಖಾತ-ದುಃಖಾಂ ಚಿರಮುಚಿತ)

ಶ್ಲೋಕ(೩೫)

ಪೀಠೇ ರತ್ನೋಪಕ್ಲಪ್ತೇರುಚಿರ-ರುಚಿ-ಮಣಿಜ್ಯೋತಿಷಾ ಸನ್ನಿಷಣ್ಣಂ
ಬ್ರಹ್ಮಾಣಂ ಭಾವಿನಂ ತ್ವಾಂ ಜ್ವಲತಿ ನಿಜಪದೇವೈದಿಕಾದ್ಯಾಹಿವಿದ್ಯಾಃ
ಸೇವಂತೇ ಮೂರ್ತಿಮತ್ಯಃಸುಚರಿತ ಚರಿತಂ ಭಾತಿ ಗಂಧರ್ವ-ಗೀತಂ ।
ಪ್ರತ್ಯೇಕಂ ದೇವಸಂಸತ್ಸ್ವಪಿ ತವಭಗವನ್ ನರ್ತಿತದ್ಯೋವಧೂಷು ॥ ೩೫ ॥

(ಭಾಮಿನಿ ಷಟ್ಪದಿ)

ಚರಿತ ಶುಭ ಮಧ್ವಾರ್ಯ ನಿಜಪದ ।
ಕಿರಣ ಮನೋಹರ ಮಾಣಿಕದ ಪ್ರಭೆ
ವರ ಪ್ರಕಾಶದ ರತ್ನ ಕ್ಲಪ್ತದಿ ಮಾಡಪಟ್ಟಂಥಾ ।
ಹಿರಿಯ ಆಸನದಲ್ಲಿ ಚನ್ನಾ-
ಗಿರುವ ಭಾವೀ ಬ್ರಹ್ಮನಿಪ ತವ ।
ಚರಣ ಸ್ತೋತ್ರವು ವೇದಸಂಬಂಧ ಪುರಾಣಗಳು ॥೭೩ ॥

ಮೊದಲು ವಿದ್ಯದ ಮೂರ್ತಿಗಳು ಬಹು
ಮುದದಿ ಸೇವೆಯ ಮಾಳ್ಪರಹುದಲಾ ।
ಸದಮಲಿನ ಪೂಜ್ಯಾದ ಮಧ್ವನೆ ನರ್ತನವ ಮಾಳ್ಪ ।
ತ್ರಿದಶಲೋಕದ ಅಬಲೆಯರು ಸಭೆ
ಎದುರಿನಲಿ ಗಂಧರ್ವಪ್ರಥ(ಕ್ ?) ಪ್ರಥ ।
ಕೊದರಿ ಗಾಯನದಿಂದ ತವ ಮಹಿಮೆಯನು ಒಪ್ಪುವದೂ ॥ ೭೪ ॥

ತಾತ್ಪರ್ಯಃ-

ಮುಂದಿನ ಕಲ್ಪದಲ್ಲಿ ಬ್ರಹ್ಮದೇವರ ಪದವಿಗೆ ಈ ವಾಯುದೇವರು ಬರುವರಾದ್ದರಿಂದ, ಸತ್ಯ ಲೋಕದ ಸಭೆಯಲ್ಲಿ ನವರತ್ನ ಖಚಿತವಾದ ಮಾಣಿಕ್ಯ-ಮುತ್ತು-ರತ್ನಗಳಿಂದ, ಪ್ರಕಾಶಮಾನವಾದ ಸಿಂಹಾಸನದಲ್ಲಿ ಯುವರಾಜರಾಗಿ ಕುಳಿತು ಶೋಭಿಸುತ್ತಿರುವಿರಿ. ಗಂಧರ್ವರು, ಅಪ್ಸರೆಯರು, ನೀವು ಅಂದರೆ ಹನುಮ, ಭೀಮ, ಮಧ್ವ ಎಂಬ ಮೂರು ಅವತಾರರೂಪಗಳಿಂದಲು, ಮೂಲರೂಪದಿಂದಲೂ ಮಾಡಿರುವ ಲೀಲೆಗಳನ್ನು (ಗಾಯನ) ಹಾಡುತ್ತಿರುವರು. ಹಾಡಿಗೆ ಸರಿಯಾಗಿ ನರ್ತನಮಾಡುತ್ತಿರುವರು, ಸಕಲ ವಿದ್ಯಾಭಿಮಾನಿ ದೇವತೆಗಳು ನಿಜ ಶರೀರದಲ್ಲಿ ಬಂದು, ಶ್ರೀಮನ್ ಮಧ್ವಾಚಾರ್ಯರನ್ನು ಸೇವಿಸುವರು. ಇಂಥ ಸಭೆಯಲ್ಲಿ ಗಂಧರ್ವರು ಗಾಯನಮಾಡುವರು.

ಶ್ಲೋಕ(೩೬)

ಸಾನುಕ್ರೋಶೈರಜಸ್ರಂ ಜನಿ ಮೃತಿ ನಿರಯಾದ್ಯೂರ್ಮಿಮಾಲಾವಿಲೇSಸ್ಮಿನ್
ಸಂಸಾರಾಬ್ಧೌ ನಿಮಗ್ನಾಂಚ್ಛರಣಮಶರಣಾನ್ ಇಚ್ಛತೋ ವೀಕ್ಷ್ಯ ಜಂತೂನ್ ॥
ಯುಷ್ಮಾಭಿಃಪ್ರಾರ್ಥಿತಃಸನ್ ಜಲನಿಧಿಶಯನಃ ಸತ್ಯವತ್ಯಾಂ ಮಹರ್ಷೇ-
ರ್ವ್ಯಕ್ತಶ್ಚಿನ್ಮಾತ್ರ ಮೂರ್ತಿರ್ನ ಖಲು ಭಗವತಃ ಪ್ರಾಕೃತೋ ಜಾತುದೇಹಃ ॥ ೩೬ ॥

ಜನನ ಮೃತ ನರ್ಕಂಬ ಥೆರೆಗಳ ।
ಘನದಿ ಮಾಲಿಕೆ ಕಲುಷದೀ ಭವ- ।
ವನಧಿಯಲಿ ಮುಣಗಿ ನಿಜರಕ್ಷಕರನ್ನ ಕಾಣದಲೆ ।
ಮನದಿ ಇಚ್ಛಿಸಿ ರಕ್ಷಕ ಪ್ರಾಣಗ-
ಳನು ನೋಡಿ ದಯ ಸಹಿತ ನಿಮ್ಮಾ-
ನನದಿ ಪ್ರಾರ್ಥನೆ ಕೇಳಿ ಜಲನಿಧಿಶಯನ ಸತ್ಯವತೀ ॥ ೭೫ ॥

ಪರಾಶರ ಋಷಿಯಿಂದ ಜ್ಞಾನ- ।
ಶರೀರ ಮೂರ್ತ್ಯಭಿವ್ಯಕ್ತನಾದನು
ನಾರಾಯಣಗೀ ಪ್ರಾಕೃತನ ಜಡದೇಹ ಎಂದೆಂದೂ ।
ಸೇರಲರಿಯದು ಎಂದು ಪೇಳ್ವರು ।
ಸೂರಿಜನರಾ ಮಹಿಮೆ ಎಲ್ಲಾ
ಮಾರುತನೆ ನೀ ಬಲ್ಲಿ ಅನ್ಯರಿಗೆಲ್ಲ ಅಳವಡದೂ ॥ ೭೬ ॥

ತಾತ್ಪರ್ಯಃ-

ಸಂಸಾರವು ಸಮುದ್ರದಂತೆ ಭಯಂಕರವಾಗಿದೆ. ಸಮುದ್ರದ ತೆರೆತೆರೆಗಳಂತೆ ''ಪುನರಪಿ ಜನನಂ, ಪುನರಪಿ ಮರಣಂ'' ಹುಟ್ಟು ಸಾವುಗಳ ಅಲೆಗಳಲ್ಲಿ ಜೀವ ಜನನ ಮರಣ ಜೋಕಾಲಿಯಲ್ಲಿ ನಿರಂತರ ತೂಗುತ್ತಿರುತ್ತದೆ. ಈ ಜೀವಕ್ಕೆ ಅಲೆಗಳ ಹೊಡೆತ ಮೇಲಿಂದ ಬೀಳುತ್ತಿದ್ದರೆ, ಕೆಳಗಡೆ, ಹೆಂಡಿರು-ಮಕ್ಕಳ ಮೋಹದ ಮೊಸಳೆ ತಿಮಿಂಗಿಲು ಕೆಳಗೆ ಎಳೆಯುತ್ತಿರುತ್ತವೆ. ಜೀವರ ತ್ರಿವಿಧ ರಾಶಿಗಳಲ್ಲಿ ಕೆಲವರು ಮುಕ್ತಿ ಯೋಗ್ಯರು, ಇನ್ನು ಕೆಲವರು ಯಾವಾಗಲೂ ಸಂಸಾರದಲ್ಲಿರುವ ನಿತ್ಯ ಸಂಸಾರಿಗಳು, ಮತ್ತೆ ಕೆಲವರು ನಿತ್ಯನರಕಾನುಭವಯೋಗ್ಯರಿದ್ದಾರೆ. ಮುಕ್ತಿ ಯೋಗ್ಯರನ್ನು ಸಂಸಾರದಿಂದ ರಕ್ಷಿಸಬೇಕೆಂಬ ಇಚ್ಛೆಯಿಂದ, ಇವರಿಗಾಗಿ ಹರಿಯನ್ನು ಪ್ರಾರ್ಥಿಸಿಕೊಂಡಾಗ ''ಸತ್ಯವತೀ ಪರಾಶರರ ಸೂನರಾಗಿ'' ಶ್ರೀ ವ್ಯಾಸರೂಪದಿಂದ ಜಲನಿಧಿಶಯನ ಅವತರಿಸಿದನು. ಹರಿಯ ಅವತಾರವೆಂದು ಹೇಳುವ ಎಲ್ಲ ರೂಪಗಳೂ ಜ್ಞಾನಾನಂದಮಯ ಶರೀರ-ಅಪ್ರಾಕೃತದೇಹವುಳ್ಳವವು.

ಶ್ಲೋಕ(೩೭)

ಅಸ್ತ-ವ್ಯಸ್ತಂ ಸಮಸ್ತ ಶ್ರುತಿಗತಮಧಮೈ್ರರತ್ನಪೂಗಂ ಯಥಾಽಂಧ್ಯೈ-
ರರ್ಥಂ ಲೋಕೋಪಕೃತ್ಯೈ ಗುಣಗಣನಿಲಯಃ ಸೂತ್ರಯಾಮಾಸ ಕೃತ್ಸ್ನಮ್ ।
ಯೋಽಸೌ ವ್ಯಾಸಾಭಿಧಾನಸ್ತಮಹ-ಮಹರಹ-ರ್ಭಕ್ತಿತಃ ತ್ವತ್ ಪ್ರಸಾದಾತ್ ।
ಸದ್ಯೋ ವಿದ್ಯೋಪಲಬ್ಧ್ಯೈ ಗುರುತಮಮಗುರುಂ ದೇವದೇವಂ ನಮಾಮಿ ॥ ೩೭॥

(ಭಾಮಿನಿ ಷಟ್ಪದಿ)

ಕುರುಡರೆದರಿಗೆ ಮಾಣಿಕದ ರಾ- ।
ಶಿರಿಸಿದರೆ ತೋರ್ದಂತೆ ಅಧಮರು ।
ಸರುವ ವೇದಾರ್ಥವನು ತಿಳಿಯದೆ ಅನ್ಯಥಾರ್ಥವನು ।
ವಿರಚಿಸಿದರೆ ಗುಣಗಣಕೆ ಮನೆಯಾ- ।
ಗಿರುವ ವೇದವ್ಯಾಸ ಹೆಸರಿನ ।
ಹರಿಯು ಜ್ಞಾನಿಗಳಿಗೆಲ್ಲರಿಗೆ ಉಪಕಾರ ಗೋಸ್ಕರವು ॥ ೭೭ ॥

ಶ್ರುತಿಯ ಅರ್ಥವ ಸೂತ್ರದಿಂದಲಿ ।
ಪ್ರತಿಪಾದಿಸಂಥ ವ್ಯಾಸನ
ಅತಿ ಅನುಗ್ರಹದಿಂದ ವಿದ್ಯೆಯ ಪ್ರಾಪ್ತಿಗೋಸುಗವು ।
ಪ್ರತಿದಿನ ಗುರುರಹಿತ ಗುರುತಮ ।
ಅತುಳ ಸುಜ್ಞಾನರಸದ ಸತ್ಯ- ।
ವತಿಯ ಕುವರಗೆ ಆನು ಭಕ್ತಿಲಿ ನಮನ ಮಾಡುವೆನು ॥ ೭೮ ॥

ತಾತ್ಪರ್ಯಃ-

ಶ್ರೀಹರಿಯು ಶ್ರೀವೇದವ್ಯಾಸ ಋಷಿಗಳಾಗಿ ಅವತರಿಸಿದನು. ವೇದಗಳ ರಾಶಿಯನ್ನು ವಿಂಗಡಿಸಿ, ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದಗಳಾಗಿ, ನಾಲ್ಕು ವಿಭಾಗ ಮಾಡಿ, ಇವುಗಳ ವಿವರಣಾರ್ಥವಾಗಿ ಹದಿನೆಂಟು ಪುರಾಣಗಳನ್ನು ಮಹಾಭಾರತವನ್ನು ಮತ್ತೆ ಇವುಗಳಿಗೆ ಮುಕುಟ ಪ್ರಾಯವಾಗಿ ಬ್ರಹ್ಮಸೂತ್ರಗಳನ್ನು ರಚಿಸಿದರು. ಬ್ರಹ್ಮ ಸೂತ್ರಗಳ ಆಧಾರದಿಂದ ವೇದಗಳ ಸರಿಯಾದ ಅರ್ಥ ತಿಳಿದುಕೊಳ್ಳಬಹುದು. ವೇದವ್ಯಾಸರು ಸಕಲ ಜ್ಞಾನಿಗಳಿಗೂ ಜ್ಞಾನಪ್ರದರು. ಶ್ರೀ ಪ್ರಾಣದೇವರಿಗೆ ವೇದವ್ಯಾಸರು ಗುರುಗಳಾಗಿದ್ದಾರೆ. ಅಮೂಲ್ಯ ಮುತ್ತು ಮಾಣಿಕ್ಯರತ್ನಗಳಂತಿರುವ ವೇದಾರ್ಥಗಳ ಮಾಲೆ, ಬ್ರಹ್ಮ ಸೂತ್ರಗಳು ವೇದವ್ಯಾಸರ ಅನರ್ಘ್ಯ ಕಾಣಿಕೆನೀಡಿ ಮಹದೋಪಕಾರ ಮಾಡಿದ್ದಾರೆ. ಇವುಗಳಿಗೆ ಭಾಷ್ಯ ರಚಿಸಿದ ಶ್ರೀಮದಾಚಾರ್ಯರ ಉಪಕಾರವೂ ಅನುಪಮವಾಗಿದೆ. ಶ್ರೀ ಮಧ್ವಾಂತರ್ಗತ ವೇದವ್ಯಾಸದೇವರಿಗೆ ಅನಂತಾನಂತ ಪ್ರಣಾಮಗಳು.

ಶ್ಲೋಕ(೩೮)

ಆಜ್ಞಾಮನ್ಯೈ-ರಧಾರ್ಯಾಂ ಶಿರಸಿ ಪರಿಸರದ್ ರಶ್ಮಿಕೋಟೀರಕೋಟೌ
ಕೃಷ್ಣಸ್ಯಾಕ್ಲಿಷ್ಟಕರ್ಮಾ-ದಧ-ದನುಸರಣಾ-ದರ್ಥಿತೋ ದೇವಸಂಘೈಃ ।
ಭೂಮಾವಾಗತ್ಯ ಭೂಮನ್ನಸುಕರ-ಮಕರೋದ್ ಬ್ರಹ್ಮಸೂತ್ರಸ್ಯ ಭಾಷ್ಯಂ
ದುರ್ಭಾಷ್ಯಂ ವ್ಯಸ್ಯ ದಸ್ಯೋರ್ಮಣಿಮತ ಉದಿತಂ ವೇದಸದ್ಯುಕ್ತಿಭಿ-ಸ್ತ್ವಮ್ ॥ ೩೮ ॥

(ಭಾಮಿನಿ ಷಟ್ಪದಿ)

ಜ್ಞಾನ ಆನಂದಾದಿ ಸಂಪದ ।
ಮಾನಿ ಶ್ರೀ ಮಧ್ವಾರ್ಯ ಎಲ್ಲರಿ- ।
ಗೇನು ಧರಿಸಲಶಕ್ತವಾಗಿಹ ವ್ಯಾಸರಾಜ್ಞೆಯನು ।
ನೀನು ತಾಳುತ ನಾಲ್ಕು ದಿಕ್ಕಿಗೆ ।
ಕಾಣಿಸುವ ಪ್ರಭೆ ಕಿರೀಟದಂಚಿನ ।
ಮಾಣಿಕವ ಶಿರದಿಟ್ಟು ಕ್ಲೇಶಗಳಿಲ್ಲದಿಹ ಕರ್ಮಾ ॥೭೯ ॥

ಉಳ್ಳವನೆ ಸುರಸಮುಹ ಪ್ರಾರ್ಥನೆ ।
ಸೊಲ್ಲಿಗಚಲದಿ ಬಂದ ರಾಕ್ಷಸ ।
ಕಳ್ಳ ಮಣಿಮಂತನಿಂದ ಉದಸಿದ ದುಷ್ಟವಾಕ್ಯವನು ॥
ಎಲ್ಲ ವೇದಗಳಿಂದ ನಿರ್ಮಲ ।
ಬಲ್ಲದ್ಯುಕ್ತಿಲಿಲ(?)ಜ್ಞಾನಿಗಳ ಶ- ।
ಕ್ಯ(?)ಲ್ಲದಂಥಾ ಬ್ರಹ್ಮ ಸೂತ್ರದ ಭಾಷ್ಯರಚಿಸಿದಿಯೋ ॥೮೦ ॥

ತಾತ್ಪರ್ಯಃ-

ವೇದವ್ಯಾಸರಿಂದ ರಚಿತವಾದ ಬ್ರಹ್ಮ ಸೂತ್ರಗಳಿಗೆ-ಬರೆದ-ಮಣಿಮಂತ ಮೊದಲಾದ ಕುವಾದಿಗಳು ಹರಿಸರ್ವೋತ್ತಮತ್ವಕ್ಕೆ ವೇದಗಳಿಗೆ ಅಪಚಾರ ಬಗೆದರು. ಆಗ ಶ್ರೀ ಹರಿಯ ಆಜ್ಞೆಯಂತೆ ನೀವು ಅವತರಿಸಿ ಹರಿಯ ಸಂಕಲ್ಪದಂತೆ ಬ್ರಹ್ಮಸೂತ್ರಗಳಿಗೆ ನಿಜವಾದ ಅರ್ಥ ದೇವತೆಗಳಿಗೆ, ಸಜ್ಜನರಿಗೆ ಸರಿಯಾಗಿ ತಿಳಿಯುವಂತೆ ಸಂಶಯಗಳೆಲ್ಲವಕ್ಕೂ ಪರಿಹಾರ ನೀಡುವಂತೆ ಭಾಷ್ಯಗಳನ್ನು ಶ್ರೀಮನ್ ಮಧ್ವಾಚಾರ್ಯರು ರಚಿಸಿದರು. ಶ್ರೀಹರಿಯಾಜ್ಞೆಗೆ ನೀವು ತಲೆ ಬಾಗಿದಾಗ, ನೀವು ಧರಿಸಿದ ರತ್ನ ಮಣಿಮುಕುಟದ ಕಾಂತಿ ಎಲ್ಲ ಲೋಕಗಳನ್ನು ಬೆಳಗಿಸಿದವು.ಇಂಥ ಜೀವೋತ್ತಮರಿಗೆ ಅನಂತಪ್ರಣಾಮಗಳು.

(ಅಸುಕರಮಕರೋದ್ ಬ್ರಹ್ಮಸೂತ್ರಸ್ಯ ಭಾಷ್ಯಂ = ಬಲ್ಲದ್ಯುಕ್ತಿಲಿಲ(?)ಜ್ಞಾನಿಗಳ ಶ- ।ಕ್ಯ(?)ಲ್ಲದಂಥಾ ಬ್ರಹ್ಮಸೂತ್ರದ ಭಾಷ್ಯರಚಿಸಿದಿಯೋ)

ಶ್ಲೋಕ(೩೯)

ಭೂತ್ವಾ ಕ್ಷೇತ್ರೇ ವಿಶುದ್ಧೇ ದ್ವಿಜಗಣನಿಲಯೇ ರೂಪ್ಯಪೀಠಾಭಿಧಾನೇ।
ತತ್ರಾಪಿ ಬ್ರಹ್ಮಜಾತಿಸ್ತ್ರಿಭುವನವಿಶದೇ ಮಧ್ಯಗೇಹಾಖ್ಯಗೇಹೇ ।
ಪಾರಿವ್ರಾಜ್ಯಾಧಿರಾಜಃ ಪುನರಪಿ ಬದರೀಂ ಪ್ರಾಪ್ಯ ಕೃಷ್ಣಂ ಚ ನತ್ವಾ
ಕೃತ್ವಾ ಭಾಷ್ಯಾಣಿ ಸಮ್ಯಗ್ ವ್ಯತನುತ ಚ ಭವಾನ್ ಭಾರತಾರ್ಥಪ್ರಕಾಶಮ್ ॥ ೩೯ ॥

(ಭಾಮಿನಿಷಟ್ಪದಿ)

ಪೂರ್ಣಪ್ರಜ್ಞಾರ್ಯನೇ ನೀ ।
ಧಾರುಣಿಗೆ ಶುದ್ಧಾದ ದ್ವಿಜರಿಗೆ ।
ಚಾರು ಆಲಯ ರಜತಪೀಠಪುರವು ವೆಂಬ್ಬೆಸರಾ ।
ಮೂರು ಲೋಕಕೆ ಖ್ಯಾತವಾಗಿಹ ।
ಊರೊಳಾದರೂ ನಡುಮನ್ಯಾಖ್ಯಾ-
ಗಾರದಲಿ ಬ್ರಾಹ್ಮಣನಾಗ(ಗು?)ತ್ಯಾ ಆಧಿಪತ್ಯರಿಗೆ ॥ ೮೧ ॥

ಒಡೆಯ ನಾಗುತ ಪುನಹ ಬದರಿಗೆ ।
ನಡೆದು ವೇದವ್ಯಾಸದೇವರ ।
ಅಡಿಗೆ ನಮನವ ಮಾಡಿ ಭಾಷ್ಯಾದಿಗಳ ರಚಿಸುತಲಿ ।
ಪೊಡವಿಯೊಳು ಭಾರತದ ಅರ್ಥಕೆ ।
ಕಡು ತೇಜ ತಾತ್ಪರಿಯ ನಿರಣಯ
ಬಿಡದೆ ಯಾವದ್ರಸಭರಿತ ಚೆನ್ನಾಗಿ ನೀ ಮಾಡ್ದೀ ॥ ೮೨ ॥

ತಾತ್ಪರ್ಯಃ

ಶ್ರೀ ಮಧ್ವಾಚಾರ್ಯರು ಪರಿಶುದ್ಧವಾದ ಪಾಜಕ ಕ್ಷೇತ್ರದಲ್ಲಿ ಮಧ್ಯಗೇಹರ ಮನೆಯಲ್ಲಿ ಅವತಾರ ಮಾಡಿದಿರಿ. ಏಳನೇ ವರ್ಷದಲ್ಲಿ ಇವರಿಗೆ ಉಪನಯನವಾಯಿತು. ಶ್ರೀ ಅಚ್ಯುತ ಪ್ರೇಕ್ಷಾಚಾರ್ಯರಿಂದ ಸನ್ಯಾಸಾಶ್ರಮ ಸ್ವೀಕರಿಸಿದರು. ನಂತರ ಬದರೀ ಕ್ಷೇತ್ರಕ್ಕೆ ಹೋಗಿ ಶ್ರೀ ವೇದವ್ಯಾಸರಲ್ಲಿ ವಿದ್ಯಾಭ್ಯಾಸ ಮಾಡಿ, ಅವರ ಆಜ್ಞೆ ಪಡೆದು, ಬ್ರಹ್ಮಸೂತ್ರಗಳಿಗೆ ಭಾಷ್ಯ, ಅಣುಭಾಷ್ಯಾ ನ್ಯಾಯವಿವರಣ. ಹತ್ತು ಉಪನಿಷತ್ತುಗಳಿಗೆ ಹತ್ತು ಭಾಷ್ಯ, ಗೀತಾ ತಾತ್ಪರ್ಯನಿರ್ಣಯ, ಮಹಾಭಾರತ ತಾತ್ಪರ್ಯನಿರ್ಣಯ, ದ್ವಾದಶ ಸ್ತೋತ್ರ, ಯತಿ ಪ್ರಣವಕಲ್ಪ, ಜಯಂತಿ ನಿರ್ಣಯ, ಕೃಷ್ಣಾಮೃತ ಮಹಾರ್ಣವ, ಯಮಕ ಭಾರತ, ಸದಾಚಾರ ಸ್ಮೃತಿ, ತಂತ್ರಸಾರ ಸಂಗ್ರಹ, ನರಸಿಂಹನಖಸ್ತುತಿ ಹೀಗೆ ಮೂವತ್ತೇಳು ಸರ್ವಮೂಲಗ್ರಂಥಗಳನ್ನು ರಚಿಸಿದರು. ಇಂಥ ಗ್ರಂಥಕರ್ತರಿಗೆ, ಪೂರ್ಣಪ್ರಜ್ಞಾಚಾರ್ಯರಿಗೆ ನನ್ನ ಅನಂತಾನಂತ ಪ್ರಣಾಮಗಳು.

ಶ್ಲೋಕ(೪೦)

ವಂದೇ ತಂ ತ್ವಾ ಸುಪೂರ್ಣ-ಪ್ರಮತಿ-ಮನುದಿನಾ-ಸೇವಿತಂ ದೇವ ವೃಂದೈ-
ರ್ವಂದೇ ವಂದಾರುಮೀಶೇ ಶ್ರಿಯ ಉತ ನಿಯತಂ ಶ್ರೀಮದಾನಂದತೀರ್ಥಮ್ ।
ವಂದೇ ಮಂದಾಕಿನೀ ಸತ್‌ಸರಿದ-ಮಲಜಲಾಸೇಕ-ಸಾಧಿಕ್ಯಸಂಗಂ
ವಂದೇऽಹಂ ದೇವ ಭಕ್ತ್ಯಾ ಭವಭಯದಹನಂ ಸಜ್ಜನಾನ್ ಮೋದಯಂತಮ್ ॥೪೦ ॥
(ಭಾಮಿನಿ ಷಟ್ಪದಿ)
ಎಲೊ ಪೂರ್ಣಪ್ರಜ್ಞ ಪ್ರಸಿದ್ಧನೆ
ಚಲುವ ನಿನ್ನನು ನಾನು ವಂದಿಪೆ ।
ಬಲು ದಿವಿಜರಿಂದೆಲ್ಲ ಕಡೆಯಲಿ ಪ್ರತಿದಿನದಿ ಸೇವೆ- ।
ಗೊಳುವ ಪರಿಪೂರ್ಣ ಪ್ರಕೃಷ್ಟದ ।
ಹೊಳೆವ ಜ್ಞಾನದ ತೋಷತೀರ್ಥನೆ ।
ಕೊಳುವದೆನ್ನಯ ನಮನ ಪರ ಮಾತು ಮನ ವಿಷಯದಲಿ ॥೮೩ ॥
ತರುವಾಯ ಶಿರಿಯಲ್ಲಿ ನಮನವ
ನಿರುತ ಮಾಳ್ಪಾನಂದತೀರಥ
ಗುರುವೆ ನಿಮಗೊಂದಿಸುವೆ ಭಾಗೀರಥಿ ಅಮಲ ಜಲದೀ
ಶರೀರ ತೊಳೆದ-ದಕಧಿಕ ಸಂಗತಿ
ಮರುತ ಭವ ಭಯ ಸುಡುವಿ ಸಮ- ।
ಜ್ಜನರ ಮೋದಿಪ ದೇವ ನಿನ್ನನು ಭಕ್ತಿಲೊಂದಿಸುವೆ ॥೮೪ ॥

ತಾತ್ಪರ್ಯಃ

ಶ್ರೀ ಪ್ರಾಣದೇವರನ್ನು ಹದಿನಾಲ್ಕು ಲೋಕಗಳಲ್ಲಿರುವ ಎಲ್ಲ ದೇವತೆಗಳು ಮತ್ತು ಭಕ್ತರು ಅತ್ಯಂತ ಭಕ್ತಿಯಿಂದ ಸೇವಿಸುವರು. ಋಜುಗಣಕ್ಕೆ ಸೇರಿದ ಪ್ರಾಣಪತಿಯನ್ನು ದಶಪ್ರಮತಿ, ಪೂರ್ಣಪ್ರಜ್ಞರೆಂದು ಹೊಗಳುತ್ತಿದ್ದಾರೆ. ಬಳಿತ್ಥಾಸೂಕ್ತ ಹಾಗು ಋಗ್ವೇದದಲ್ಲಿ ಪ್ರಾಣದೇವರು ಮಧ್ವ ಎಂಬ ಹೆಸರಿನಿಂದ ಪ್ರಖ್ಯಾತರಾಗಿದ್ದಾರೆ. ಮಧ್ವಶಾಸ್ತ್ರವನ್ನು ಓದಿದವರಿಗೆ ಇಹಲೋಕದಲ್ಲಿ ಪುಣ್ಯಕಾರ್ಯ ಕೊಡುವ ಸುಖ, ಪರ ಲೋಕದಲ್ಲಿ ಮುಕ್ತಿ ಪ್ರಾಪ್ತಿಯಾಗುವದು.

ಗಂಗಾಸ್ನಾನ ಮಾಡುವದಕ್ಕಿಂತ ಅಧಿಕ ಫಲ, ಮಧ್ವಶಾಸ್ತ್ರವನ್ನು ಓದಿದಾಗ ದೊರೆಯುವುದು. ಆನಂದತೀರ್ಥರ ಅಂದರೆ ಶ್ರೀಗುರು ವಾಯುದೇವರ ಶಾಸ್ತ್ರ ಮಹಿಮೆಗಳನ್ನು ಮನನಮಾಡಿದಾಗ ಎಲ್ಲ ಪಾಪಗಳು ತೊಳೆದುಹೋಗಿ ಪಾವನರಾಗುತ್ತೇವೆ. ಕಾರಣ ಶ್ರೀಹರಿಯಲ್ಲಿ ಶ್ರೀಮನ್ ಮಧ್ವಾಚಾರ್ಯರಲ್ಲಿ ಭಕ್ತಿ ಮಾಡಿದಾಗ, ಧ್ಯಾನಮಾಡಿದಾಗ, ಸುಖ-ಆನಂದ, ಜ್ಞಾನ-ಮುಕ್ತಿ ದೊರೆಯುವುದು. ಕಾರಣ ಶ್ರೀಹರಿ -ವಾಯು ಗುರುಗಳನ್ನು ನಿರಂತರ ಧ್ಯಾನಿಸುವಂತೆ, ಸೇವಿಸುವಂತೆ ಪ್ರೇರಣೆ ನೀಡಲಿ ಎಂದು ಪ್ರಾರ್ಥಿಸುತ್ತ ಅನಂತಾನಂತ ಪ್ರಣಾಮಗಳು.

(ಸಮಜ್ಜನರ ಮೋದಿಪ ದೇವ = **ಸಜ್ಜನಾನ್ ಮೋದಯಂತಮ್**) (ಬಲು ದಿವಿಜರಿಂದೆಲ್ಲ ಕಡೆಯಲಿ ಪ್ರತಿದಿನದಿ ಸೇವೆ- ।
ಗೊಳುವ ಪರಿಪೂರ್ಣ ಪ್ರಕೃಷ್ಟದ = **ಸುಪೂರ್ಣ-ಪ್ರಮತಿ-ಮನುದಿನಾ-ಸೇವಿತಂ ದೇವ ವೃಂದೈಃ**)

ಶ್ಲೋಕ(೪೧)

ಸುಬ್ರಹ್ಮಣ್ಯಾಖ್ಯಸೂರೇಃಸುತ ಇತಿ ಸುಭೃಶಂ ಕೇಶವಾನಂದತೀರ್ಥ- ।
ಶ್ರೀಮತ್-ಪಾದಾಬ್ಜ-ಭಕ್ತಃ ಸ್ತುತಿಮಕೃತಹರೇರ್ವಾಯುದೇವಸ್ಯ ಚಾಸ್ಯ ।
ತತ್-ಪಾದಾರ್ಚಾದರೇಣ ಗ್ರಥಿತ-ಪದ-ಲಸನ್ ಮಾಲಯಾ ತ್ವೇತಯಾ ಯೇ ।
ಸಂರಾಧ್ಯಾಮೂ ನಮಂತಿ ಪ್ರತತಮತಿಗುಣಾ ಮುಕ್ತಿ ಮೇತೇ ವ್ರಜಂತಿ ॥೪೧॥

ಇತಿ ಶ್ರೀಮತ್ ಕವಿಕುಲ ತಿಲಕ ತ್ರಿವಿಕ್ರಮ ಪಂಡಿತಾಚಾರ್ಯ-
ವಿರಚಿತ ವಾಯುಸ್ತುತಿಃ ಸಮಾಪ್ತಃ

(ಭಾಮಿನಿ ಷಟ್ಪದಿ)

ಧರಿಗೆ ಸುಬ್ರಹ್ಮಣ್ಯ ವಿದ್ವಾಂ-
ಸರಿಗೆ ಸುತ ಅತ್ಯಂತ ಚತುರ್ಮುಖ
ಹರಿ ನಿಯಾಮಕ ಮೋದತೀರ್ಥರ ಸಂಪತ್ತಿನಾ ಪದ- ।
ಸರಿಸಿಜಕೆ ಅತಿ ಭಕ್ತನಾಗಿಹ
ವರ ತ್ರಿವಿಕ್ರಮ ಪಂಡಿತಾಚಾರ್ಯರು
ದುರಿತಹರ ಶ್ರೀಹರಿಗೆ ವಾತಗೆ ಪೂರ್ವರೀತಿ ಸ್ತುತಿ
ಮಾಡಿದೆನು ಜ್ಞಾನಿಗಳ ನನ್ನಿಂ ॥ ೮೫ ॥

ಶ್ರೀ ಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು

ಶ್ರೀಮತ್ ಜಗನ್ನಾಥ ದಾಸಾರ್ಯರ ಪರಮ ಪ್ರಿಯ ಶಿಷ್ಯರು ಆದ ಲಿಂಗಸುಗೂರು ಅಪರೋಕ್ಷ ಜ್ಞಾನಿಗಳು ಶ್ರೀ ಪ್ರಾಣೇಶವಿಠ್ಠಲರು ವಿರಚಿತ ಭಾಮಿನಿ ಷಟ್ಪದಿ-ಶ್ರೀಹರಿ ವಾಯುಸ್ತುತಿ ಸಮಾಪ್ತ ದಿನಾಂಕ ೨೨.೦೪.೨೦೦೪ ತಾರಣ ೧೯೨೬.
ವೈಶಾಖ ಶು ॥ ತದಿಗೆ ಅಕ್ಷಯ ತೃತೀಯ ಗುರುವಾರ ಅರ್ಪಿತ

(ತಾತ್ಪರ್ಯ) ಶ್ರೀಹರಿ ರುದ್ರದೇವರ ಅನುಗ್ರಹದಿಂದ, ಶ್ರೀಸುಬ್ರಹ್ಮಣ್ಯ ಪಂಡಿತಾಚಾರ್ಯರಿಗೆ ಮಗನಾಗಿ ತ್ರಿವಿಕ್ರಮ ಪಂಡಿತಾಚಾರ್ಯರು ಜನಿಸಿದರು. ಅದ್ವೈತ ಮತದ ಪ್ರಕಾಂಡ ಪಂಡಿತರಾಗಿದ್ದರು. ಆದರೆ ಅವರಲ್ಲಿ ಆ ಸಿದ್ಧಾಂತದ ಬಗ್ಗೆ ಸಂಶಯ ಸಮಸ್ಯೆಗಳಿದ್ದವು. ಶ್ರೀಮಧ್ವಾಚಾರ್ಯರು ಕೇರಳದ "ವಿಷ್ಣು ಮಂಗಲ" ಮಂದಿರಕ್ಕೆ ಸಂಚಾರದಲ್ಲಿ ಬಂದಾಗ, ತ್ರಿವಿಕ್ರಮ ಪಂಡಿತಾಚಾರ್ಯರು ತಮ್ಮ ಸಂಶಯಗಳಿಗೆ ಆಚಾರ್ಯರಿಂದ ಪರಿಹಾರ ಕಂಡುಕೊಂಡು; ಮಧ್ವರಿಗೆ ಶಿಷ್ಯರಾಗಿ, ಶ್ರೀಹರಿ-ವಾಯುಸ್ತುತಿ ರಚಿಸಿ ತಮ್ಮ ಗುರು ಭಕ್ತಿಯನ್ನು ಮೆರೆಸಿದ್ದಾರೆ.
ಮಧ್ವಾಚಾರ್ಯರು ಬದರಿ ನಾರಾಯಣನ ಪೂಜೆ ಮಾಡುವಾಗ ಮೂರು ಅವತಾರಗಳಿಂದ ನಾರಾಯಣನ ಅರ್ಚನೆ ಮಾಡುವದನ್ನು ಕಂಡು ವಿಸ್ಮಿತರಾಗಿ ಅವರ ಮಾಹಾತ್ಮ್ಯೆಯನ್ನು ವಾಯುಸ್ತುತಿಯಲ್ಲಿ ವಿವರಿಸಿದ್ದಾರೆ. ಗೀರ್ವಾಣಿಯ ಶ್ಲೋಕಗಳಿಗೆ ಶ್ರೀ ಪ್ರಾಣೇಶದಾಸರು ಕನ್ನಡ ಭಾಮಿನಿಯ ಕೀರುವಾಣಿಯಲ್ಲಿ ಅನುವಾದ ಅನುಪಮ ರೀತಿಯಲ್ಲಿ ಮಾಡಿದ್ದಾರೆ. ಉಭಯ ಕವಿಗಳಿಗೆ ಮನಃಪೂರ್ವಕ ಅನಂತಾನಂತ ಪ್ರಣಾಮಗಳು.

ಹರಿಃ ಓಂ
ಶ್ರೀ ಲಕ್ಷ್ಮೀನರಸಿಂಹಾಯ ನಮಃ
ಶ್ರೀ ಹರಿ ವಾಯು ಸ್ತುತಿಃ

ಓಂ ಪಾಂತ್ವಸ್ಮಾನ್ ಪುರುಹೂತ-ವೈರಿ-ಬಲವನ್ ಮಾತಂಗ-ಮಾದ್ಯದ್ ಘಟಾ-
ಕುಂಭೋಚ್ಚಾದ್ರಿ-ವಿಪಾಟನಾಧಿಕಪಟು ಪ್ರತ್ಯೇಕ-ವಜ್ರಾಯಿತಾಃ ।
ಶ್ರೀಮತ್-ಕಂಠೀರವಾಸ್ಯ-ಪ್ರತತ-ಸು-ನಖರಾದಾರಿತಾರಾತಿ ದೂರ-
ಪ್ರಧ್ವಸ್ತ-ಧ್ವಾಂತ-ಶಾಂತ-ಪ್ರವಿತತಮನಸಾ ಭಾವಿತಾ ಭೂರಿಭಾಗ್ಯೈಃ ॥ ೧ ॥

ಲಕ್ಷ್ಮೀಕಾಂತ ಸಮಂತತೋಽಪಿ ಕಲಯನ್ ನೈವೇಶಿತುಸ್ತೇ ಸಮಂ
ಪಶ್ಯಾಮ್ಯುತ್ತಮ-ವಸ್ತು ದೂರತರತೋಪಾಸ್ತಂ ರಸೋ ಯೋಽಷ್ಟಮಃ ।
ಯದ್-ರೋಷೋತ್ಕರ-ದಕ್ಷ-ನೇತ್ರ-ಕುಟಿಲ-ಪ್ರಾಂತೋತ್ಥಿತಾಗ್ನಿ ಸ್ಫುರತ್
ಖದ್ಯೋತೋಪಮ-ವಿಸ್ಫುಲಿಂಗ-ಭಸಿತಾಃ ಬ್ರಹ್ಮೇಶಶಕ್ರೋತ್ಕರಾಃ ॥ ೨ ॥

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತ
ನರಸಿಂಹನಖಸ್ತುತಿಸಮೇತ ಶ್ರೀಕವಿಕುಲತಿಲಕತ್ರಿವಿಕ್ರಮಪಂಡಿತಾಚಾರ್ಯವಿರಚಿತ
ಹರಿವಾಯುಸ್ತುತಿಃ ಸಂಪೂರ್ಣಃ

॥ಶ್ರೀ ಮಧ್ವಾಂತರ್ಗತಶ್ರೀಕೃಷ್ಣಾರ್ಪಣಮಸ್ತು ॥

ಶ್ರೀ ಸೀತಾಪತಿ ಶ್ರೀ ರಾಮಚಂದ್ರ ಪ್ರಸನ್ನ
ಶ್ರೀ ಹನುಮದ್ಭೀಮಮಧ್ವಾಂತರ್ಗತ ರಾಮಕೃಷ್ಣವೇದವ್ಯಾಸಾತ್ಮಕ-
ಶ್ರೀಲಕ್ಷ್ಮೀಹಯಗ್ರೀವಾಯ ನಮಃ
ಶ್ರೀಮಧ್ವರಾಜಗುರುಭ್ಯೋ ನಮಃ
ಶ್ರೀ ರಾಘವೇಂದ್ರತೀರ್ಥ ಗುರುಭ್ಯೋ ನಮಃ
ಶ್ರೀ ಲಕ್ಷ್ಮೀನರಸಿಂಹ-ನಖಸ್ತುತಿಃ

ತಾತ್ಪರ್ಯಃ-
ಶ್ರೀ ಹರಿಯು ದೇಶ ಕಾಲ, ಪ್ರಕೃತಿ, ಗುಣಗಣಗಳಲ್ಲಿ ಪರಿಪೂರ್ಣನಾಗಿ, ಸರ್ವತ್ರ ವ್ಯಾಪ್ತನಾಗಿದ್ದಾನೆ-ದೋಷರಹಿತನಾಗಿ ಜ್ಞಾನಾನಂದಮಯ ಅಪ್ರಾಕೃತಶರೀರನಾಗಿದ್ದಾನೆ. ಅನಂತನಾಮ, ಅನಂತರೂಪ, ಅನಂತವ್ಯಾಪಾರ ಮಾಡುವ ಮಂಗಳಾತ್ಮಕನಾಗಿದ್ದಾನೆ. "ಸತ್ಯಂ ವಿಧಾತುಂ ನಿಜಭೃತ್ಯಭಾಷಿತಂ" (ತನ್ನವರಿಗೆ ಕೊಟ್ಟವಚನವನ್ನು ಸತ್ಯ ಮಾಡಲೋಸುಗ) ನ ಮೃಗಂ ನ ಮಾನುಷಂ ಶ್ರೀಮತ್ಕಂಠಿರವಾಸ್ಯ-ಶ್ರೀಲಕ್ಷ್ಮೀಸಮೇತನಾಗಿ, ಕಂಭವನ್ನು ಸೀಳಿ, 'ಕಂಭಾರ್ಕ'ನಂತೆ, ಪ್ರಕಟವಾಗಿದ್ದಾನೆ. ದುರಹಂಕಾರಿಯಾದ ಹಿರಣ್ಯಕಶಿಪುವನ್ನು ಸಂಹಾರ ಮಾಡಿ, ಪ್ರಹ್ಲಾದನನ್ನು ರಕ್ಷಿಸಲು ಕೋಟಿ ಅರ್ಕನಂತೆ ಉದಯಿಸಿದ್ದಾನೆ.

ಆನೆಯ ಕುಂಭ ಸ್ಥಳದಂತೆ ಬೆಳೆದ ಮಿತಿಮೀರಿದ ದುರಹಂಕಾರದ-ಬೆಟ್ಟದಂತೆ ಇರುವ ದೈತ್ಯನ ವಧೆಗಾಗಿ, ನರಸಿಂಹನ ರೂಪತಾಳಿ, ವಜ್ರದ ಆಯುಧಗಳಂತೆ ಇರುವ ಉಗುರುಗಳಿಂದ ದೈತ್ಯನ ಒಡಲನ್ನು ಸೀಳಿದನು. ಎಲ್ಲ ಭಕ್ತರ ಕಷ್ಟ-ದುಃಖಗಳನ್ನು, ದೈತ್ಯರ ಬಾಧೆಯನ್ನು ಪರಿಹರಿಸುವ, ಪರಿಪೂರ್ಣ ಇಚ್ಛಾಶಕ್ತಿಯುಳ್ಳ ಶ್ರೀ ನರಸಿಂಹದೇವರ ವಜ್ರ ಪ್ರಕಾಶಿತ ನಖಗಳು ಸರ್ವಭಕ್ತರ ಸರ್ವ ಅನಿಷ್ಟಗಳನ್ನು ಪರಿಹರಿಸುವವು. ಇಂಥ ನರಹರಿಯ ನಖಗಳು ನನ್ನನ್ನೂ ಕಾಪಾಡಲಿ ಎಂದು ಬೇಡುವೆ.

ಪ್ರಳಯ ಕಾಲದಲ್ಲಿ ಶ್ರೀ ನರಸಿಂಹ ದೇವರ ಮೂರು ಕಣ್ಣುಗಳು ಕೋಪಗೊಂಡು ಕೆಂಡದಂತೆ ಆಗುತ್ತವೆ. ಆ ಕಣ್ಣುಗಳ ಕುಡಿನೋಟದ ತುದಿಯಿಂದ ವಿಸ್ಫುಲಿಂಗಃ(=ಕಿಡಿಗಳು) ಉದುರಿದಾಗ ಬ್ರಹ್ಮಾದಿ ದೇವತೆಗಳ ಸಮೂಹಗಳು ಭಸಿತಾಃ ಭಸ್ಮವಾಗುವವು. ಇಂಥ ಪ್ರಚಂಡ ಶಕ್ತಿಯುಳ್ಳ-ಲೋಕದ ಪ್ರಾಪಕ, ಸ್ಥಾಪಕ, ನಿಯಾಮಕನಾದಂತೆ ಸಂಹಾರಕನು ಶ್ರೀ ಹರಿಯೇ ಆದ್ದರಿಂದ, ಶ್ರೀ ನರಹರಿಯೇ ಸರ್ವೋತ್ತಮನೆಂಬುದು ಸಿದ್ಧವಾಗಿದೆ. ಇದರಂತೆ ಹರಿಯು ದಯಾವಾರಿಧಿಯಾಗಿ ತನ್ನವರಿಗೆ ಕೈವಲ್ಯ-ಸದ್ಗತಿಯನ್ನು ತಾಮಸ ಜೀವಿಗಳಿಗೆ ಅಧೋಗತಿಯನ್ನು ಕೊಡುವ ಏಕೈಕಶಕ್ತಿಯಾಗಿದ್ದು, ಸರ್ವೋತ್ತಮನು, ಪುರುಷೋತ್ತಮನು, ಎಂದು ವೇದಗಳು ಸ್ತುತಿಸುತ್ತಿವೆ. ಇಂಥ ಶ್ರೀ ಹರಿ-ವಾಯು ದೇವರು, ಗುರುಗಳು ನನಗೆ ಭಕ್ತಿಯನ್ನು ಜ್ಞಾನವನ್ನು ಕರುಣಿಸಲೆಂದು ಪ್ರಾರ್ಥನೆಗಳು.

॥ಶ್ರೀ ಮಧ್ವಾಂತರ್ಗತಶ್ರೀಕೃಷ್ಣಾರ್ಪಣಮಸ್ತು ॥

ಶ್ರೀ ವಾಯುದೇವರ ಸ್ತೋತ್ರ

ಶ್ರೀ ಜಗನ್ನಾಥದಾಸರು ರಚಿಸಿದ ''ಹರಿಹಾಮೃತಸಾರ''ದಲ್ಲಿ ಉಕ್ತವಾದ ಶ್ರೀ ವಾಯುದೇವರ ಮಹಿಮಾ ನುಡಿ ಮಂದಾರಗಳಿಂದ ಮಂಗಳಕ್ಕಾಗಿ ಆಯ್ದ ಕೆಲವು ನುಡಿ ಸುಮನಗಳನ್ನು ಅರ್ಪಿಸಲು ಇಲ್ಲಿ ಸಂಗ್ರಹಿಸಿದ್ದೇನೆ. ಮಂಗಳನಾಮ ಗುಣಕ್ರಿಯೆ ರೂಪದ ಶ್ರೀಹರಿ ನಮಗೆ ಸನ್ಮಂಗಳವನ್ನುಂಟುಮಾಡುತ್ತ ಜ್ಞಾನ ಭಕ್ತಿ ಸಾಧನೆಯಲ್ಲಿ ಹೆಚ್ಚು ಹೆಚ್ಚು ಶಕ್ತನಾಗಿಸಲು ನನಗೆ ಅನುಗ್ರಹಿಸುತ್ತಿರಲೆಂದು ಪ್ರಾರ್ಥನೆಯೊಂದಿಗೆ ಪ್ರಣಾಮಗಳನ್ನು ಸಲ್ಲಿಸುವೆ.

ಹ.ಕ.ಅ.ಸಾ.

ಶ್ರೀ ರಮಣಿ ಕರ ಕಮಲ ಪೂಜಿತ
ಚಾರು ಚರಣ ಸರೋಜ ಬ್ರಹ್ಮಸ-
ಮೀರವಾಣಿ ಫಣೀಂದ್ರ ವೀಂದ್ರ ಭವೇಂದ್ರ ಮುಖವಿನುತ
ನೀರಜ ಭವಾಂಡೋದಯ ಸ್ಥಿತಿ
ಕಾರಣನೆ ಕೈವಲ್ಯದಾಯಕ
ನಾರಸಿಂಹನೆ ನಮಿಪೆ ಕರುಣಿಪುದೆಮಗೆ ಮಂಗಳವ ॥೧॥
ಆರು ಮೂರೆರಡೊಂದು ಸಾವಿರ
ಮೂರೆರಡು ಶತಶ್ವಾಸ ಜಪಗಳ
ಮೂರು ವಿಧ ಜೀವರೊಳಗಬ್ಜಜ ಕಲ್ಪ ಪರಿಯಂತ
ತಾ ರಚಿಸಿ ಸಾತ್ವರಿಗೆ ಸುಖ ಸಂ-
ಸಾರ ಮಿಶ್ರರಿಗಧಮ ಜನರಿಗಪಾರ ದುಃಖಗಳೀವ ಗುರು ಪವಮಾನ ಸಲಹೆಮ್ಮ ॥
ಕ್ಷಿತಿಯೊಳಗೆ ಮಣಿಮಂತ ಮೊದಲಾ-
ದತಿ ದುರಾತ್ಮರು ಒಂದಧಿಕ ವಿಂ-
ಶತಿ ಕುಭಾಷ್ಯವ ರಚಿಸೆ ನಡುಮನೆಯೆಂಬ ಬ್ರಾಹ್ಮಣನ ।
ಸತಿಯ ಜಠರದೊಳವತರಸಿ ಭಾ-
ರತಿರಮಣ ಮಧ್ವಾಭಿಧಾನದಿ
ಚತುರ ದಶಲೋಕದಲಿ ಮೆರೆದಪ್ರತಿಮಗೊಂದಿಸುವೆ ॥
ಪಂಚ ಭೇದಾತ್ಮಕಪ್ರಪಂಚಕೆ
ಪಂಚ ರೂಪಾತ್ಮಕನೆ ದೈವಕ
ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ
ಪಂಚ ವಿಂಶತಿ ತತ್ವ ತರತಮ
ಪಂಚಿಕೆಗಳನು ಪೇಳ್ದ ಭಾವೀ ವಿ-
ರಂಚಿಯೆನಿಪಾನಂದ ತೀರ್ಥರ ನೆನೆವೆನನುದಿನವು

(ವಾಮನಪುರಾಣದಲ್ಲಿ ಹೇಳಿರುವ ೧೦೦ ಜನ ಋಜುಗಳ ನಾಮಗಳನ್ನು ಶ್ರೀಹರಿಕಥಾಮೃತಸಾರದಲ್ಲಿ ಜಗನ್ನಾಥದಾಸರು ಸಂಗ್ರಹಿಸಿರುವರು. ಅದರ ಪಾಠ ಕೆಳಕಂಡಂತಿದೆ)

ಪಾಹಿ ಕಲ್ಕಿ ಸುತೇಜ ದಾಸನೆ ಪಾಹಿ ಧರ್ಮಾಧರ್ಮಖಂಡನೆ
ಪಾಹಿ ವರ್ಚಸ್ವಿಯೆ ಋಷಣ ನಮೋ ಸಾಧು ಮಹಿಪತಿಯೇ ।
ಪಾಹಿ ಸದ್ಧರ್ಮಜ್ಞ ಧರ್ಮಜ ಪಾಹಿ ಸಂಪೂರ್ಣ ಶುಚಿ ವೈಕೃತ
ಪಾಹಿ ಅಂಜನ ಸರ್ಷಪನೆ ಖರ್ಪಟನೆ ಶ್ರದ್ಧಾಢ್ವ ॥

ಪಾಹಿ ಸಂಧ್ಯಾನ ಮಹಜ್ಞಾನನೆ ಪಾಹಿ ಮಹವಿಜ್ಞಾನ ಕೀರ್ತನ
ಪಾಹಿ ಸಂಕೀರ್ಣಾಖ್ಯ ಕತ್ಥನ ಪಾಹಿ ಬುದ್ಧಿ ಜಯ ।
ಪಾಹಿ ಮಾಹತ್ತರ ಸುವೀರ್ಯನೇ ಪಾಹಿ ಮಾಂ ಮೇಧಾವಿ ವಿಜಯಾಜಯ
ಪಾಹಿ ಮಾಂ ರಂತಿಮ್ನ ಮನು ಮಾಂ ಪಾಹಿ ಮಾಂ ಪಾಹಿ ॥

ಪಾಹಿ ಮೋದ ಪ್ರಮೋದ ಸಂತನೆ
ಪಾಹಿ ಆನಂದ ನಮೋ ತುಷ್ಟನೆ
ಪಾಹಿ ಮಾಂ ಚಾರ್ವಂಗ ಚಾರು ಸುಬಾಹು ಚಾರುಪದ
ಪಾಹಿ ಪಾಹಿ ಸುಲೋಚನನೆ ಮಾಂ
ಪಾಹಿ ಸಾರಸ್ವತ ಸುವೀರನೆ
ಪಾಹಿ ಪ್ರಾಜ್ಞನೆ ಕಪಿ ಅಲಂಪಟ ಪಾಹ ಸರ್ವಜ್ಞ ॥

ಪಾಹಿ ಮಾಂ ಸರ್ವಜಿತ್ ಮಿತ್ರನೆ
ಪಾಹಿ ಪಾಪವಿನಾಶಕನೆ ಮಾಂ
ಪಾಹಿ ಧರ್ಮವಿನೇತ ಶಾರದ ಓಜ ಸುತಪಸ್ವಿ ।
ಪಾಹಿ ಮಾಂ ತೇಜಸ್ವಿ ನಮೋ ಮಾಂ
ಪಾಹಿ ದಾನಸುಶೀಲ ನಮೋ ಮಾಂ
ಪಾಹಿ ಯಜ್ಞ ಸುಕರ್ತ ಯಜ್ವೀ ಯಾಗವರ್ತಕನೆ ॥
ಪಾಹಿ ಪ್ರಾಣ ತ್ರಾಣ ಅಮರುಷಿ
ಪಾಹಿ ಮಾಂ ಉಪದೇಷ್ಟ ತಾರಕ
ಪಾಹಿ ಕಾಲ ಕ್ರೀಡನ ಸುಕರ್ತಾ ಸುಕಾಲಜ್ಞ।
ಪಾಹಿ ಕಾಲ ಸುಸೂಚಕನೆ ಮಾಂ
ಪಾಹಿ ಕಲಿ ಸಂಹರ್ತೃ ಕಲಿ ಮಾಂ
ಪಾಹಿ ಕಾಲ ಸ್ವಾಮರೇತ ಸದಾರತ ಸುಬಲನೆ

ಪಾಹಿ ಪಾಹಿ ಸಹೋ ಸದಾಕಪಿ
ಪಾಹಿ ಗಮ್ಯ ಜ್ಞಾನ ದಶಕಲ
ಪಾಹಿ ಮಾಂ ಶ್ರೋತವ್ಯ ನಮೋ ಸಂಕೀರ್ತವ್ಯ ನಮೊ
ಪಾಹಿ ಮಾಂ ಮಂತವ್ಯ ಕವ್ಯನೇ
ಪಾಹಿ ದ್ರಷ್ಟವ್ಯ ನಮೋ ಸಖ್ಯನೆ
ಪಾಹಿ ಗಂತವ್ಯ ನಮೋ ಕ್ರವ್ಯನೆ ಪಾಹಿ ಸ್ಮರ್ತವ್ಯ

ಪಾಹಿ ಸೇವ್ಯ ಸುಭವ್ಯ ನಮೊ ಮಾಂ
ಪಹಿ ಸ್ವರ್ಗವ್ಯ ನಮೋ ಭಾವ್ಯನೆ
ಪಾಹಿ ಮಾಂ ಜ್ಞಾತವ್ಯ ನಮೋ ವಕ್ತವ್ಯ ಗವ್ಯ ನಮೋ
ಪಾಹಿ ಮಾಂ ಲಾತವ್ಯ ವಾಯುವೆ
ಪಾಹಿ ಬ್ರಹ್ಮ ಬ್ರಾಹ್ಮಣ ಪ್ರಿಯ
ಪಾಹಿ ಪಾಹಿ ಸರಸ್ವತೀಪತೆ ಜಗದ್ಗುರವರ್ಯ

ವಾಮನ ಪುರಾಣದಲಿ ಪೇಳಿದ
ಈ ಮಹಾತ್ಮರ ಪರಮ ಮಂಗಳ
ನಾಮಗಳ ಸಂಪ್ರೀತಿ ಪೂರ್ವಕ ನಿತ್ಯ ಸ್ಮರಿಸುವರ
ಶ್ರೀಮನೋರಮನವರು ಬೇಡಿದ
ಕಾಮಿತಾರ್ಥಗಳಿತ್ತು ತನ್ನ ತ್ರಿ-
ಧಾಮದೊಳಗನುದಿನದಲಿಟ್ಟಾನಂದ ಪಡಿಸುವನು

ಈ ಸಮೀರಗೆ ನೂರು ಜನ್ಮ ಮ-
ಹಾ ಸುಖ ಪ್ರಾರಬ್ಧ ಭೋಗ ಪ್ರ-
ಯಾಸವಿಲ್ಲದಲ್ಲೈದಿದನು ಲೋಕಾಧಿಪತ್ಯವನು ।
ಭೂಸುರನ ಒಪ್ಪಿಡಿಯವಲಿಗೆ ವಿ-
ಶೇಷಸೌಖ್ಯವನಿತ್ತದಾತನ
ದಾಸವರ್ಯನು ಲೋಕಪತಿಯೆನಿಸುವುದು ಅಚ್ಚರಿಯೇ ॥

ಏನು ಧನ್ಯರೋ ಬ್ರಹ್ಮ ಗುರುಪವ-
ಮಾನರೀರ್ವರು ಈ ಪರಿಯಲಿ-
ರಮಾನಿವಾಸನ ವಿಮಲಲಾವಣ್ಯಾತಿಶಯಗಳನು ।
ಸಾನುರಾಗದಿ ನೋಡಿ ಸುಖಿಪ ಮ-
ಹಾನುಭಾವರ ಭಾಗ್ಯವೆಂತೊ ಭ-
ವಾನಿಧವನಿಗಸಾಧ್ಯವೆನಿಸಲು ನರರ ಪಾಡೇನು ॥


ಆ ಪಿತಾಮಹ ನೂರು ಕಲ್ಪ ರ-
ಮಾಪತಿಯ ಗುಣ ಜಪಿಸಿ ಒಲಿಸಿ ಮ-
ಹಾಪರಾಕ್ರಮ ಹನುಮ ಭೀಮಾನಂದಮುನಿಯೆನಿಸಿ ।
ಆ ಪರಬ್ರಹ್ಮನ ಸುನಾಭೀ-
ಕೂಪಸಂಭವನಾಮದಲಿ ಮೆರೆ-
ವಾಪಯೋಜಾಸನ ಸಮೀರರಿಗಭಿನಮಿಪೆ ನಿತ್ಯ ॥

ಘೋಟಕಾಸ್ಯನ ಮಡದಿಗಿಂತಲಿ
ಹಾಟಕೋದರ ಪವನರೀರ್ವರು
ಕೋಟಿ ಗುಣದಿಂದಧಮರೆನಿಪರು ಆವ ಕಾಲದಲಿ ।
ಖೇಟಪತಿ ಶೇಷಾಮರೇಂದ್ರರ
ಸಾಟಿ ಮಾಡದೆ ಶ್ರೀಶನ ಕೃಪಾ-
ನೋಟದಿಂದಲಿ ಸರ್ವರೊಳು ವ್ಯಾಪಾರ ಮಾಡುವರು ॥

ಅನಿಲ ಸ್ಥಿತಿ ವೈರಾಗ್ಯ ನಿಧಿ ರೋಚನ ವಿಮುಕ್ತಿಗ ನಂದ ದಶಮತಿ
ಅನಿಮೆಷೇಶಾನಿದ್ರ ಶುಚಿಸತ್ವಾತ್ಮಕ ಶರೀರ ।
ಅಣುಮಹದ್ರೂಪಾತ್ಮಕಾಮೃತ ಹನುಮದಾದ್ಯವತಾರ - ಪದ್ಮಾ
ಸನ ಪದವಿ ಸಂಪ್ರಾಪ್ತ ಪರಿಸರ ಆಖಣಾಶ್ಮಸಮ ॥

ಪುರುಷ ಬ್ರ ಹ್ಮ ವಿರಿಂಚಿ ಮಾಹ-
ನ್ಮರುತ ಮುಖ್ಯಪ್ರಾಣ ಧೃತಿ ಸ್ಮೃತಿ
ಗುರುವರ ಮಹಾಧ್ಯಾತ ಬಲ ವಿಜ್ಞಾತ ವಿಖ್ಯಾತ ।
ಗರಳಭುಕ್ ಭವರೋಗಭೇಷಜ
ಸ್ವರವರಣ ವೇದಸ್ಥ ಜೀವೇ-
ಶ್ವರ ವಿಭೀಷಣ ವಿಶ್ವಚೇಷ್ಟಕ ವೀತಭಯ ಭೀಮ ॥

ಶ್ರೀ ಮಧ್ವಾಂತರ್ಗತ ಶ್ರೀ ಕೃಷ್ಣಾರ್ಪಣಮಸ್ತು



सुधीजनसुमन्दारं सुधीन्द्रसुतसुप्रियम् ।
सुशमीन्द्रगुरुं वन्दे सुजयीन्द्रकरोद्भवम् ॥